ಜನಶಕ್ತಿ

ಮಿಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 44

ರೂ. 5/-

ನವೆಂಬರ್ 01, 2009

ಕನ್ನಡ ವಾರಪತ್ರಿಕೆ





ಆಹಾರ ವ್ಯಾಪಾರದಲ್ಲಿ ಜೂಜಾಟ
ಜನತೆಗೆ ಬೆಲೆ ಏರಿಕೆಯ ಪ್ರಾಣ ಸಂಕಟ



ರೇಷನ್ ಕಾರ್ಡ್ :
ಫುಟ್‌ಬಾಲ್ ಆದ ಜನ

ತಲೆ ಎತ್ತಿದೆ ಮತ್ತೆ
ಹಿಂದುತ್ವ ಭಯೋತ್ಪಾದನೆ



ಆನೆಯ ಹೊಟ್ಟೆಯಲ್ಲಿ
ಎಂಥಾ ಲದ್ದಿ !!

ಅಂಗನವಾಡಿ ನೌಕರರ ಸಮ್ಮೇಳನ
ಚಳುವಳಿಯ ದಾಪುಗಾಲು



ಆಹಾರದ ಹಕ್ಕಿಗಾಗಿ ಆಂದೋಲನ

ಕಾಚಕ್ಕಿ

ಇದು ದಲಿತ ಸಾಹಿತಿ ಲಕ್ಷ್ಮಣ್ ಅವರ ಆತ್ಮಕತೆ 'ಸಂಬೋಳಿ'ಯ ಆಯ್ದ ಭಾಗ. ಲಕ್ಷ್ಮಣರ ಈ ಜೀವನಾನುಭವ ಹಸಿವಿನ ಸಂಕಟ ಏನು ಎಂಬುದನ್ನು ಹೃದಯಸ್ಪರ್ಶಿಯಾಗಿ ಮನಗಾಣಿಸುವಂತಿದೆ.

ಆ ವರ್ಷ ರಾಗಿ ತೆನೆ ಕಾಚಕ್ಕಿಗೆ ಬಂದಿದ್ದ ಕಾಲ ಎಳ್ಡುದಿನ್ದಿಂದ ನಮ್ಮನೆ ಒಲೆ ಬೆಂಕಿ ಕಂಡಿರ್ಲಿಲ್ಲ. ಎಳ್ಡು ದಿನ್ದಿಂದ ಸೂರ್ಯ ಬಾಣದಾಗೆ ಕಳ್ದೋಗ್ಬುಟ್ಟಿದ್ದ. ಮಳೆ ನೋಡಿದ್ರೆ ಊದ್ಕಂಡು ಊದ್ಕಂಡು ಬರ್ತಾನೇ ಇತ್ತು. ದನ, ಕರ, ಮನಸ್ರು ಆಚ್ಗೆ ತಲೆ ಹಾಕಾಕೆ ಈಕರಿಸ್ತಿದ್ರು. ನಮ್ಮನೆ ಸೋರಿ ಸೋರಿ ಮನೆ ತುಂಬ ನೀರು ನಿಂತ್ಕಂಡ್ಬುಟ್ಟಿತ್ತು. ನಮ್ಗೆ ಕುಂತ್ಕಳಾಕೆ ನಿಂತ್ಕಳಾಕೆ ಜಾಗ ಇಲ್ದಂಗಾಗಿತ್ತು. ಹಿಟ್ಟನ್ಮುಕ ನೋಡಿ ಎಳ್ಡು ದಿನವಾಗಿತ್ತು. ಹೊಟ್ಟೆ ಲಾವ್ ಲಾವ್ ಅನ್ತಿತ್ತು. ರಾತ್ರೆ ಬರೇ ನೀರ್ಕುಡ್ಕಂಡು ಮನಿಕಂಡಿದ್ದೋ, ಹೊಟ್ಟೆ ಹಸಿವಿಗೆ ನಿದ್ದೆ ಯಡರ್ಕಂಡಿತ್ತು. ಹಸಿವಿನಿಂದ ಬಳಲಿ ಆಯಾಸಗೊಂಡಿದ್ದೆ. ಹಾಳಾದ ಚಳಿಗೆ ಎಷ್ಟೇ ಗೂಡರಿಸ್ಕಂಡು ಮನಿಕಂಡಿದ್ರೂ ಮೈನಡುಗ್ತಿತ್ತು.

ಸರೋತ್ನಾಗೆ ಹೊಟ್ಟೆ ಒಳ್ಗಡೆ ಸಂಕಟ ಶುರ್ವಾಗಿತ್ತು. ಅಳಲೂ ಶಕ್ತಿ ಇಲ್ದೆ ಒಳ್ಳಾಡ್ತಿದ್ದೆ. ನನ್ನಮ್ಮ ನನ್ಗೆ ನೀರ್ಕುಡಿಸಿದ್ರು. ಇದ್ಕಿದಂತೆ ಹೊಟ್ಟೆ ಒಳ್ಗೆ ತೊಳಸ್ತಿತ್ತು. ವಾಂತಿ ಬರ್ಲಿಲ್ಲ. ಸಂಕಟ ಜಾಸ್ತಿಯಾಗಿ ಪ್ರಾಣ ಹೋದಂಗಾಗ್ತಿತ್ತು. ಅರ್ಧಜ್ಞಾನ ತಪ್ದಂಗಾಗ್ತಿತ್ತು. ಕಣ್ಗಳು ಮಂಜು ಮಂಜಾಗಿದ್ದವು.

"ಅಯೋ ದೇವ್ರೆ ನಮ್ಕಂದಮ್ಮ ಹೊಟ್ಟೆಗಿಲ್ದೆ ಸತ್ತೋತಾ ಅದಲ್ಲಪ್ಪಾ. ಪರ್ಮಾತ್ಮ ಈಗೇನಾಡ್ಲಪ್ಪಾ." ತಲೆ ತಲೆ ಚಚ್ಕೊಂಡು ನನ್ನಮ್ಮ ಅಲಾಪಿಸ್ತಿತ್ತು. ನನ್ನಪ್ಪ ಯಾಗ್ರೂ ಏನೂ ಹೇಳ್ದಿರಾ ಕೇಳ್ದಿರಾ ಸುರಿವ ಮಳೆ ಕತ್ಲಾಗೇನೇ ಆಚ್ಗೋಗಿದ್ರು.

ಎಷ್ಟೋ ಹೊತ್ತು ಆದ್ಮೇಲೆ ಎರಡ್ ಕೈಯಾಗೂ ಎರಡ್ಕಟ್ಟು ತೆನೆ ಹಿಡ್ಕಂಡು ಬಂದ್ರು. "ತೆನೆ ಕಾಸಿ ಉಜ್ಕೊಡ್ತಿನಪ್ಪಾ ತಿಂದು ನೀರ್ಕುಡಿವಂತೆ." ನನ್ನಮ್ಮ ನನ್ಗೆ ಸಮಾಧಾನ ಹೇಳ್ತು. ಸರಕ್ಕಂಥ ಒಲ್ಗೆ ಬೆಂಕಿಯಾಕಿ ತೆನೆಗಳ್ನ ಬೆಂಕಿಯಲ್ಲಿ ಕಾಸಿ ಮರ್ಕೆ ಉಜ್ಕಂಡು ಕೇರಿ, ಉರುಬಿ ಎಲ್ಲಾನ್ನೂ ಎಬ್ಬುರ್ಸಿ ತಟ್ಟೆ, ಮುಚ್ಚೆ ಬಟ್ಟೆಯಲ್ಲಿ ಏಳು ಗುಡ್ಡೆ ಮಾಡಿದ್ರು. ಒಬ್ಬೊಬ್ರು ಒಂದೊಂದ್ನ ತಕೊಂಡು ತಿನ್ತಿದ್ದೋ. "ಕೊಕ್ಕಕಾ ಕೋ" ಕೋಳಿ ಕೂಗಿತ್ತು. ನೀರ್ಕುಡಿದು ಯಂಗಂದ್ರೆ ಅಂಗೆ ಎಲ್ಲಂದ್ರೆ ಅಲ್ಲೇ ಮುದರ್ಕಂಡಿದ್ದೋ. ಹೊತ್ತುಟ್ಟಿ ಬಾರುದ್ನ ಬಂದಿದ್ದರೂ ಸುಖನಿದ್ದೆ ನನ್ನಿಂದ ದೂರವಾಗಿರ್ಲಿಲ್ಲ.

ಆ ಹೊತ್ತು ಶನಿವಾರ ಶಾಲೆಗೆ ಅರ್ಧ ದಿನ. ನಮ್ಮಟ್ಟಿಯ ಬೈರ, ನಂಜ, ನಾನು ನಾರಾಯಣಿ ಕರೆಕಲ್ಲು ಗುಟ್ಟೆ ಮೇಲೆ ಕುತ್ಕಂಡು ಮೇಸ್ತ್ರೀಯಪ್ನೋರ ಹೊಲ್ದಾಗೆ ರಾಗಿ ತೆನೆ ಕದಿಯಾಕೆ ಯೋಚ್ನೆ ರೂಪಿಸಿ ಹೊಲ್ಕೆ ನುಗ್ದೋ.

"ಯಾವನ್ರೋ ಅವ್ನು ಬೋಳಿ ಮಕ್ಳ?" ಒಂದು ಹೆಣ್ಣು ಸ್ವರ ಗದರ್ತು. ನಾವು ಜಿಂಕೆಗಳಂತೆ ಓಡಿ ಓಡಿ ಬೇಲಿ ನೆಗೆದು ನಾಲ್ಕು ಜನ್ರೂ ನಾಲ್ಕು ದಿಕ್ಕುಗಳಾಗಿದ್ದೋ. ರವಷ್ಟೊತ್ತು ಆದ್ಮೇಲೆ ಬೈರ ದೊಡ್ಡುಗ್ಟೆಯ ಮೇಲೆ ನಿಂತ್ಕಂಡು ಸಿಳ್ಳೆ ಹಾಕ್ದ. ನಾವೆಲ್ಲಾ ತಿರ್ಗಾ ಅಲ್ಲಿ ಸೇರ್ಕಂಡಿದ್ದೋ. 'ಏನ್ರೋ ಮಾಡೋದೀಗಾ? ಕೆಲ್ಸ ಕೆಟ್ಟೋಯ್ತಲ್ಲಾ?'' ನಾರಾಯಿಣಿಯ ಗಂಟ್ಲು ಕೊರ್ಗುಟ್ಟು.

"ಸುಂಕೇನಳ್ಳಿ ಗೌಡ್ರ ಹೊಲದ್ಕಡೆ ಹೋಗಾನ" ನಂಜ ಸೂಚಿಸ್ದ. ಒಬ್ರಿಗೆ ಒಬ್ರು ಸಂಬಂಧ ಇಲ್ದಂತೆ ಅಷ್ವಷ್ಟು ದೂರ್ದಿಂದ ಸುಂಕೇನಳ್ಳಿ ಗೌಡ್ರ ಹೊಲ್ದತ್ರಿಕೆ ಹೋದೊ. ನಂಜ ಬೇವಿನ್ಮರ್ಕತ್ತಿ ಸುತ್ತಾ, ಮುತ್ತಾ ನೋಡ್ದಾ. ಕೈ ಸನ್ನೆ ಮಾಡ್ದ. ಎಲ್ಲರೂ ಬೇಲಿ ಒಳ್ಗಡೆ ನುಗ್ಗಿ ರಾಗಿ ತೆನೆಗಳನ್ನಾ ಇಜ್ಕಂಡು ಒಬ್ರಿಗೆ ಒಬ್ರು ಸೈಗೆ ಮಾಡ್ಕಂಡು ತೆನೆ ಕಟ್ಗಳ್ನ ತಿಗದಿಂದ ಮುಚ್ ಮಡಿಕಂಡು ಹಳ್ಳಕ್ಕೆ ಇಳ್ದು ಒಬ್ರ ಮುಖ ಒಬ್ರು ನೋಡ್ಕಂಡು ನಿನಗಗ್ತಿದ್ದೋ ಪಾಪ ಬೈರನ್ಕಾಲ್ಗೆ ಮುಳ್ಳು ತಿವ್ಕಂಡ್ಬುಟ್ಟಿತ್ತು. ಅದ್ನ ನಾನು ತೆಗಿತಿದ್ದೆ.

"ಇಲ್ಕೆಳ್ರೋ ಯಂಗೂ-ಆ ಹೊಲ್ದತ್ರಾ ಯಾರೂ ಇಲ್ಲಾ ಬೇಲಿಯಾಗೆ ಸೌದೆ ಮುರ್ಕಂಡು ಬಂದ್ಬುಡಾನ ತೆನೆ ಕಾಸಾಕೆ" ನಂಜ ಹೇಳ್ದ. ನಾನು, ನಂಜ ಕಳ್ಳ ಬೆಕ್ನಂಗೆ ಹಜ್ಜೆ ಹಾಕ್ತಾ ಸೌದೆಗಳ್ನ ಎತ್ಕಂಡು ಬಂದೋ, ಅಷ್ಟೊತ್ಗೆ ನಾರಾಯಣಿ ಬೆಂಕಿಕಡ್ಡಿ, ಹಸಿಮೆಣಸಿನ್ಕಾಯಿ ವಂಚ್ಕಂಡು ಬಂದ.

ಬೆಂಕಿ ಧಗಧಗ ಉರಿತಾ ಇತ್ತು. ನಾವು ಫಕಫಕಾ ನಗ್ತಾ ತೆನೆಗಳ್ನಾ ಬೆಂಕಿಯಲ್ಲಿ ಕಾಯಿಸ್ತಿದ್ದೋ. "ತೆನೆಗಳ್ಳ ಯಾವುದ್ಕೆ ಉಜ್ಜೋದೋ?" ನಾರಾಯ್ಣಿ ಕೇಳ್ದ.

ಎಲ್ರೂ ಮೇಲ್ಕೆ ಕೆಳಿಕೆ ನೋಡ್ತಿದ್ರು.

ನಾನು ಸರಕ್ಕಂಥ ಕುಡ್ತಾ ಬಿಚ್ಚಿ ನೆಲದ್ಮೇಲಾಸಿದ್ದೆ. ನಾವೆಲ್ಲ ಸಡಗರದಿಂದ ಬೆಂಕಿಯಲ್ಲಿ ತೆನೆ ಕಾಸೋದು ಕುಡುತುದ್ಮೇಲೆ ಉಜ್ಜೋದು ಮಾಡ್ತಿದ್ದೋ. ಹಾಳಾದ ಬಿಸ್ತು ನನ್ನ ಬರೇ ಮೈನ ಸೂಜಿ ಚುಚ್ದಂಗೆ ಚುಚ್ಚಿತ್ತು.

ಬೈರ ಕೈಯಾಗ್ನ ತೆನೆಯಿಂದ ನಂಜನ್ನ ವಡಿಯಾಕೋದ, ಬೆಂಕಿ ಕೆಂಡ ನಾರಾಯಿಣಿ ತೊಡೆ ಮೇಲೆ ಬಿತ್ತು. ಅವನು "ಅಯ್ಯಯೋ" ಅನ್ಕಂಡು ಕೈಯ್ನಿಂದ ಕೊಡವ್ದ ಇನ್ನೊಂದು ದೊಡ್ಡ ಕೆಂಡ ಕುಡ್ತಾದ ಮೇಲೆ ಬಿದ್ದು ಕುಡ್ತಾ ಸುಟ್ಟೋಯ್ತು.

"ಇದ್ದಿದೊಂದು
ಕುಸ್ತಾ ಸುಟ್ಟೋಯ್ತಲ್ಲಪ್ಪೋ
ನಮ್ಮಮ್ಮುನ್ಗೆ
ನಾನು
ಯಂಗೆ ಮುಖ ನೋಡಿಸ್ಲಪ್ಪಾ?
ಇಸ್ಕೋಲ್ಗೆ
ಯಂಗೋಗ್ಲಪಾ...?

ಮುಖ ಮುಚ್ಕೊಂಡು ಶಿವನ ಗೋಳು ಮಾಡ್ತಿದ್ದೆ. ಎಲ್ಲರೂ ನನ್ನ ಸಮಾಧಾನ ಪಡಿಸ್ತಿದ್ದರು.

"ಲೇ ಕಾಚಕ್ಕಿನ ಬೆಂಕಿಗೆ ಸುರುದ್ಬುಡ್ರೋ" ಬೈರ ಅಳಮುಖ ಮಾಡ್ಕಂಡು ಹೇಳ್ದ.

ನನ್ನೊಟ್ಟೆ ಒಂದೇ ಸಮ್ನೆ ತಾಳ ಹಾಕ್ತಿತ್ತು. ಅತ್ತು ಅತ್ತು ಸಾಕಾಗಿ ನನ್ಗೆ ನಾನೇ ಸಮಾಧಾನ ಪಟ್ಕಂಡೆ.

ಇರಾ ಬರಾ ತೆನೆಗಳ್ನ ಕಾಸಿ. ಉಜ್ಜಿ ಹಸಿಮೆಣಸಿನ್ಕಾಯಿಗಳ್ನಾ ಗಿಲ್ಲಾಕಿ ಒಂದು ಬೆಣಚು ಕಲ್ನಾ ಬೆಂಕಿಯಲ್ಲಿ ಸುಟ್ಟು ಕಾಚಕ್ಕಿ ಮೇಲಾಕಿ ಚೆನ್ನಾಗಿ ತಿರುಗ್ಸಿ ನಾಲ್ಕು ಗುಡ್ಡೆಗಳ್ನಾ ಹಾಕಿದ್ದೋ, ನನ್ನಾಲ್ನ ಗುಡ್ಡೆಗೆ ರವಷ್ಟು ಜಾತಿನೇ ಹಾಕಿದ್ರು.

ಚಡ್ಡಿ ಜೋಬು ಕುಡ್ತಾದ ಜೋಬ್ಗಳ್ನ ತುಂಬ್ಕಂಡು ತಿಂದಿದ್ದೋ. ಹೊತ್ತು ಮುಣ್ಗಿ ಕತ್ಲಾಗುವವರೆಗೂ ಕರೇಗುಟ್ಟೆ ಬಂಡೆ ಮೇಲೆ ಮನಿಕಂಡಿದ್ದು ಕತ್ಲಾದ ಅವ್ರವ್ರ ಮನೆ ಅವ್ರವ್ರು ಸೇರ್ಕಂಡಿದ್ದೋ.

ಹೊತ್ತಾರೆ ನನ್ನಮ್ಮ ನನ್ನನ್ನು ಬೈಯ್ಕ ಬೈಯ್ಕಂಡು ಆ ಕುಡುತ್ತೆ ತ್ಯಾಪೆ ಹಾಕ್ಕೊಟ್ಟಿತ್ತು ಇಕ್ಕಂಡು ಇಸ್ಕೋಲ್ಗೋಗ್ತಿದ್ದೆ. ನಮ್ಮ ಶಾಲ ಹುಡುಗ್ರು "ಕಾಚಕ್ಕಿ ತಿನೋಕೋಗಿ ಕ ಸುಟ್ಟಾಕೊಂಡ ಬೂಪ" ಅನ್ತಿದ್ರು.

ಹಸಿವಿನ ಹೆಬ್ಬಾವು ನಮ್ಮಮನೆಯವರ ಇಷ್ಟಿಷ್ಟೇ ನುಂಗುತ್ತಿತ್ತು. ನನ್ನಪ್ಪ ನನ್ನಮ್ಮರಿಗೆ ತೋಚದಾಗಿ ನನ್ನನ್ನು ನಾಗಪ್ಪಗೌಡರ ಮನೆಯ ಜ ಸೇರಿಸಿದರು. ಗೌಡರ ಮನೆಯ ಹಿತ್ಲಾಗಿನ ಕೋಳ 'ಕೊಕ್ಕಕಾಕೋ' ಕೂಗ್ದಂಗೆಲ್ಲಾ ನನ್ನ ತಲೆ ಮೆ ಏನೋ ಬಿದ್ದಂಗಾತಿ ರವಷ್ಟು ರವಷ್ಟೇ ಎಚ್ಚರವಾ ಯಾರಾದ್ರೂ 'ಏನೋ ಎಷ್ಟೊತ್ತೋ ಮನಿಕಾಳಾ ಗದರಿದರೆ ಯಾರೋ ಚಾಟಿಯಿಂದ ಹೊಡೆದಂ ದಡಕ್ಕಾಂಥಾ ಎದ್ದು, ಎರಡೂ ಕೈಗಳನ್ನು ಉಜ್ಜ 'ಸ್ವಾಮಿ ನಾರಾಯಣ ಪರಮಾತ್ಮ' ನನ್ನ ಕೈಗ ನಾನೇ ನೋಡ್ಕಂಡು ಬಲ್ಗಡೆಗೆ ತಿರುಗಿಕೊ ಎದ್ದೇಳುತ್ತಿದ್ದಾಗ 'ಮಗ ಎದ್ದೇಳಪ್ಪಾ ಇಸ್ ಹೊತ್ತಾತದೆ. ಇನ್ನಾ ಎಷ್ಟೊಂದು ದೂರ ನಡ್ ಹೋಗ್ಬೇಕಲ್ಲಾ. ಬಲಗಡೆಗೆ ತಿರುಗಿಕೊ ಎದ್ದೇಳಪ್ಪಾ ದೇವರ ಪಟಾ ನೋಡು..." ನ ಮಾತುಗಳು ಕಿವಿಯಲ್ಲಿ ಮಾರ್ದನಿಸಿ ದ ಅನ್ನೋದು ನುಗ್ಗಿ ಬಂದು ಕಣ್ಣೀರಾಗುತ್ತಿ ಗೋಣಿಚೀಲ, ಅರಕು ಕಂಬಳಿ ಕೊಡವಿ. ಮ ಅಟ್ಟದ ಮೇಲೆ ಮಡಗಿ ದನ, ಕರು, ಎಮ್ಮೆಗ ಆಚೆಗೆ ಕಟ್ಟಿ ಕೊಠಗಿಯನ್ನೆಲ್ಲಾ ಗುಡಿಸಿ ಸಗ ಒಂದು ಕಡೆ ಗುಡ್ಡೆ ಮಾಡಿ, ಗಂಜ್ಳಾನಾ ಬ ಮಗಿಯಿಂದ ಮಗೆದು ಮಡಿಕೆಗೆ ತುಂಬ್ಕಂಡು ಉಯ್ದು ಮಂಕರಿ ತುಂಬಾ ಸಗಣಿ ತಲೆ ವ ಹೊತ್ಕಂಡಾಗ ನನ್ನ ಕತ್ತು ಚಿಕ್ದಾಗಿತ್ತು. ಗಂಟ್ಲೋ 'ಗೊರಗೊರ' ಅನ್ನೋದು. ಕಾ ನಾಟ್ಯವಾಡ್ತಿದ್ದವು. ಸಗಣಿಯಲ್ಲಿನ ಗ ಮಂಕರಿಯಿಂದ ಸೋರಿ ಮುಖಕ್ಕಿಳಿದು ಮ ಬಾಯಿಗೂ ಹೋಗುತ್ತಿತ್ತು. ಖಾನೆಯಿಂದ ಕ ಕುಯ್ದು ಹೊತ್ಕೊಂಡು ಬರುವಾಗ ಸೆಕೆ ಪಾದಗಳಲ್ಲಿ ಹರಿಯುತ್ತಿತ್ತು.

ಊರಾಗ್ನ ಹುಡುಗರು ಖಾಕಿ ಚಡ್ಡಿ ಬಿಳ ಇಕ್ಕಂಡು ಕಂಕ್ಳಾಗೆ ಬ್ಯಾಗು ನೇತಾಕ್ಕೊಂಡು, ಕೈ ಪುಸ್ತಕಗಳನ್ನು ಹಿಡ್ಕಂಡು, ಕಿಲ, ಕಿಲ ನ ಇಸ್ಕೂಲಿಗೆ ಹೋಗುವ ಹುಡುಗರನ್ನು ಕಂ ಮನಸ್ಸಿನಲ್ಲೇ ಅಳುತ್ತಾ ಆ ಹುಡುಗರನ್ನೇ ನೋ

ಇ.ಎಂ.ಎಸ್. ಭವನಕ್ಕೆ ಬಂದ ಹಣ - ಸೆಪ್ಟೆಂಬರ್ 2009

ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ	50,000
ಸಿಪಿಐ(ಎಂ) ದಕ್ಷಿಣಕನ್ನಡ ಜಿಲ್ಲಾ ಸಮಿತಿ	50,000
ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್	25,000
ಎಲ್.ಮಂಜುನಾಥ್ ಎಲ್‌ಐಸಿ ಏ.ಒ.ಇ ಪ್ರಧಾನ ಕಾರ್ಯದರ್ಶಿ	5,000
ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ	5,95,000
ಕೃಷ್ಣ ಶೆಟ್ಟಿಗಾರ್, ಮಂಜೇಶ್ವರ	1000
ವಿಠ್ಠಲ ಭಂಡಾರಿ, ಕೆರೆಕೋಣ	500
ಎಂ.ರತ್ನಾಕರಶೆಣೈ, ಪ್ರಧಾನ ಕಾರ್ಯದರ್ಶಿ, ಬಿ.ಇ.ಎಫ್.ಐ ಕರ್ನಾಟಕ	5,000
ಕರ್ನಾಟಕ ಎಐಐಇಎ ಘಟಕಗಳು	1,00,000
ಪ್ರೊ.ಸಿ.ಟಿ.ಕುರಿಯನ್	2,500
ಬಿ.ಎಂ.ಆರ್.ಸಿ.ಎಲ್	50,000
ಟಿ.ಎಸ್.ಕೃಷ್ಣಮೂರ್ತಿ, ಮುಖಂಡರು ಬಿ.ಎಸ್.ಎನ್.ಎಲ್.ಇ.ಯೂ.	1,000
ಒಟ್ಟು	ರೂ. 8,85,000



ಇಸ್ಕಾನ್‌ಗೆ ಸಂಸ್ಥೆಯು ತನಗೆ ಬಿಸಿಯೂಟಕ್ಕೆ ಪೂರೈಸಲಾದ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಕುರಿತು ತನಿಖೆಗೆ ಆಗ್ರಹಿಸಿ ಬೆಂಗಳೂರಿನಲ್ಲಿ ಸಿಐಟಿಯುವಿನಿಂದ ನಡೆದ ಪ್ರತಿಭಟನೆ

ಸಂಪಾದಕೀಯ

ಲವ್ ಜಿಹಾದ್ : ಯುದ್ಧ ಸಾರಿರುವುದು ಯಾರ ವಿರುದ್ಧ ?

ದಕ್ಷಿಣ ಕನ್ನಡ, ಕೇರಳ ರಾಜ್ಯದಲ್ಲಿ ಕೇಳಿ ಬಂದ 'ಲವ್ ಜಿಹಾದ್' ಎಂಬ ವಿವಾದಾತ್ಮಕ ಪ್ರಚಾರವನ್ನು ರಾಜ್ಯದ ಇತರೆ ಕಡೆಗೂ ಹಬ್ಬಿಸುವ ಪ್ರಯತ್ನಗಳು ನಡೆದಿವೆ. ವಾಸ್ತವದಲ್ಲಿ 'ಲವ್ ಜಿಹಾದ್' ಎಂಬುದು ಚಾಲ್ತಿಯಲ್ಲಿರುವ ಬಗ್ಗೆ ಯಾವುದೇ ಪುರಾವೆಗಳು ಇಲ್ಲ. ಕೇರಳದ ಹಾಗೂ ದಕ್ಷಿಣ ಕನ್ನಡದ ಉನ್ನತ ಅಧಿಕಾರಿಗಳು ಸಹ ಇದೊಂದು ಹೊಸ ಸಂಗತಿಯೆಂದೂ ಅಂತಹದ್ದು ತಮ್ಮ ಗಮನಕ್ಕೆ ಸಿಕ್ಕಿಲ್ಲವೆಂದು ಹೇಳಿದ್ದಾರೆ. ಕೇರಳ, ಕರ್ನಾಟಕದ ಉಚ್ಚ ನ್ಯಾಯಾಲಯಗಳು ಕೆಲವರ ಒತ್ತಾಯದ ಬಳಿಕ ತನಿಖೆ ನಡೆಸಿ ಎಂದು ಹೇಳಿವೆಯಾದರೂ 'ಲವ್ ಜಿಹಾದ್'ನ್ನು ಕಂಡಿಲ್ಲ. ಮುಸ್ಲಿಂ ಧರ್ಮಕ್ಕೆ ಮತಾಂತರಿಸಲೆಂದೇ ಹಿಂದೂ ಯುವತಿಯರನ್ನು ಪ್ರೀತಿಸಲಾಗುತ್ತಿರುವುದೇ 'ಲವ್ ಜಿಹಾದ್' ಎಂಬ ವಿನೂತನ ವ್ಯಾಖ್ಯಾನ ಹಿಡಿದು ಕೆಲವು ಪ್ರೇಮ ಘಟನೆಗಳನ್ನು ಪರಿಶೀಲಿಸಿದಾಗಲೂ ಇದರ ಸುಳಿವೇ ಇಲ್ಲದಿರುವುದು ಪ್ರಚಾರದ ದುರುದ್ದೇಶವನ್ನು ಸ್ಪಷ್ಟಗೊಳಿಸುತ್ತದೆ. ಇದರಲ್ಲಿ 'ಹಿಂದುತ್ವ'ದ ಫ್ಯಾಸಿಸ್ಟ್ ಸಂಘಟನೆಗಳು - ಸಂಘ ಪರಿವಾರ ಸಕ್ರಿಯವಾಗಿ ತೊಡಗಿರುವುದು ಅದರ ನಿಜ ಉದ್ದೇಶ ಬೇರೆಯದೇ ಆಗಿರುವುದನ್ನು ದೃಢಪಡಿಸುತ್ತಿದೆ. ಕರಾವಳಿ ಹಾಗೇ ಉಳಿದೆಡೆಯ ಕರ್ನಾಟಕದಲ್ಲಿ ಒಂದಿಲ್ಲೊಂದು ಇಂತಹ ಉದ್ವಿಗ್ನ ವಿವಾದಗಳನ್ನು ಹುಟ್ಟು ಹಾಕುತ್ತಲೇ 'ಹಿಂದುತ್ವ' ದ ಪ್ರಯೋಗಶಾಲೆಯಲ್ಲಿ 'ಮರುಜನ್ಮ' ಪಡೆಯುವ ಕೋಮುವಾದಿ ವೈರಸ್‌ಗಳ ಉದ್ದೇಶವು ಅವರು ಹೇಳಿಕೊಳ್ಳುವಂತೆ ದೇಶ ಉಳಿಸುವುದಲ್ಲ, ಬದಲಾಗಿ ಜನರ ಮನಸ್ಸುಗಳನ್ನು, ಸಂಬಂಧಗಳನ್ನು ಒಡೆದು ದ್ವೇಷದ ಭುಗಿಲು ಹುಟ್ಟಿಸಿ ಒಗ್ಗಟ್ಟು ಒಡೆಯುವುದೇ ಆಗಿದೆ. ಇದು ಖಂಡನೀಯ.

ಇಂದಿನ ಸಮಾಜದಲ್ಲಿ ವಿಭಿನ್ನ ಜಾತಿ, ಧರ್ಮಗಳಿಗೆ ಸೇರಿದ ಯುವಜನರು, ಪರಸ್ಪರ ಪ್ರೀತಿಸುವುದು, ವಿವಾಹವಾಗಿರುವುದು ಹೊಸದೇನಲ್ಲ. ಆಧುನಿಕ, ಪ್ರಜಾಸತ್ತಾತ್ಮಕ ಪರಿಸರದಲ್ಲಿ ಜಾತಿ ಮತಾಂಧತೆಯಂತಹ ಪ್ರತಿಗಾಮಿ ಊಳಿಗಮಾನ್ಯ ಮೌಲ್ಯಗಳನ್ನು ಧಿಕ್ಕರಿಸುವುದು ಬಂಡಾಯ ಸಹಜ ಮನೋಧರ್ಮದ ಯುವಜನರಲ್ಲಿ ಸಹಜವೇ ಆಗಿದೆ. ಮನುಷ್ಯರನ್ನು, ಸಮಾನತೆಯ ಬದುಕನ್ನು ಪ್ರೀತಿಸುವ ಯಾರೇ ಆಗಲಿ ಇಂತಹ ಅಂತರ್ ಜಾತಿ, ಅಂತರ್ ಧರ್ಮೀಯ ವಿವಾಹಗಳನ್ನು ಸ್ವಾಗತಿಸುತ್ತಾರೆ. ಶತ ಶತಮಾನಗಳಲ್ಲಿಯೂ ಇಂತಹ ಯತ್ನಗಳು ನಡೆದುಕೊಂಡು ಬಂದಿವೆ. ಸಮಾಜದ ಸರ್ವಾನುಮುಖಿ ಬೆಳವಣಿಗೆಗೆ ಇದು ಪೂರಕವಾದುದು.

ಇಂದು 'ಲವ್ ಜಿಹಾದ್' ಎಂದು ಆರೋಪಿಸಲ್ಪಡುತ್ತಿರುವ, ಬೆಳಕಿಗೆ ಬಂದಿರುವ ಪ್ರಕರಣಗಳು ಭಿನ್ನ ಸ್ವರೂಪದಲ್ಲಿದೆ. ಕೇರಳದ ಮುಸ್ಲಿಂ ಯುವಕನನ್ನು ಪ್ರೀತಿಸಿ ವಿವಾಹವಾದ ಚಾಮರಾಜನಗರದ ಯುವತಿ ನ್ಯಾಯಾಲಯದ ಮುಂದೆ 'ತಾವು ಸ್ವಯಂ ನಿರ್ಧಾರದಿಂದಲೇ ವಿವಾಹವಾಗಿದ್ದು, ಸ್ವ ಇಚ್ಛೆಯಿಂದಲೇ ಇಸ್ಲಾಂ ಧರ್ಮಕ್ಕೆ ಮತಾಂತರವಾಗಿರುವುದಾಗಿಯೂ ಧಾರ್ಮಿಕ ವಿಧಿ ಅರಿಯಲು ಮದರಸಾದಲ್ಲಿ ಶಿಕ್ಷಣ ಪಡೆಯುವುದಾಗಿ ಹೇಳಿದ್ದಾಳೆ. ಇದರಿಂದ ಲ. ಜಿ. ಆರೋಪದ ಟೊಳ್ಳುತನವನ್ನು, ಘಟನೆಗೆ ಇರುವ ಭಿನ್ನ ಸ್ವರೂಪವನ್ನು ಸಾರುತ್ತದೆ. ಒಂದೆಡೆ ಅನ್ಯಧರ್ಮ ದ್ವೇಷ, ಇನ್ನೊಂದೆಡೆ ಅಮಾನವೀಯ ಚಾತುರ್ವರ್ಣ್ಯ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ದೃಢವಾಗಿ ಸಮರ್ಥಿಸಿ, ಬಲಗೊಳಿಸುವ ಸಂಘ ಪರಿವಾರದ ಶಕ್ತಿಗಳು ಪ್ರೇಮದ ಘಟನೆಗಳನ್ನು ತಿರುಚಿಸಿ ತಮ್ಮ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾಕ್ಕೆ ಬಳಸಲು ಉತ್ಸುಕವಾಗಿವೆ. ಅಲ್ಲಲ್ಲಿ ಯುವತಿಯರು ಕಾಣೆಯಾಗಿರುವ ಪ್ರಕರಣಗಳನ್ನು ಸಹ ಇಲ್ಲಿ ತಳುಕು ಹಾಕಲು ನಡೆಸಿರುವ ಯತ್ನಗಳು ಅಂತಹದ್ದೇ ಆಗಿವೆ.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗೆ ಆದೇಶಿಸಲಾಗಿದೆಯೆಂದು ಗೃಹಸಚಿವ ಆಚಾರ್ಯರು ಹೇಳಿದ್ದಾರೆ. ಮಾತ್ರವಲ್ಲ, ಪೊಲೀಸ್ ಅಧಿಕಾರಿಗಳ ಸಭೆಯನ್ನೂ ಸೇರಿಸುತ್ತಿದ್ದಾರೆ. ಅದರ ಬಗ್ಗೆ ತನಿಖೆ ನಡೆಸಲು ಆಕ್ಷೇಪವಿರಬೇಕಿಲ್ಲ. ಆದರೆ ಇಂತಹ ತನಿಖೆಗಳು 'ಕೇಶವ ಶಿಲ್ಪ'ದಿಂದ ನಿರ್ದೇಶಿತವಾಗಿರಕೂಡದು. ಬಿಜೆಪಿ ಸಚಿವರು ಈ ಸರ್ಕಾರ ಜನರಿಂದ ಚುನಾಯಿತವೆಂಬುದನ್ನು ಮರೆತು ಸಂಘಕ್ಕೆ ಶರಣಾಗಿರುವುದು, 'ಸಂಘ'ದ ಅಜೆಂಡಾಗಳನ್ನೇ ಸರ್ಕಾರದ ಅಜೆಂಡಾಗಳನ್ನಾಗಿಸಿಕೊಳ್ಳುವುದು . ಅದಕ್ಕಾಗಿ ಇಂತಹ ಅವಕಾಶಗಳನ್ನು ಬಳಸಿಕೊಳ್ಳುವುದು ಈ ಅವಧಿಯಲ್ಲಿ ಕಂಡಿದೆ. ಗೃಹಸಚಿವರ ಈ ತನಿಖೆಯ ಬಗ್ಗೆ ಯಾರಾದರೂ ಸಂಶಯಿಸಿದರೆ ಅದು ಅರ್ಥಪೂರ್ಣ.


ಇದೇ ಹೊತ್ತಿನಲ್ಲಿ ವಿಚಾರಣೆ ಪೂರ್ಣವಾಗುವವರೆಗೆ ಚಾಮರಾಜ ನಗರದ ಯುವತಿಯನ್ನು ಪಾಲರಿಗೆ ಒಪ್ಪಿಸಲು ನಿರ್ಧರಿಸಿದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಪಾಲಕರೊಂದಿಗೆ ಹೋಗಲು ನಿರಾಕರಿಸಿದ ಯುವತಿಗೆ 'ಪ್ರೀತಿಯ ಹೆಸರಿನಲ್ಲಿ ಹೆಣ್ಣು ಮಕ್ಕಳನ್ನು ಇಸ್ಲಾಂ ಧರ್ಮಕ್ಕೆ ಮತಾಂತರಿಸಿ, ದೇಶವಿದ್ರೋಹಿ ಕೃತ್ಯಕ್ಕೆ ಬಳಸಿಕೊಳ್ಳುವ ಬಗ್ಗೆ ಈಗಲೇ ಮನವೊಲಿಸಲು ಮುಂದಾಗಿದ್ದು ಅಗತ್ಯವಿರಲಿಲ್ಲ. ಮದುವೆಗೆ ವಿರೋಧವಿರುವ ಪಾಲಕರೊಂದಿಗೆ ಹೋಗಲು ಹೇಳುವುದು ಯುವತಿಯ ಮೇಲೆ ಒತ್ತಡ ಬೀರದೇ? ಮೇಲಾಗಿ ಹೀಗಾದರೆ ನ್ಯಾಯಾಲಯದ ಆದೇಶಗಳೂ ಸಾರ್ವಜನಿಕರಲ್ಲಿ ಅನುಮಾನ ಹುಟ್ಟಿಸಬಹುದು. ನ್ಯಾಯಾಲಯದ ಈ ಅಭಿಪ್ರಾಯವನ್ನೇ ಬಿಜೆಪಿಯು ಸರ್ಕಾರದ ಮೂಲಕ ಪುನರುಚ್ಚರಿಸುತ್ತಿದೆ.

ಪುಟ 15ಕ್ಕೆ

ಎಚ್ಚೆತ್ತವರ ಜೊತೆಯೀಗ ಏಳಬೇಕು

ಏರಿದ ಬೆಲೆಗಳು ಕುಸಿದ ಆದಾಯದ ಎದುರು ಹಬ್ಬ ಆಯಿತು ಅಬ್ಬಬ್ಬಾ!

'ಮನೆ ಮನೆಗೂ, ಮನಮನಕ್ಕೂ ದೀಪ ಹಚ್ಚಿ' ಎಂಬ ದೀಪಾವಳಿಯು ಮುಗಿದಿದೆ. ಈ ಹಬ್ಬವನ್ನು ಪೌರಾಣಿಕವಾಗಿ ಆಧ್ಯಾತ್ಮಿಕವಾಗಿ ಕೆಲವರು ವ್ಯಾಖ್ಯಾನಿಸುವ ಹೊತ್ತಿನಲ್ಲೇ, ದೀಪ ಹೊಮ್ಮಿಸುವ ಬೆಳಕು ಬೆಡಗುಗಳ ಬಗ್ಗೆ ಬದುಕಿಗೆ ದಾರಿದೀಪವಾಗುವ ಸಾಹಿತ್ಯ ಸಂದೇಶವೂ ಯಥೇಚ್ಛವಾಗಿದೆ. ಹೀಗೆ ದೀಪಾವಳಿ ನವಿರು ನೆನಪುಗಳಿಗೆ, ಶಬ್ದ ಸಂಭ್ರಮಕ್ಕೆ ಇಂಬು ಕೊಡುವ ಸಂದರ್ಭ. ಆಚರಣೆ ವ್ಯಕ್ತಿಗತ ಹೇಗೋ, ಹಾಗೇ ಸಾಮಾಜಿಕ ಸ್ವರೂಪಗಳನ್ನು ಹೊಂದಿರುವುದು ಜನರ ಒಗ್ಗಟ್ಟು ಬಲಗೊಳಿಸಲು ಒಂದು ಬೆಸುಗೆಯೂ ಆದೀತು, ಇರಲಿ.



ದೀಪಗಳ ಬೆಳಕಿನೆದುರು, ಸಿಡಿದ ಪಟಾಕಿಗಳ ಬಣ್ಣದ ಚಿತ್ತಾರ ಹೊಗೆಯ ಅವಾಂತರಗಳ ನಡುವೆ ನಮ್ಮನಾಡಿನ ಜನರ ಬವಣೆಗಳನ್ನು ಮರೆಯುವುದಾದರೂ ಹೇಗೆ? ಅದೂ ಬರ ನೆರೆಯ ಬಾಧಿತರ ನಿಲ್ಲದ ಆಕ್ರಂಧನ, ಆತಂಕಗಳ ನಡುವೆ, ಆ ಪ್ರದೇಶದ ರೈತರ ಆತ್ಮಹತ್ಯೆಗಳ ಸರಣಿ ಸ್ಫೋಟದ ಎದುರಿನಲ್ಲಿ.

ಪ್ರತಿ ಹಬ್ಬವೂ ಕೆಲವರ ವಿಭಜನೆಯ ರಾಜಕಾರಣಕ್ಕೆ ಒಂದು ನೆಪವಾಗುವುದು ಮತ್ತೊಂದು ದುರಂತ. ಹಬ್ಬಗಳು ಇನ್ನು ಹಲವರಿಗೆ ಬಾಚಿಕೊಳ್ಳುವ ದಂಧೆ. ಕೆಲವು ವರದಿಗಳನ್ನೇ ನೋಡಿ. ಹಬ್ಬದ ಸಿಹಿ ತಿಂಡಿಯಲ್ಲಿ ವಿಷಯುಕ್ತ ವಸ್ತುಗಳ ಕಲಬೆರಕೆ ಮಾಡಿ ಮಾರಲೊಯ್ಯುತ್ತಿದ್ದ ದಂಧೆಕಾರರನ್ನು ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಬಂಧಿಸಲಾಗಿದೆ. ಪಟಾಕಿಗಳ ಸ್ಫೋಟದಿಂದ ರಾಜ್ಯದಲ್ಲಿ ನೂರಾರು ಜನ ಕಣ್ಣು ಕಳೆದುಕೊಂಡು ಆಸ್ಪತ್ರೆ ಸೇರಿದ್ದಾರೆ. ಬೆಂಗಳೂರಿನಲ್ಲಿ ಡಿಸ್ಕೌಂಟ್ ವ್ಯಾಪಾರ ಚೆನ್ನಾಗಿ ನಡೆದಿದೆ ಎಂಬುದು ಮತ್ತೊಂದು ಸುದ್ದಿ. ವಿಶ್ವ ಆರ್ಥಿಕ ಬಿಕ್ಕಟ್ಟಿನಿಂದ ಭಾರತ ಪಾರಾಗಿ ಆಂತರಿಕ ಶಕ್ತಿಯಿಂದ ತಲೆ ಎತ್ತಿದೆ ಎಂಬುದು ಮಾಧ್ಯಮಗಳ ಬಂಬೊಂಬೋಣ. ಹಾಗೆ ನೋಡಿದರೆ ಜನರ ಬದುಕು ಲಕಲಕ ಹೊಳೆಯುತ್ತಿಲ್ಲ. ಕಳೆದ ಬಾರಿಗಿಂತ ವಸ್ತುಗಳು ಈ ಸಲ ಎಲ್ಲವೂ ದುಬಾರಿ.



ರಾಜ್ಯದಲ್ಲಿ 2007 ಮತ್ತು 2009 ರ ನಡುವೆ ಬೆಲೆಗಳ ಏರಿಕೆ ತುಲನಾತ್ಮಕವಾಗಿ ಪರಿಗಣಿಸಿದರೆ ಎರಡುಪಟ್ಟು. ಅದಕ್ಕಿಂತಲೂ ಹೆಚ್ಚು.

ಅಕ್ಕಿ, ಬೆಲ್ಲ, ಬೇಳೆ ಎರಡು ಪಟ್ಟು. ಸಕ್ಕರೆ ಅದಕ್ಕಿಂತಲೂ ಹೆಚ್ಚು. ಶೇಂಗಾ ಮೂರು ಪಟ್ಟು. ಗೋದಿ, ಜೋಳ ಒಂದೂವರೆ ಪಟ್ಟು, ತರಕಾರಿ ದ್ವಿಪಟ್ಟು ಅಥವಾ ಹೆಚ್ಚಿಗೆ. ಹೀಗೆ...

ಹೀಗೆ ಎಲ್ಲಾ ಬೆಲೆಗಳು ಏರುತ್ತಲೇ ಇವೆ. ಅಷ್ಟಿಷ್ಟು ಸಂಬಳ, ಆದಾಯವಿದೆಯೆಂಬುವವರಲ್ಲಿಯೂ ರೂಪಾಯಿಯ ಅಪಮೌಲ್ಯ, ಏರಿದ ಬೆಲೆ, ಜೀವನ ನಿರ್ವಹಣಾ ವೆಚ್ಚಗಳು, ಹೆಚ್ಚಾಗದ ಆದಾಯ ಜನರ ಕೊಳ್ಳುವ ಶಕ್ತಿಯನ್ನೇ ಕುಗ್ಗಿಸಿ ಹಬ್ಬವು ಅಬ್ಬಬ್ಬಾ ಎನ್ನುವಂತೆ ಮಾಡಿದೆ!

ಇನ್ನು ಪಡಿತರ ನೆಪಕ್ಕೆ ಮಾತ್ರ. ಕೇರಳದಲ್ಲಿ ಹಬ್ಬಕ್ಕಾಗಿ ಎಲ್ಲಾ ಅಗತ್ಯ ವಸ್ತುಗಳನ್ನು ಕಡಿಮೆ ಬೆಲೆಗೆ ಪಡಿತರ ಅಂಗಡಿಗಳ ಮೂಲಕ ಮಾರಲಾಗುತ್ತದೆ. ಆದರಿಲ್ಲಿ.... ಇರುವುದನ್ನೂ ಕಿತ್ತುಕೊಳ್ಳಲಾಗುತ್ತಿದೆ. ಅಂದರೆ ಆಹಾರದ ಅಭಾವ ಕೃತಕವಾಗಿ ಸೃಷ್ಟಿಸಿ, ಕಾಳಸಂತೆಖೋರರಿಗೆ ಬಹುರಾಷ್ಟ್ರೀಯ ಕಂಪನಿಗಳ ಬಕಾಸುರ ಹೊಟ್ಟೆಗೆ ಜನರನ್ನು ಇಡಿಯಾಗಿ ತಳ್ಳಲಾಗುತ್ತಿದೆ. ಹೀಗಾಗಿ ಹಸಿವು, ಹಸಿವು. ಭಾರತದಲ್ಲೇ ಅಪೌಷ್ಟಿಕತೆಯಿಂದ ಪ್ರತಿ ಆರು ಸೆಕೆಂಡುಗಳಿಗೆ ಒಂದು ಮಗು ಸಾವನ್ನಪ್ಪುತ್ತಿರುವ ವರದಿಯಿದೆ. ಏನಿಲ್ಲವೆಂದರೂ ಹಸಿವಿನ ಕಾರಣಕ್ಕೇ ವರ್ಷಕ್ಕೆ 5000 ಮಕ್ಕಳು ಸತ್ತ ಪ್ರಕರಣಗಳು ದಾಖಲಾಗಿವೆ. ಇನ್ನೂ ಅಪೌಷ್ಟಿಕತೆಯಿಂದ ಮಹಿಳೆಯರು, ಬಾಣಂತಿಯರು, ಮಕ್ಕಳು ರೋಗಗ್ರಸ್ತರಾಗುವುದು ಬೇರೆ. ವಿಶ್ವದ ಹಸಿವು ಪೀಡಿತರಲ್ಲಿ ಶೇ.50 ಇರುವುದು ಭಾರತದಲ್ಲಿ!. 30 ಕೋಟಿ ಜನಕ್ಕೆ ಮುಂದಿನ ಊಟ ಹೇಗೆ ಎಂಬ ಚಿಂತೆ! ದೇಶದಲ್ಲಿ ಶೇ.77ರಷ್ಟು ಜನಕ್ಕೆ ದಿನದ ಆದಾಯ ಕೇವಲ 20 ರೂ. ಗಳಿಗಿಂತ ಕಡಿಮೆ ಎನ್ನುತ್ತದೆ ಅಸಂಘಟಿತ ಕಾರ್ಮಿಕರ ಬಗ್ಗೆ ಅಧ್ಯಯನ ನಡೆಸಿದ ಡಾ.ಅರ್ಜುನ್ ಸೇನ್ ವರದಿ. ಆದರೆ ಕೇಂದ್ರದ ಯೋಜನಾ ಆಯೋಗ ಮಾತ್ರ ಬಡತನದ ರೇಖೆಗಿಂತ ಕಡಿಮೆ ಇರುವುವರು (ಬಿಪಿಎಲ್) ಕೇವಲ ಶೇ.8 ಎಂದಿದೆ. (6.52 ಕೋಟಿ ಕುಟುಂಬಗಳು ಇದನ್ನು 5.91 ಕೋಟಿಗೆ ಇಳಿಸುವ ಯೋಜನೆಯಿದೆ) ಈ ನಡುವೆ ಗ್ರಾಮಾಂತರದಲ್ಲಿ ಒಬ್ಬರಿಗೆ ರೂ.11.80 ನಗರದಲ್ಲಿ ರೂ.17.80 ಆದಾಯವಿದ್ದವರು ಮಾತ್ರವೇ ಬಿಪಿಎಲ್ ವ್ಯಾಪ್ತಿಗೆ ಬರುವರೆಂದು ಯೋಜನಾ ಆಯೋಗ ಮಾನದಂಡ ನಿಗದಿ ಮಾಡಿದೆ. ಹೇಗಿದೆ ಬಡತನ ನಿವಾರಣೆಗಿಂತ, ಬಡವರನ್ನೇ ನಿರ್ನಾಮ ಮಾಡಿ ಅಭಿವೃದ್ಧಿ ತೋರುವ ಪರಿ?! ಜಾಗತಿಕವಾಗಿಯೂ ಬಡತನದ ಸ್ಥಿತಿಯಲ್ಲಿರುವ ದೇಶಗಳಲ್ಲಿ ಭಾರತಕ್ಕೆ 88 ನೇ ಸ್ಥಾನಕ್ಕೆ (ಹಿಂದೆ 66 ಇದ್ದದ್ದು) ಕುಸಿದಿರುವುದು ಕಣ್ಣಿಗೆ ಕಾಣದೇ?

'ತಾನೊಂದು ಭಿನ್ನ ಬಗೆಯ ಪಕ್ಷ' 'ಅಭಿವೃದ್ಧಿ ಸರ್ಕಾರ' ಎಂಬ ಬಿಜೆಪಿಯ ರಾಜ್ಯ ಸರ್ಕಾರದ ಧೋರಣೆ ಕೇಂದ್ರಕ್ಕಿಂತ ಭಿನ್ನವಿಲ್ಲ. ಜನರನ್ನು ದೋಚಲು, 'ಇಬ್ಬರೂ ದೊಂಗಲೇ'. ಇಲ್ಲಿ ರೇಷನ್, ರೇಷನ್ ಕಾರ್ಡ್ ನೀಡಿಕೆಯಲ್ಲಿಯೇ ಎಷ್ಟೊಂದು ಬಗೆಯ ವಂಚನೆಗಳು

ಪುಟ 4ಕ್ಕೆ

ಜ್ಞಾನ ಭಾರತಿ ಹಾಸ್ಟೆಲ್ ಅವ್ಯವಸ್ಥೆ ಬೆಂಗಳೂರು ವಿ.ವಿ. ದುರಾಡಳಿತದ ವಿರುದ್ಧ

ಪ್ರತಿಭಟನೆ

ಬಿ.ರಾಜಶೇಖರಮೂರ್ತಿ

ವಿಶ್ವ ವಿದ್ಯಾಲಯದ ಕೇಂದ್ರದ ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ ವಿದ್ಯುತ್ ಇಲ್ಲ, ಕುಡಿಯಲು ಶುದ್ಧ ನೀರಿಲ್ಲ, ಭದ್ರತೆ ಇಲ್ಲ... ಈ ಬಗ್ಗೆ ಕೇಳುವಂತೆಯೂ ಇಲ್ಲ ಎಂದರೆ ಏನರ್ಥ...!?

ಏಷ್ಯಾ ಖಂಡದಲ್ಲೇ 'ಅತಿದೊಡ್ಡ' ವಿಶ್ವವಿದ್ಯಾಲಯ ಎಂದೆಲ್ಲಾ 'ಹೆಸರು' ಪಡೆದಿರುವ ಬೆಂಗಳೂರು ವಿ.ವಿ. ಅಧಕ್ಷತೆ, ಅವ್ಯವಸ್ಥೆ, ಗೊಂದಲ, ಭ್ರಷ್ಟತೆಗಳಿಗೂ ಅಷ್ಟೇ 'ಖ್ಯಾತಿ' ಪಡೆದಿದೆ ಎಂಬುದು ತಿಳಿದ ವಿಷಯವೇ?

ವಿದೇಶಿ ಸರ್ಕಾರಿ, ಖಾಸಗಿ ವಿ.ವಿ.ಗಳ ಜೊತೆಗೆ ಪರಸ್ಪರ ಸಂಯೋಜಿಸಿಕೊಂಡು ಅಂತರಾಷ್ಟ್ರೀಯ ಖ್ಯಾತಿ ಹೊಂದುತ್ತಿದ್ದೇವೆ. ನಮ್ಮ ದೇಶದ ಸಾಂಸ್ಕೃತಿಕ ಹಾಗೂ ವಿದೇಶಿಗಳ ಸಾಂಸ್ಕೃತಿಕ ಮುಂತಾದ ಎಲ್ಲಾ ಆಯಾಮಗಳ ಅಧ್ಯಯನ....... ಹೊಸ ಕೋರ್ಸುಗಳ ಆರಂಭ ಮಾಡುತ್ತೇವೆಂದೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ಮಾಧ್ಯಮಗಳ ಮುಖಾಂತರ ಪ್ರಚಾರ ಗಳಿಸುತ್ತಿರುವ ಬೆಂಗಳೂರು ವಿ.ವಿ. ಒಳ ಹೊಕ್ಕು ನೋಡಿದರೆ ನಿಜ ಬಣ್ಣ ಬಯಲಾಗುತ್ತದೆ.

ಹಾಸ್ಟೆಲ್ ಅವಸ್ಥೆ

ಜ್ಞಾನ ಭಾರತಿ ಕ್ಯಾಂಪಸ್‌ನಲ್ಲೇ 400 ಹೆಚ್ಚು ವಿದ್ಯಾರ್ಥಿನಿಯರು ಹಾಸ್ಟೆಲ್‌ನಲ್ಲಿ ಇಲಿ, ನಾಯಿ, ಹಾವುಗಳ ಜೊತೆ ವಾಸ ಮಾಡುವಂತಹ 'ಸಾಧನೆ'ಗೆ ಬೆಂಗಳೂರು ವಿ.ವಿ. ಕಾರಣವಾಗಿರುವುದು ಇತ್ತೀಚಿಗೆ ಬೆಳಕಿಗೆ ಬಂದಿದೆ. ಕಳಪೆ ಗುಣಮಟ್ಟದ ಅರೆಹೊಟ್ಟೆ ಊಟ, ಕ್ರಿಮಿಕೀಟ ಇರುವ ಕುಡಿಯುವ ನೀರು, ಗಟ್ಟಿದ್ದು ನಾರುತ್ತಿರುವ ಇಡೀ ಹಾಸ್ಟೆಲ್, ವಿದ್ಯುತ್ ಇಲ್ಲದ ಕೋಣೆಗಳು, ಲೈಬ್ರರಿ ಟಿ.ವಿ. ದಿನಪತ್ರಿಕೆಗಳಿಲ್ಲದೆ ಯಾರು ಗತಿಯಿಲ್ಲದ 'ಅನಾಥಾಶ್ರಮ'ದಂತಹ ಅವಸ್ಥೆ. ಇದು ಬೆಂಗಳೂರು ವಿ.ವಿ.ಯ ಆಡಳಿತ ಕಛೇರಿ ಹತ್ತಿರ ಇರುವ ಜ್ಞಾನಭಾರತಿ ಸ್ನಾತಕೋತ್ತರ ವಿದ್ಯಾರ್ಥಿನಿಯರ ಹಾಸ್ಟೆಲ್‌ನ ಪರಿಸ್ಥಿತಿ. ಇಂತಹ ಅಮಾನವೀಯ ಸ್ಥಿತಿಯನ್ನು ಉಪಕುಲಪತಿಗಳಾದ ಡಾ.ಪ್ರಭುದೇವ್ ಗಮನಕ್ಕೆ ತಂದಾಗ ಕನಿಷ್ಠ ಉಪಕುಲಪತಿಯೆಂಬ ಪರಿಜ್ಞಾನವನ್ನು ಪ್ರದರ್ಶಿಸದೆ, ಪ್ರಾಥಮಿಕ ಶಾಲಾ ಶಿಕ್ಷಕರಂತೆ ವರ್ತಿಸಿ "ನಿಮ್ಮ ಅಪ್ಪ, ಅಮ್ಮಂದಿರನ್ನು ಕರೆಸುತ್ತೇನೆ, ಬಾಯಿ ಮುಚ್ಚಿಕೊಂಡು ಹೋಗಿ" ಎಂದು ಹೇಳಿ ಸ್ನಾತಕೋತ್ತರ ವಿದ್ಯಾರ್ಥಿನಿಯರೆಂದೂ ಲೆಕ್ಕಿಸದೆ "ಇವರಿಗೆ ನೊಟೀಸ್ ಕೊಡಿ" ಎಂದು ತನ್ನ ಸಿಬ್ಬಂದಿಗೆ ತಾಕೀತು ಮಾಡಿದ್ದಾರೆ.

ಊಟ ನಿದ್ದೆಯೂ ಇಲ್ಲದ ಅತ್ಯಂತ ಶೋಚನೀಯ ಸ್ಥಿತಿಗೆ ಹಾಸ್ಟೆಲ್ ವಾತಾವರಣ ತಲುಪಿದಾಗ ವಿದ್ಯಾರ್ಥಿನಿಯರು ಒಗ್ಗೂಡಿ ಹೊರಬಂದಿದ್ದಾರೆ. ಪ್ರತಿಭಟನೆಯ ಬಾವುಟ ಎತ್ತಿದ್ದಾರೆ. ಇದನ್ನರಿತ ವಾರ್ಡನ್ ಸಿಬ್ಬಂದಿ ವರ್ಗ ನೀವೆಲ್ಲಾ ಈ ರೀತಿ 'ಅನ್ಯಾಯ, ಅವ್ಯವಸ್ಥೆ' ಅಂತ ಕೂಗಾಡಿದರೆ ನಿಮ್ಮ ಭವಿಷ್ಯಕ್ಕೆ ಕುಂದು ಗ್ಯಾರಂಟಿ . ನಿಮ್ಮ Internal Marks ಕಡಿತ ಆಗುತ್ತೆ. ನೀವ್ಯಾ ಹೇಗೆ ಬೆಂಗಳೂರು ವಿ.ವಿ.ಯಲ್ಲಿರುತ್ತೀರಿ.... ಎಂಬ ಬೆದರಿಕೆಗಳು ಬರತೊಡಗಿದವು. ಹತ್ತಾರು ಹುಡುಗಿಯರು ಹೆದರಿ ಊರಿಗೆ ಹೋಗಿದ್ದೂ ಉಂಟು. ಇಂತಹ ಸಂದರ್ಭದಲ್ಲಿ ಸಮಸ್ಯೆಗಳ ಸರಮಾಲೆಯನ್ನು ಬಯಲಿಗೆಳೆದ ವಿದ್ಯಾರ್ಥಿನಿಯರ ಮೇಲೆ 'ನಿಗಾ ಇಟ್ಟು' ಸುಳ್ಳು ಆರೋಪಗಳನ್ನು ಸೃಷ್ಟಿಸಿದ್ದೂ ಆಯ್ತು.

ವಿದ್ಯಾರ್ಥಿನಿಯರು ಜಗ್ಗಲಿಲ್ಲ

ಈ ಪ್ರಶ್ನೆಯಲ್ಲಿ ಡಿವೈಎಫ್‌ಐ, ಎಸ್‌ಎಫ್‌ಐಗಳು ವಿದ್ಯಾರ್ಥಿನಿ ಯರ ಬೆಂಬಲಕ್ಕೆ ನಿಂತವು. ಪ್ರತಿಭಟನೆಯ ಹಿಂದಿನ ದಿನ ಪೊಲೀಸರ ತಂಡದೊರದಿಗೆ ವಾರ್ಡನ್ ಹಾಸ್ಟೆಲ್‌ಗೆ 'ಹಾಜರಿ' ಹಾಕಿ 'ಕೊನೆ ಎಚ್ಚರಿಕೆ' ನೀಡಿದರು.



ಬೆಳಿಗ್ಗೆ 6 ಗಂಟೆಗೆ ಹಾಸ್ಟೆಲ್‌ನಲ್ಲಿ ಪ್ರತಿಭಟನೆಯ ಕಲರವ. ಯಮ ಸ್ವರೂಪಿ ವಾರ್ಡನ್‌ಗೆ ಬೆದರಿ ರಾತ್ರಿ ಹಾಸ್ಟೆಲ್‌ಗೆ ಬರದಿದ್ದವರು ಬೆಳಿಗ್ಗೆ ಜೊತೆಗೂಡಿದರು. ಎಂದಿನಂತೆ ಇಂದು ವಿಶ್ವವಿದ್ಯಾಲಯ ನಡೆಯಲು ಬಿಡುವುದಿಲ್ಲ ಎಂದು ವಿದ್ಯಾರ್ಥಿನಿಯರು ಬೆಳಿಗ್ಗೆ 9.30 ಕ್ಕೆ ವಿದ್ಯಾರ್ಥಿ, ಶಿಕ್ಷಕ ಸಿಬ್ಬಂದಿಯನ್ನು ಹೊತ್ತು ತರುತ್ತಿದ್ದ ಬಸ್ಸುಗಳನ್ನು ತಡೆದು ರಸ್ತೆಗೆ ಬಂದು ಕುಳಿತರು. ಹದ್ದುಗಳಂತೆ ಕಾಯುತ್ತಿದ್ದ ಪೊಲೀಸರು ಸಮಸ್ಯೆ ಪರಿಹಾರಕ್ಕೆ ಆಡಳಿತ ವರ್ಗದವರನ್ನು ಕರೆಯದೆ ಎಸ್‌ಎಫ್‌ಐ, ಡಿವೈಎಫ್‌ಐ ನಾಯಕರನ್ನು ದಸ್ತಗಿರಿ ಮಾಡಲು ಮುಂದಾದರು. ಶರ್ಟಿನ ಪಟ್ಟಿಯನ್ನು ಹಿಡಿದು ಎಳೆದಾಡಿದರು. ಅವಾಚ್ಯ ಶಬ್ದಗಳಿಂದ ಬೈದರು. ಇದನ್ನೆಲ್ಲಾ ಕಣ್ಣಾರೆ ಕಂಡ ವಿದ್ಯಾರ್ಥಿನಿಯರ ಸಹನೆಯ ಕಟ್ಟೆ ಒಡೆದು ಪೊಲೀಸರ ಅನಾಗರೀಕ ದೌರ್ಜನ್ಯ ವಿರುದ್ಧ ಸಿಡಿದು ಎಲ್ಲರೂ ಪೊಲೀಸ್ ವ್ಯಾನ್‌ನತ್ತ ಧಾವಿಸಿದರು. 'ನಮ್ಮನ್ನೂ ಬಂಧಿಸಿ' ಎಂದು ಮುನ್ನುಗ್ಗಿದರು. ಈ ಹೊತ್ತಿಗೆ ಇನ್ನಷ್ಟು ವಿದ್ಯಾರ್ಥಿಗಳೂ ಜೊತೆ ಸೇರಿ ಸಾವಿರ ಸಂಖ್ಯೆಗೆ ಹತ್ತಿರವಾಗಿತ್ತು. ಹಾಸ್ಟೆಲ್‌ನಿಂದ ವಿ.ವಿ.ಯ ಆ[...] ಕಛೇರಿಗೆ ರ್‍ಯಾಲಿ ಘೋಷಣೆಗಳೊಂದಿಗೆ ಧಾವಿ[...] ಪೊಲೀಸ್ ಹಾಗೂ ಬೆಂಗಳೂರು ವಿ.ವಿ. ಆ[...] ವರ್ಗದ ಬೆವರು ಇಳಿಯತೊಡಗಿತು.

ವಿದ್ಯಾರ್ಥಿಗಳ ದುಡ್ಡನ್ನೇ ನುಂ[...] ಆಡಳಿತವರ್ಗದ ತಿಮಿಂಗಲಗಳು ಆ[...] ಚೇಲಾಗಳಾಗಿರುವ ಕೆಲವು ಹಳೆಯ ವಿದ್ಯಾರ್ಥಿ[...] ಹೋರಾಟದ ಹಾದಿಯನ್ನು ತಪ್ಪಿಸಲು ಸೂಕ್ಷ್ಮ[...] ಪ್ರಶ್ನೆ ಎತ್ತಲು ಯತ್ನಿಸಿ ಸೋತರು. ವಿದ್ಯಾ[...] ಪ್ರತಿನಿಧಿಗಳ ಜೊತೆಗೆ ಮಾತುಕತೆಗೆ ಬೆಂಗಳ[...] ವಿ.ವಿ. ಬಗ್ಗಲೇಬೇಕಾಯ್ತು. ಕೆಳಗೆ ಬಿದ್ದರೂ [...] ಮಣ್ಣಾಗಲಿಲ್ಲವೆಂಬಂತೆ ಆಡಳಿತ ವ[...] ವಿದ್ಯಾರ್ಥಿಗಳನ್ನು ಬಿಟ್ಟು ಬೇರೆ ಯಾ[...] ಮಾತುಕತೆಗೆ ಆಹ್ವಾನಿಸುವುದಿಲ್ಲ ಎಂದಿತು. [...] ಸಂಘಟನೆಗಳ ನಾಯಕರಿಲ್ಲದ ಮಾತುಕ[...] ಅವಶ್ಯವೇ ಇಲ್ಲವೆಂದು ವಿದ್ಯಾರ್ಥಿನಿಯರು ದೃಢ[...] ಹೇಳಿದಾಗ ಆಡಳಿತ ವರ್ಗ ಎಸ್‌ಎಫ[...] ಡಿವೈಎಫ್‌ಐ ನಾಯಕರ ಸಮ್ಮುಖದಲ್ಲಿ [...] ನಡೆಸಿತು.

ಚರ್ಚೆಯಲ್ಲಿ ಹಾಸ್ಟೆಲ್ ಅವ್[...] ಅರಾಜಕತೆಗಳು, ಮಾತ್ರವಲ್ಲ ವಿಶ್ವವಿದ್ಯಾಲ[...] ಹಲವು ಸಮಸ್ಯೆಗಳೂ 'ಸಾಕ್ಷಿ' ಸಹಿತ ಬ[...] ಬಂದವು. ರಿಜಿಸ್ಟರ್ ಟಿ.ಆರ್.ಸುಬ್ರಹ್ಮಣ್ಯ[...] ಆಡಳಿತ ವರ್ಗಕ್ಕೆ ಇನ್ನಷ್ಟು ಬೆವರಿಳಿ[...] ಎಲ್ಲವನ್ನು ಆಲಿಸಿದ ರಿಜಿಸ್[...] ವಿದ್ಯಾರ್ಥಿಗಳಿಗೆ ಆಗುತ್ತಿ[...] ತೊಂದರೆಗಳಿಗಾಗಿ ಕ್ಷಮೆ ಕೋರಿ ಸ[...] ಬಗೆಹರಿಸಲು 2 ದಿನಗಳ ಕಾಲಾವ[...] ವಿನಂತಿಸಿ ಪ್ರತಿಭಟನೆ ಕೈಬಿಡಲು ವ[...] ಮಾಡಿದರು. ಸಮಸ್ಯೆ ಬಗೆಹರಿಯ[...] ಮತ್ತೆ ಹೋರಾಟ ಎಂಬ ಎಚ್ಚರಿಕೆ[...] ಪ್ರತಿಭಟನೆ ಸಲ್ಲಿಸಲು ಒಪ್ಪಲಾಯಿ[...]

ಡಿವೈಎಫ್‌ಐ ರಾಜ್ಯ ಕಾರ್ಯ[...] ಬಿ.ರಾಜಶೇಖರಮೂರ್ತಿ, ಎಸ್‌ಎ[...] ಜಿಲ್ಲಾ ಅಧ್ಯಕ್ಷರಾದ ಯು.ಎಸ್.ಪ್ರ[...] ಮುಂತಾದವರು ನೇತೃತ್ವ ವಹಿಸಿದ್ದರು. ಮಾಜಿ [...] ಸದಸ್ಯೆ, ಜನವಾದಿ ಮಹಿಳಾ ಸಂಘಟನೆಯ [...] ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಹೊ[...] ಬೆಂಬಲಿಸಿ ಪಾಲ್ಗೊಂಡಿದ್ದರು.

ಎಚ್ಚೆತ್ತವರ ಜೊತೆಯೀಗ ಏಳಬೇಕು.....

ಪುಟ 3 ರಿಂದ

ನಾವು ಹಾಡುತ್ತಲೇ ಬೆಳೆದ ಹಾಡೊಂದು ಈ ಹಬ್ಬದ ಸಂದರ್ಭದಲ್ಲಿ ನೆನಪಾಗುತ್ತಿದೆ.

'ರಂಜಾನ್‌ನ ಹಬ್ಬದಲ್ಲಿ
ಬಣ್ಣ ಬೆಳಕು ಸುತ್ತಲೂ,
ಬಡವರ ಮನೆಯಂಗಳದಲ್ಲಿ
ಕತ್ತಲೋ ಕತ್ತಲೋ.....'

ಹಾಡು ಮುಂದುವರಿದು :

ಮಾಲೀಕರ ಮೋಸಕ್ಕೆ ಹಬ್ಬವು ನೆಪವಾಯಿತು.
ರಂಜಾನ್‌ನ ಉಪವಾಸ ದಿನಗಟ್ಟಲೆ ನಡೆಯಿತು.
ಜೀವನವನ್ನೇ ಹಿಂಡಿತು

ಈ ಹಬ್ಬವನ್ನೇ ರಂಜಾನ್ ಎನ್ನಬಹುದು. ದಸರಾ, ದೀಪಾವಳಿ, ಕ್ರಿಸ್‌ಮಸ್, ಯುಗಾದಿಗಳು ಎನ್ನಬಹುದು. ಪರಿಸ್ಥಿತಿಯಂತೂ ಬೇರೆಯಾಗಲೇ ಇಲ್ಲ.

ಹೌದು! ಇಂದು ಏನು ಮಾಡಬೇಕು. ಎಲ್ಲವನ್ನೂ ಕಂಡು ಅನುಭವಿಸಿ, ಹಳಹಳಸಿ ಬಿಟ್ಟುಬಿಡಬೇಕೇ? ತಾರಾಬಲ, ನಕ್ಷತ್ರಲೋಕದಲ್ಲಿ, ಪುರೋಹಿತಶಾಹಿಗಳ ಮಂತ್ರಗಳಲ್ಲಿ ಉತ್ತರ ಹುಡುಕಬೇಕೆ?.... ಹೀಗೆ ಹುಡುಕಿದವರು ಹುಡುಕುತ್ತಲೇ ಇದ್ದಾರೆ. ಅಂತಹವರು ದಡ ಸೇರಿಲ್ಲ, ಬದುಕು ದಕ್ಕಿಸಿಕೊಳ್ಳಲಿಲ್ಲ.

ಆದ್ದರಿಂದಲೇ ಖ್ಯಾತ ಕವಿ ಪಾಬ್ಲೊ ನೆರೂದ ಹೇಳೋದು -

ಪ್ರಿಯೆ ಕಾಲ ಬಂದಿದೆ ಈಗ, ಗಂಭೀರ ಗುಲಾಬಿ
ಕಿತ್ತು ಹಾಕಲು,
ಎಚ್ಚೆತ್ತವರ ಜೊತೆಯಲ್ಲಿ ಏಳಬೇಕು.
ಇಲ್ಲವೇ ಕನಸಿನ ಕನವರಿಕೆಯಲ್ಲೇ ಸಾಗಬೇಕು
ಆಚೆ ದಡವಿಲ್ಲದ ಆಚೆ ದಡ ಸೇರಲು...

ಹೌದಲ್ಲ : ಎಚ್ಚೆತ್ತುಕೊಂಡವರು ಸೇ[...] ಹಸಿವಿನ ವಿರುದ್ಧದ ಸಮರದಲ್ಲಿ. ಅನ್ನಕ್ಕಾಗಿ, ಆ[...] ಹಕ್ಕಿಗಾಗಿ ಆಂದೋಲನ. ಇಲ್ಲಿ ಎ[...] ಕಲೆಯಬೇಕು, ಕಲೆತು ಹೋರಾಡಬೇಕು. ಆಳ[...] ಅನಿಷ್ಠ ನೀತಿಗಳಿಗೆ ಉತ್ತರ ಹೇಳಿ ಅ[...] ಬದಲಾಯಿಸಲು ಹಸಿವಿಲ್ಲದ ಸಮಾನತೆಯ[...] ಸಮಾಜ ಕಟ್ಟಲು.

'ಕತ್ತಲೆಯ ಕೇಡನ್ನು ಬೆಳಕಲ್ಲಿ ನೋಡ[...] ಎಂದರು ಶರಣರು. ಎಚ್ಚೆತ್ತವರ ಜೊತೆಯಲ್ಲಿ [...] ಹಚ್ಚಿದರೆ, ಅರಿವು ಹೆಚ್ಚುವುದು, ಹಾದಿ ತೋರು[...]

ಆ ದಿಕ್ಕಿನಲ್ಲಿ ದುಡಿವ ಜನರ ಪ್ರಾಣಮಿತ್ರ[...] ವಿಭಿನ್ನ ವಿಶ್ಲೇಷಣೆ ಪುಟಪುಟಗಳಲ್ಲಿ ಅರಿವಿನ [...] ಹಚ್ಚಲು ಹೋರಾಟದ ಕಾವು ಇಮ್ಮಡಿಗೊಳ[...]

ಉತ್ತರಿ ಮಳೆ ಹಸ್ತ ಮಳೆಗೆ ಜೊತೆ ಕೊಟ್ಟಿತು ದವಂತ ಉತ್ತರಿ ಮಳೆ ರೈತರಲ್ಲಿ ಸಂತಸವನ್ನುಂಟು ಾಡಿತ್ತು ಮತ್ತು ಉತ್ತಮ ಇಳುವರಿಯ ಕನಸು ್ತು. ಆದರೆ ಹಸ್ತ ಮಳೆ ಜವರಾಯನಾಗಿ ರಗಿಳಿದ. ಉತ್ತರ ಕರ್ನಾಟಕದ ರೈತ ಮುದಾಯದಲ್ಲಿ ಒಂದು ನಾಣ್ಣುಡಿ ಬಳಕೆಯಲ್ಲಿದೆ. ಸ್ತ ಇಲ್ಲವಾದರೆ ಹಲ್ಲು ಕಿಸ್ತಾ' ಅಂದರೆ ಹಸ್ತ ಳೆ ಸುರಿದರೆ ಒಳ್ಳೆ ಬೆಳೆ ಇಲ್ಲವಾದರೆ ರೈತನ ಬದುಕು ಗಾಲು ಎಂಬುದೆ ಇದರ ಅರ್ಥ. ಆದರೆ ಹಸ್ತ ಳೆ ಇನ್ನೊಂದು ರೀತಿಯಲ್ಲಿ ಹಲ್ಲು ಕಿಸಿಯುವಂತೆ ಕಪ್ಪಕ್ಕೆ) ಮಾಡಿದೆ. ಸೆಪ್ಟೆಂಬರ 28 ರಿಂದ ಟ್ಟೋಬರ 3 ರವರೆಗೆ ಬಿದ್ದ ಮಳೆ ಸಮಗ್ರ ಉತ್ತರ ರ್ನಾಟಕವನ್ನು ನೀರಲ್ಲಿ ಅದ್ದಿ ತೆಗೆಯಿತು ಅತಿವೃಷ್ಠಿ ಅನಾವವೃಷ್ಠಿ ಎಂಬ ಎರಡು ಅತಿರೇಕಗಳಿಗೆ ಲ್ಲಿಯ ಜನ ಸಿಲುಕುವದು ಸಾಮಾನ್ಯ. ಈ ವರ್ಷ ದ್ದ ಮಳೆ ಹಿಂದಿನ ದಾಖಲೆಯನ್ನು ರಿಯಿತೇನೊ. ಉತ್ತರ ಕರ್ನಾಟಕದ ಮಧ್ಯವರ್ತಿ ವಲ್ಲಿರುವ ಮೊದಲಿನ ಧಾರವಾಡ ಜಿಲ್ಲೆ ಡ, ಹಾವೇರಿ ಹಾಗೂ ಗದಗ) 227 .ಮಿ. ಗೂ ಹೆಚ್ಚು ಮಳೆಯನ್ನು ಪಡೆದಿದೆ. ಸತತ ಬಿದ ಮಳೆಗೆ ಮಣ್ಣಿನ ಮನೆಗಳು ಸೋರಿದವು. ಮನೆಗಳಲ್ಲಿ ವಾಸಿಸುವವರಿಗೆ ನಿದ್ದೆ ಾಡುವದಿರಲಿ ಗಂಜಿ ಬೇಯಿಸಲು ಸ್ಥಳ ಲ್ಲದಂತಾಗಿತ್ತು. ಹೀಗಾಗಿ ಗುಡಿ ಗುಂಡಾರಗಳು, ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು ಆಶ್ರಯ ಾಗಳಾದವು. ಧಾರವಾಡ ಜಿಲ್ಲೆಯೊಂದರಲ್ಲೆ 0 ಕ್ಕೂ ಹೆಚ್ಚು ಮನೆಗಳು ನೆಲಸಮವಾಗಿವೆ ಇಲ್ಲವೆ ಗಶ ನಾಶವಾಗಿವೆ.

ಹತ್ಯೆಯ ಮುಂದುವರಿಕೆ

ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದ ರೈತರು ಶಯ ಮಡುವಿಗೆ ತಳ್ಳಲ್ಪಟ್ಟಿದ್ದಾರೆ. ಮುಂಗಾರು ಗಳಾದ ಹತ್ತಿ, ಶೇಂಗಾ ಸೋಯಿಬೀನ, ಈರುಳ್ಳಿ, ಮೆಕ್ಕೆಜೋಳ ಮತ್ತು ಮೆಣಸಿನಕಾಯಿ ಸಂಪೂರ್ಣ ನಾಶವಾಗಿವೆ. ಕುಂದಗೋಳ, ಶಿಗ್ಗಾವಿ ಹಾಗೂ ಕಲಘಟಗಿ ತಾಲೂಕುಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡ ವರದಿಗಳು ಬಂದಿವೆ. 50 ಸಾವಿರ ಹೆಕ್ಟರನಲ್ಲಿ ಬೆಳೆದ ಫಸಲು ಸಂಪೂರ್ಣ ನಾಶವಾಗಿದೆ.

ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಪ್ರವಾಹ ಸೃಷ್ಟಿಸಿದ ದಾರುಣ ಪರಿಸ್ಥಿತಿಯ ಕುರಿತು, ಮುಂದೆ ಪ್ರವಾಹದ ಪರಿಣಾಮ ತಗ್ಗಿಸಬಹುದಾದ ಕ್ರಮಗಳು ಕುರಿತು ಓದಿ...

ಜನರ ಬದುಕನ್ನು ಬರಿದು ಮಾಡಿದ ಬೆಣ್ಣೆಹಳ್ಳ

● ಬಿ.ಎಸ್.ಸೊಪ್ಪಿನ ಹುಬ್ಬಳ್ಳಿ

ಕಣ್ಣೀರಹಳ್ಳ ಬೆಣ್ಣಿಹಳ್ಳ

ಬೆಣ್ಣೆ ಹಳ್ಳ ಧಾರವಾಡ ಗದಗ ಜಿಲ್ಲೆಗಳ ಕಣ್ಣೀರ ಹಳ್ಳವಾಗಿ ತೋರಿದೆ. ಹಾವೇರಿ ಜಿಲ್ಲೆ ಶಿಗ್ಗಾವಿ ತಾಲೂಕಿನ ದುಂಡಸಿ ಗ್ರಾಮದ ಬಳಿ ಉಗಮವಾದ ಬೆಣ್ಣೆಹಳ್ಳ ಧಾರವಾಡ ಜಿಲ್ಲೆಯಲ್ಲಿ ಹರಿದು ಗದಗ ಜಿಲ್ಲೆಯ ರೋಣ ತಾಲೂಕಿನ ಮೆಣಸಗಿ ಗ್ರಾಮದ ಬಳಿ ಮಲಪ್ರಭಾ ನದಿಗೆ ಸೇರುತ್ತದೆ. 138 ಕಿ.ಮೀ. ಉದ್ದವಾದ ಈ ಹಳ್ಳ ಕ್ರಮೇಣ ಕಿರಿಯದಾಗುತ್ತಿರುವುದು ನಿಸರ್ಗದತ್ತ ಬದಲಾವಣೆಯಾದರೂ ಹಳ್ಳದ ಅಗಲೀಕರಣಕ್ಕೆ ಕ್ರಮ ಕೈಕೊಳ್ಳದಿರುವುದು ಆಡಳಿತದ ದಿವ್ಯ ನಿರ್ಲಕ್ಷಕ್ಕೆ ಒಂದು ಉದಾಹರಣೆ. ಬಾರಿ ಮಳೆ ಬಿದ್ದಾಗಲೆಲ್ಲ ಹಳ್ಳ ಉಕ್ಕಿ ಹರಿಯುತ್ತದೆ. ಆಸ್ತಿ-ಪಾಸ್ತಿ ಬೆಳೆಹಾನಿ ಮಾಡುತ್ತ ಜೀವಗಳನ್ನು ನುಂಗಿಹಾಕಿ ತನ್ನ 'ಖ್ಯಾತಿ' ಮೆರೆಯುತ್ತ ಬಂದಿದೆ. ಬೆಣ್ಣೆಹಳ್ಳಕ್ಕೆ ಈ ಹೆಸರು ಹೇಗೆ ಬಂತು ತಿಳಿಯದು. ಆದರೆ ಅದು ಉಕ್ಕಿ ಹರಿದಾಗಲೆಲ್ಲ ಬೆಣ್ಣೆಯ ಮೃದುತ್ವ ಕಳೆದುಕೊಂಡು ಮೃಗೀಯ ವರ್ತನೆ ತೋರುತ್ತದೆ. ಈಗಾಗಿದ್ದೂ ಅದೆ. ಬೆಳಗಾವಿ ಜಿಲ್ಲೆಯಿಂದ ಹರಿದು ಬರುವ 'ತುಪ್ಪರಿ ಎಂಬ ಇನ್ನೊಂದ ದೊಡ್ಡ ಹಳ್ಳ ನವಲಗುಂದ ಹತ್ತಿರ 'ಬೆಣ್ಣೆಹಳ್ಳಕ್ಕೆ ಸೇರುತ್ತದೆ. ಹತ್ತಾರು ಚಿಕ್ಕ ಹಳ್ಳಗಳ ನೀರನ್ನು ತನ್ನ ಒಡಲಿಗೆ ಸೇರಿಸಿಕೊಂಡು ತನ್ನ ಹರಿವನ್ನು ಹೆಚ್ಚಿಸಿಕೊಂಡಿದೆ. ನೀರಿನ ಪ್ರಮಾಣವನ್ನು ಇಮ್ಮಡಿಗೊಳಿಸಿದೆ. ಈ ವರ್ಷ ಬೆಣ್ಣೆಹಳ್ಳಕ್ಕೆ ಬಂದ ನೆರೆಯಿಂದಾಗಿ ನವಲಗುಂದ ತಾಲೂಕಿನ ಗುಡಿಸಾಗರ, ಆರಟ್ಟಿ, ತಡಹಾಳ, ಕೊಂಗವಾಡ ಹಾಗೂ ಅಮರಗೋಳ ಗ್ರಾಮಗಳು ಜಲಾವೃತಗೊಂಡವು. ಗ್ರಾಮಗಳನ್ನು ಸಂಪರ್ಕಿಸುವ 'ಎಲ್ಲ ಮಾರ್ಗಗಳು ಮುಚ್ಚಿಹೋದವು. ನರಗುಂದ ತಾಲೂಕಿನ ಸುರಕೋಡ, ಕುರ್ಲಗೇರಿ ಗ್ರಾಮಗಳಿಗೆ ನೀರು ನುಗ್ಗಿತು. ಸುರಕೋಡ ಗ್ರಾಮ ಶಾಶ್ವತ



ಪುಟ 14 ಕ್ಕೆ

ಬಿಜಾಪುರ : ಮಳೆ ಹಾನಿಯ ಸಂಕ್ಷಿಪ್ತ ಚಿತ್ರ

ಬಿಜಾಪುರ ಜಿಲ್ಲಾಕೇಂದ್ರ, ಹಲವು ಬಡಾವಣೆಯಲ್ಲಿ ನೀರಿನಲ್ಲಿ ಮುಳುಗಿದವು.

ಬಿಜಾಪುರ ತಾಲ್ಲೂಕು : ಇನ್ನು ಮೊಳಕಾಲುವರೆಗೆ ನೀರು ತುಂಬಿಕೊಂಡಿದ್ದು, ಮನೆಗಳು ನೀರಿನಲ್ಲಿ ನೆನೆಯುತ್ತಿರುವಾಗ ಸಂತ್ರಸ್ತರು ಆಶ್ರಯ ಹುಡುಕುತ್ತ ಶಾಲೆ, ಗುಡಿ, ಗುಂಡಾರಗಳಲ್ಲಿ ತಾತ್ಕಾಲಿಕವಾಗಿ ವಾಸ ಆರಂಭಿಸಿದರು. ಮಳೆಯಿಂದ ರಸ್ತೆ ಮಧ್ಯದಲ್ಲಿ ದೊಡ್ಡ ಗುಂಡಿಗಳಾಗಿವೆ. ನೀರಿರುವ ಕಾರಣ ಗುಂಡು ಕಾಣದೆ ವಾಹನಗಳು ಪಲ್ಟಿ ಹೊಡೆಯುತ್ತಿವೆ.



ಇಂಡಿ ತಾಲ್ಲೂಕು : ಇಂಡಿ, ಬಳ್ಳೊಳ್ಳಿ, ಚಿಡಚಣ, ಹೋಬಳಿ ವ್ಯಾಪ್ತಿಯ ಒಟ್ಟು 1,400 ಮನೆಗಳು ಕುಸಿದು ಜನರು ಬೀದಿಪಾಲಾಗಿದ್ದಾರೆ. ಸಾಲೋಟಗಿಯಲ್ಲಿ ಮನೆ ಕುಸಿದು ಓರ್ವ ಬಾಲಕನು ಮೃತಪಟ್ಟಿದ್ದಾನೆ. ಹೊಲಗಳಲ್ಲಿ ಹಲವಾರು ವಡ್ಡು, ಹಳ್ಳಗಳಿಂದ ನೀರಿನಿಂದ ತುಂಬಿ ಹರಿದಿವೆ. ಸೂರ್ಯಕಾಂತಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಗ್ರಾಮೀಣ ಜನತೆಯ ಮಳೆಯಿಂದ ಕೂಲಿನಾಲಿ ಇಲ್ಲದೆ ಮನೆಯಲ್ಲಿ ಇರುವಂತೆ ಆಗಿವೆ. ಮನೆಯಲ್ಲಿ ಕೂಡಿಟ್ಟ ಧವಸದಾನ್ಯಗಳು ಸಂಪೂರ್ಣ ನೀರು, ಮಣ್ಣುಪಾಲಾಗಿದೆ. ಬುಡ ಕುಟುಂಬ ಮತ್ತು ನಿರ್ಗತಿಕರ ಮನೆಗಳು ಕುಸಿದು ನಿರ್ಗತಿಕರಾಗಿದ್ದಾರೆ.

ಚಡಚಣ : ರೇವತಗಾವ ಮಹಾಮಳೆಯಿಂದ ಸಂಪೂರ್ಣ ಕಡೆದು ನಡುಗಡ್ಡೆಯಾಗಿದೆ. ಗ್ರಾಮದ 400 ಮನೆಗಳಲ್ಲಿ 250 ಮನೆ ಕುಸಿದು ಅಪಾರ ನಷ್ಟ ಸಂಭವಿಸಿದೆ.

ಸಿಂಧಗಿ ತಾಲ್ಲೂಕು : 350 ಕ್ಕೂ ಹೆಚ್ಚು ಮನೆ ಬಿದ್ದಿರುತ್ತದೆ. ಮತ್ತು 09 ಜನರು ಮಳೆಹಾವಳಿಗೆ ಬಲಿಯಾಗಿದ್ದಾರೆ. **ಆಲಮೇಲ :** ಆಲಮೇಲದಲ್ಲಿ 200 ಮನೆಗಳು ಕುಸಿದಿವೆ. ಆಲಮೇಲದ ವಿಭೂತಿಹಳ್ಳಿಯಲ್ಲಿ ರಾತ್ರೋರಾತ್ರಿ ನೀರು ಹೊಕ್ಕಿರುವುದರಿಂದ ತಮ್ಮ ಜೀವ ಉಳಿದರೆ ಸಾಕು ಎಂದು ಜನರ ಹೊರಗಡೆ ಬಂದು ಸಂಪೂರ್ಣ ಸಂತ್ರಸ್ತರಾಗಿರುತ್ತಾರೆ.

ಮುದ್ದೇಬಿಹಾಳ : ಮುದ್ದೇಬಿಹಾಳ ತಾಲ್ಲೂಕಿನಾದ್ಯಂತ ಸಾವಿರಾರು ಮನೆಗಳು ಕುಸಿದು ಜನಜೀವನ ಅಸ್ತವ್ಯಸ್ಥವಾಗಿದೆ. ಮುದ್ದೆಬಿಹಾಳ ತಾಲ್ಲೂಕಿನಲ್ಲಿ ಪಾಲೇಕಮ್ಮದಲ್ಲಿ ಸೆಪ್ಟೆಂಬರ್ 30 ರಂದು ಮನೆ ಕುಸಿದು 3 ಜನರು ತೀವ್ರ ಗಾಯಗೊಂಡಿರುತ್ತಾರೆ. ಡುಲ್ಲೂರು ಗ್ರಾಮದಲ್ಲಿ ಮಹಾಪೂರ ಬಂದು ಸಂಚಾರ ವ್ಯವಸ್ಥೇ ಸಂಪೂರ್ಣ ಅಸ್ಥವ್ಯಸ್ಥವಾಗಿರುತ್ತದೆ. ತಾಳಿಕೋಟಿಯಲ್ಲಿ 80ಕ್ಕೂ ಹೆಚ್ಚು ಮನೆ ಬಿದ್ದಿರುತ್ತದೆ.

ಬಿಜಾಪುರ ಜಿಲ್ಲೆಯಲ್ಲಿ	
ಮೃತಪಟ್ಟವರು	31
ಸಿಂಧಗಿ ತಾಲ್ಲೂಕು	09
ವಿಜಾಪೂರ ತಾಲ್ಲೂಕು	08
ಬಸವನ ಬಾಗೇವಾಡಿ ತಾಲ್ಲೂಕು	08
ಇಂಡಿ ತಾಲ್ಲೂಕು	05
ಮುದ್ದೆಬಿಹಾಳ	01
ನಿರಾಶ್ರಿತರು	23,342
ಸಿಂದಗಿ ತಾಲ್ಲೂಕು	5,200
ವಿಜಾಪೂರ ತಾಲ್ಲೂಕು	7,642
ಬಸವನ ಬಾಗೇವಾಡಿ ತಾಲ್ಲೂಕು	3,000
ಇಂಡಿ ತಾಲ್ಲೂಕು	3,500
ಮುದ್ದೆಬಿಹಾಳ	4,500

ಸಂಘರ್ಷ, ಚಳುವಳಿಯ ವಿಸ್ತರಣೆಗೆ ಸಾಕ್ಷಿಯಾದ

ಅಂಗನವಾಡಿ ಅಖಿಲ 6 ನೇ ಭಾರತ ಸಮ್ಮೇಳನ

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಬಲಪಡಿಸಿ, ಸಂಘಟನೆಯನ್ನು ಕ್ರೂಢೀಕರಿಸಲು ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ 6ನೇ ಸಮ್ಮೇಳನ ಚಂಡೀಘಡ, ಪಂಜಾಬ್‌ನಲ್ಲಿ ನಡೆಯಿತು.

ಎಸ್. ವರಲಕ್ಷ್ಮಿ

5ನೇ ಸಮ್ಮೇಳನದಲ್ಲಿ 2 ಲಕ್ಷ 29 ಸಾವಿರ ಸದಸ್ಯತ್ವವಿದ್ದ ಎಐಎಡಬ್ಲ್ಯುಹೆಚ್‌ಎಫ್‌ದ 6ನೇ ಸಮ್ಮೇಳನದೊಳಗೆ 1 ಲಕ್ಷ 57 ಸಾವಿರ ಹೆಚ್ಚಾದದ್ದು ಸಂಘಟನಾತ್ಮಕವಾಗಿ ಸಂಘಟನೆ ಎಷ್ಟು ದೃಢವಾಗಿ ಮುಂದೆ ಸಾಗುತ್ತಿದೆ ಎನ್ನುವುದಕ್ಕೆ ಸಾಕ್ಷಿ. ಈ ಸದಸ್ಯತ್ವ ಬಹಳ ಸುಲಭದಲ್ಲಿ ಆದದ್ದು ಅಲ್ಲ. 3 ವರ್ಷಗಳಲ್ಲಿ ನಡೆದಿರುವ ಅಪಾರ ಹೋರಾಟಗಳು, ಹೋರಾಟಗಳಿಂದ ಬಂದಂತಹ ಸಂಘಟನಾತ್ಮಕ ರಾಜಕೀಯ ಸಂಘಟನಾತ್ಮಕ ಕ್ರೂಢೀಕರಣ, ಸತತವಾಗಿ ನಡೆದ ಕಾರ್ಯಕರ್ತರ ತರಬೇತಿಗಳ ಫಲದಿಂದಾಗಿದ್ದು, ಅವುಗಳ ವಿವರ ಕೆಳಕಂಡಂತಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆ

ಐ.ಸಿ.ಡಿ.ಎಸ್ ಯೋಜನೆಯ ಶಿಶು ಮರಣ, ಶಿಶುವಿನ ಅಸಮರ್ಪಕ ತೂಕ, ಮಹಿಳೆಯರ ಮತ್ತು ಮಕ್ಕಳ ಅಪೌಷ್ಠಿಕತೆ ಮುಂತಾದ ಸಮಸ್ಯೆಗಳನ್ನು ಹತ್ತಿಕ್ಕುವುದಿರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಆದರೂ ಈ ಯೋಜನೆಯೇ ಪೂರ್ಣ ಪರಿಹಾರವಲ್ಲ. ಸರ್ಕಾರದ ತಪ್ಪು ನೀತಿಗಳಿಂದಾಗಿ ಹೆಚ್ಚೆಚ್ಚು ಜನರು ಬಡತನ, ಅಪೌಷ್ಠಿಕತೆ, ಅನಾರೋಗ್ಯಕ್ಕೊಳಗಾಗುತ್ತಿರುವುದೇ ಪರಿಸ್ಥಿತಿಯ ಮೂಲ ಕಾರಣ. ಐಸಿಡಿಎಸ್ ಯೋಜನೆಯನ್ನು ಜಾರಿ ಮಾಡುವ ಮೂಲ ಕಾರ್ಯಕರ್ತರಾದ ಅಂಗನವಾಡಿ ನೌಕರರಿಗೆ ಸೇವಾ ಪರಿಸ್ಥಿತಿಗೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡುವ ಬದಲಿಗೆ ಖಾಸಗಿ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಮುಖಾಂತರ ಯೋಜನೆಯ ಉದ್ದೇಶವನ್ನು ಸಡಿಲಗೊಳಿಸಿದೆ.

ಬರುತ್ತಿರುವ ಬದಲಾವಣೆ

ವಿಕೇಂದ್ರೀಕರಣ ಹಾಗೂ ಸಮುದಾಯ ಪಾಲ್ಗೊಳ್ಳುವಿಕೆಯ ಹೆಸರಿನಲ್ಲಿ ಐಸಿಡಿಎಸ್‌ನ ಒಂದು ಪ್ರಮುಖ ಅಂಶವಾದ ಪೂರಕ ಪೌಷ್ಠಿಕ ಆಹಾರವನ್ನು ಕೊಳ್ಳುವ ಮತ್ತು ವಿತರಿಸುವ ಕೆಲಸದಲ್ಲಿ ಅನೇಕ ಬದಲಾವಣೆಗಳನ್ನು ತರಲಾಗುತ್ತಿದೆ.

ಬಿಹಾರ, ಛತ್ತೀಸ್‌ಗಡ, ಹರ್ಯಾಣ ಮತ್ತು ಮಹಾರಾಷ್ಟ್ರಗಳಲ್ಲಿ ಸ್ವಸಹಾಯ ಗುಂಪುಗಳಿಗೆ, ಅಸ್ಸಾಂ, ಬಿಹಾರ, ಹರಿಯಾಣ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಮಾತೆಯರ ಸಮಿತಿಗಳಿಗೆ ನೀಡಲಾಗುತ್ತಿದೆ.

ಆಂಧ್ರ ಮತ್ತು ಕರ್ನಾಟಕಗಳಲ್ಲಿ ಸ್ವಸಹಾಯ ಗುಂಪುಗಳಿಗೆ ಮಾತ್ರವಲ್ಲದೆ ಸ್ವಯಂ ಸೇವಾ ಮತ್ತು ಧಾರ್ಮಿಕ ಸಂಸ್ಥೆಗಳಾದ ಇಸ್ಕಾನ್‌ನಂಥ ಸಂಸ್ಥೆಗಳಿಗೂ ಕೊಡಲಾಗಿದೆ.

ಯೋಜನೆಗೆ ಬರುವ ಹಣ ಸಮಿತಿಯ ಕಾರ್ಯದರ್ಶಿ ಮತ್ತು ಅಧ್ಯಕ್ಷರ ಜಂಟೀ ಖಾತೆಯಲ್ಲಿರುವುದರಿಂದ ಆ ಹಣ ಪೌಷ್ಠಿಕ ಆಹಾರಕ್ಕೆ ವಿನಿಯೋಗಿಸಲಾಗುತ್ತಿದೆ ಎಂದು ಹೇಳಲು ಸಾಧ್ಯವಿಲ್ಲ. ಆ ಹಣವನ್ನು ಬೇರೆ ಉದ್ದೇಶಗಳಿಗೆ ಉಪಯೋಗಿಸಿ ಅಂಗನವಾಡಿ ನೌಕರರನ್ನು ತಪ್ಪು ಲೆಕ್ಕ ಇಡುವಂತೆ ಒತ್ತಾಯಿಸಲಾಗುತ್ತದೆ. ಹಿಮಾಚಲ ಪ್ರದೇಶದಲ್ಲಿ 9 ತಿಂಗಳಿಗೆ ಮಾತ್ರ ಆಹಾರ ನೀಡಿ 3 ತಿಂಗಳ ಆಹಾರವನ್ನು ಸಮುದಾಯ ಕೊಡಬೇಕೆಂದೂ ಒತ್ತಾಯಿಸುತ್ತಿದೆ. ಈ ಆಹಾರವನ್ನು ಅಂಗನವಾಡಿ ನೌಕರರೇ ಸಂಗ್ರಹ ಮಾಡಬೇಕೆಂದೂ ತಿಳಿಸಲಾಗುತ್ತಿದೆ. ಇದರಿಂದ ಆಹಾರ ವಿತರಣೆಯಲ್ಲಿ ಅಸಮರ್ಪಕತೆ ಎದುರಾಗುತ್ತಿದೆ.

ಚತ್ತೀಸ್‌ಘಡದಂತಹ ರಾಜ್ಯದಲ್ಲಿ ದವಸಧಾನ್ಯಗಳನ್ನು ಗರ್ಭಿಣಿ, ಬಾಣಂತಿಯರಿಗೆ ಸ್ವಸಹಾಯ ಗುಂಪುಗಳ ಮುಖಾಂತರ ವಾರಕ್ಕೊಂದು ದಿನ ಮಾತ್ರವೇ ವಿತರಣೆ, ಆ ದಿನ ರಜೆಯಾದರೆ ಆ ಮಹಿಳೆ ಇಲ್ಲದಿದ್ದರೆ ಅಂದು ಆಹಾರವಿಲ್ಲ, ಅದು ಮುಂದಿನ ವಾರ ಮಾತ್ರವೇ. ಒರಿಸ್ಸಾದ ಕಲಹಂಡಿ ಜಿಲ್ಲೆಯಲ್ಲಿ 'ವೇದಾಂತ' ಎಂಬ ಕಾರ್ಪೊರೇಟ್ ಸಂಸ್ಥೆಗೆ ಅಂಗನವಾಡಿ ಕೇಂದ್ರಗಳನ್ನು ಹಸ್ತಾಂತರಿಸಲಾಗಿದೆ. ಚತ್ತೀಸ್‌ಘಡದಲ್ಲಿ ಬಿಲಾಯ್ ಉಕ್ಕು ಸ್ಥಾವರ ಐಸಿಡಿಎಸ್ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಅಲ್ಲಿನ ಮುಖ್ಯಮಂತ್ರಿಗಳು ಮನವಿ ಮಾಡಿದ್ದಾರೆ. ಅಂದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈಗಾಗಲೇ ಮಕ್ಕಳನ್ನೇ ಗುರಿಯಾಗಿಸಿಕೊಂಡಿರುವ ಖಾಸಗೀ ರಂಗದ ಕೃಪೆಗೆ ಬಿಡಲಾಗಿದೆ.



ಅಂಗನವಾಡಿ ಕೇಂದ್ರಗಳ ಸ್ಥಿತಿಗತಿ

ಶಿಶು ಅಭಿವೃದ್ಧಿ ರಾಷ್ಟ್ರೀಯ ಸಂಸ್ಥೆಯು ನಡೆಸಿದ ಅಧ್ಯಯನವು ದೇಶದ ಶೇ.77 ರಷ್ಟು ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ವ್ಯವಸ್ಥೆಯಿಲ್ಲ, ಸಮರ್ಪಕವಾದ ವ್ಯವಸ್ಥೆಯಿಲ್ಲ, ಶೇ.37 ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣಕ್ಕೆ ಅಗತ್ಯವಿರುವ ಯಾವುದೇ ಸಾಧನ ಸಲಕರಣೆಗಳಿಲ್ಲ, ಶೇ.50 ರಷ್ಟು ಕೇಂದ್ರಗಳಿಗೆ ಪ್ರತ್ಯೇಕ ದಾಸ್ತಾನಿಗೆ ಸ್ಥಳಾವಕಾಶವಿಲ್ಲ, ಶೇ.50 ಕೇಂದ್ರಗಳಲ್ಲಿ ಮಕ್ಕಳಿಗೆ ಅಗತ್ಯವಿರುವ ಒಳಾಂಗಣ ಅಥವಾ ಹೊರಾಂಗಣ ಸ್ಥಳಾವಕಾಶವಿಲ್ಲ. ಮೂರನೆಯ ಒಂದು ಭಾಗದ ಕೇಂದ್ರಗಳಲ್ಲಿ ಅ... ಮಾಡಲು, ಊಟ ಬಡಿಸಲು ಬೇಕಾದ ಪಾತ್ರೆ ... ಇಲ್ಲವಾದ ಕಾರಣ ಫಲಾನುಭವಿಗಳಿಗೆ 'ಪ... ಪಡಿತರ ಕೊಂಡೊಯ್ಯಿರಿ' (take home ra... ನೀತಿ ಜಾರಿಯಲ್ಲಿದೆ. ಕೆಲವೊಮ್ಮೆ ಇದು 3 ತಿ... ಮುಂದುವರೆಯುತ್ತಿದೆ. nippco ಯ ಅಧ್ಯ... ಪ್ರಕಾರ ಶೇ.54 ಅಂಗನವಾಡಿ ಕೇಂದ್ರಗಳಲ್ಲಿ ಮ... ಸರಾಸರಿ 41.3 ದಿನಗಳು ಪೂರಕ ಪೌಷ್ಠಿಕ... ಕ್ರಮದಲ್ಲಿ ಅವ್ಯವಸ್ಥೆ ಉಂಟಾಗುತ್ತಿದ್ದು, ಆ... ವಸ್ತುಗಳ ಪೂರೈಕೆಯಾಗದಿರುವುದೇ ... ಕಾರಣವೆಂದೂ ವರದಿ ಹೇಳುತ್ತಿದೆ. 3 ವರ್ಷ... ಕಡಿಮೆ ವಯಸ್ಸಿನ ಮಕ್ಕಳಿಗೆ ಅಲ್ಲೇ ಆ... ವಿತರಿಸಬೇಕೆಂದಿದ್ದರೂ ಕೂಡಾ ಮನೆಗೆ ಕೊ... ಪದ್ಧತಿ ಕೆಲವೆಡೆ ಇದೆ. ಇದರಿಂದಾಗಿ ನಿಜ... ಫಲಾನುಭವಿಗಳಿಗೆ ಈ ಆಹಾರ ಸಿಗುತ್ತಿಲ್ಲ.

25, 30 ವರ್ಷಗಳಿಂದ ತಮ್ಮ ಇಡೀ ಜೀವ... ಅಂಗನವಾಡಿ ಕೇಂದ್ರಗಳಿಗೆ ಮುಡುಪಿಟ್ಟರೂ ಸ... ಇವರನ್ನು ಖಾಯಂ ಮಾಡುವ ಸ್ಥಿತಿಯ... ಪಾಂಡಿಚೇರಿಯಲ್ಲಿ ಮಾತ್ರವೇ ಇವರನ್ನು ಖ... ಮಾಡಿ 13 ಸಾವಿರ ರೂಗಳನ್ನೊಳಗೊಂಡ ಸ... ಸವಲತ್ತುಗಳನ್ನು ನೀಡು... ಹಿಂದಿನ ಯು... ಸರ್ಕಾರ ನಿವೃತ್ತಿಯ... ವವರೆಗೆ ಸಾಮಾ... ಭದ್ರತೆಯ ಭಾಗ... ಪರಿಹಾರ ಕೊಡುತ್ತೇವೆ... ಪ್ರಧಾನಮಂತ್ರಿ... ಹೇಳಿದ್ದರೂ ... ದೂರಿಯುತ್ತಿ... ವಯಸ್ಸಾಗಿದೆ ಎಂಬ ... ಮೇಲೆ ನೌಕರ... ಬಲವಂತದಿ... ತೆಗೆಯಲಾಗುತ್ತಿದೆ.

ಅಂಗನವಾಡಿ ನೌಕರರ ಸ್ಥಿತಿಗತಿಯಲ್ಲಿ ಕ... ಸುಧಾರಣೆಗಳಾಗಿದ್ದರೂ ಅವರನ್ನು ಶೋಷಿಸ... ಮುಂದುವರಿದೇ ಇದೆ. ನಿರಂತರ ... ಏರಿಕೆಯಿಂದಾಗಿ ಸಂಬಾವನೆ ಹೆಚ್ಚಳವಾ... ಪ್ರಯೋಜನವು ಶೂನ್ಯವಾಗುತ್ತಿದೆ. ಜ... ಸಾಮಾಜಿಕ ಭದ್ರತಾ ಸವಲತ್ತುಗಳನ್ನೊದಗಿಸು... ಜವಾಬ್ದಾರಿಯಿಂದ ಜಾರಿಕೊಳ್ಳಲು ಸರ್ಕಾ... ಪ್ರಯತ್ನಗಳು target ಹೆಸರಿನಲ್ಲಿ ಬಡವರಿಗೆ ನಿ... ಸಬ್ಸಿಡಿಗಳನ್ನು ಕಡಿತಗೊಳಿಸುವ ವಿಚಾ... ಮುಂದುವರಿಯುತ್ತಿವೆ. ವಿಶ್ವಬ್ಯಾಂಕ್ ಶಿಫಾ... ಮಾಡಿರುವಂತೆ 'ಹಣ ವರ್ಗಾವಣೆ' ಮಾ... ಪದ್ಧತಿಯನ್ನು ಐಸಿಡಿಎಸ್, ಪಿಡಿಎಸ್ ಇತ್ಯಾದಿ... ಜಾರಿ ಮಾಡುವ ಬಗ್ಗೆಯೂ ವರದಿಯಾಗು...

2006 ರಲ್ಲಿ ಪರಿಶೀಲನಾ ಸಮಿ... ಶಿಫಾರಸ್ಸುಗಳ ಪ್ರಕಾರ ಅಲ್ಪ ಪ್ರಮಾಣದ ... ಧನವನ್ನು ಹೆಚ್ಚಿಸಿ ಅಧಿಕಾರಕ್ಕಾಗಿ 6 ಗಂಟೆಗ... ಹೆಚ್ಚು ದುಡಿಸಲು ಪ್ರಯತ್ನಿಸಿದೆ. ಇಡೀ... ದುಡಿಸಿಕೊಂಡು ದಿನದ ವೇತನವನ್ನು ಕೊ... ನಿರಾಕರಿಸುತ್ತಿದೆ.



ಪುಟ...

ಮತ್ತೆ ತಲೆಯೆತ್ತಿದೆ ಹಿಂದುತ್ವ ಭಯೋತ್ಪಾದನೆ

ಭಯೋತ್ಪಾದನೆಯನ್ನು ರಾಜಕೀಯ ಬೆಂಬಲ ಗಳಿಸುವ ಸಾಧನವಾಗಿ ಬಳಸುವ ದುಷ್ಟ ಸೈದ್ಧಾಂತಿಕ ವಿಧಾನಗಳ ಹೆಜ್ಜೆ ಗುರುತುಗಳು ವಿಸ್ತರಿಸುತ್ತಿವೆ. ಭಾರತದ ಸಂಕೀರ್ಣ ಸಾಮಾಜಿಕ ಹಂದರವನ್ನು ಮುರಿದು ಬಿಸಾಕಬಹುದಾದ ಇಂತಹ ರಾಜಕೀಯವನ್ನು ಸೋಲಿಸಲೇಬೇಕಾಗಿದೆ.

ಹಿಂದುತ್ವ ಭಯೋತ್ಪಾದನೆ ಮತ್ತೆ ತನ್ನ ಹೊಲಸು ಮುಖ ತೋರಿದೆ. ಗೋವಾದ ಮಡಗಾಂವ್‌ನಲ್ಲಿ ಒಂದು ಸ್ಫೋಟದಲ್ಲಿ ಇಬ್ಬರು ...ತ್ತಿದ್ದಾರೆ. 'ಸನಾತನ ಸಂಸ್ಥಾ' ಎಂಬೊಂದು ಸಂಘಟನೆ ಇದನ್ನು ನಡೆಸಿದೆ ಎಂದು ಕಂಡು ಬಂದಿದೆ.

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ವಿಧಾನ ಸಭಾ ಚುನಾವಣೆಗಳ ಮೊದಲು ನಡೆದ ಕೋಮು ಗಲಭೆಗಳಲ್ಲಿಯೂ ಈ ಸಂಘಟನೆಯ ಪಾತ್ರ ಇತ್ತು ಎಂದು ಪೋಲೀಸ್ ತನಿಖೆಗಳಿಂದ ದೃಢಪಟ್ಟಿದೆ. ಗಲಭೆಗಳ ಸಮಯದಲ್ಲಿ ಈ ಸಂಘಟನೆಯ ಸದಸ್ಯರು ಹಿಂದೂಗಳಿಗೆ ಶಸ್ತ್ರಾಸ್ತ್ರಗಳನ್ನು ಹಂಚಿದ್ದರು, ತಲ್ವಾರುಗಳು ಮತ್ತು ಕರಪಳಿಗಳನ್ನು ಸಾಗಿಸುತ್ತಿದ್ದ ಈ ಸಂಸ್ಥೆಗೆ ಸೇರಿದ ವಾಹನವನ್ನು ಪೋಲೀಸರು ವಶಪಡಿಸಿಕೊಂಡಿದ್ದಾಗಿ ಹಾಗೂ ಈ ಸಂಘಟನೆಯ ಮೂವರನ್ನು ಆಗ ಬಂಧಿಸಿದ್ದಾಗಿ ... ಪೋಲೀಸ್ ಸೂಪರಿಂಟೆಂಡೆಂಟ್ ಹೇಳಿದ್ದಾರೆ. ಕಳೆದ ಜೂನ್ ತಿಂಗಳಲ್ಲೇ ಮಹಾರಾಷ್ಟ್ರದ ಭಯೋತ್ಪಾದನಾ-ವಿರೋಧಿ ದಂಡ(ಎಟಿಎಸ್) ಹಾಗೂ ನಂತರ ಹುತಾತ್ಮರಾದ ಅದರ ಮುಖ್ಯಸ್ಥ ಹೇಮಂತ ಕರ್ಕರೆ ಈ ಸಂಘಟನೆಯನ್ನು ನಿಷೇಧಿಸಬೇಕು ಎಂದು ಮಹಾರಾಷ್ಟ್ರ ಸರಕಾರಕ್ಕೆ ಹೇಳಿದ್ದರಂತೆ- ಜೂನ್ 2008ರಲ್ಲಿ ಅಲ್ಲಿನ ಥಾಣೆಯಲ್ಲಿ ಸ್ಫೋಟದ ಹಿನ್ನೆಲೆಯಲ್ಲಿ. ಎಟಿಎಸ್‌ನ ಈಗಿನ ಮುಖ್ಯಸ್ಥರು ಇದನ್ನು ದೃಢಪಡಿಸುತ್ತಾ ಈ ಬಗ್ಗೆ ಏನು ಕ್ರಮ ವಹಿಸಲಾಗುತ್ತಿದೆ ಎಂದು ತಮಗೆ ತಿಳಿದಿಲ್ಲವೆಂದು ಹೇಳಿದ್ದಾರೆ.

ಹಿಂದುತ್ವ ಭಯೋತ್ಪಾದನೆಯ ಸರಣಿಯಲ್ಲಿ

ಕಳೆದ ವರ್ಷ ಸಪ್ಟೆಂಬರ್ 29ರಂದು ಮಾಲೆಗಾಂವ್ ಸ್ಫೋಟದಲ್ಲಿ ಭಾಗಿಯಾದ್ದರೆಂದು ...ನಿಯಿರುವ 'ಅಭಿನವ ಭಾರತ' ಮತ್ತು 'ಜೈ ವಂದೇ ಮಾತರಂ ಸಮಿತಿ'ಯ ...ರು ಜಬಲ್ಪುರ, ಭೋಪಾಲ ಮತ್ತು ಕಾನ್ಪುರದಿಂದ ಬಂದವರು. ಆದರೆ ಅವರು ಪಿತೂರಿ ಸಭೆಗಳನ್ನು ನಡೆಸಿದ್ದು ಮಹಾರಾಷ್ಟ್ರದ ದೇವಲಾಲಿ ಮತ್ತು ನಾಶಿಕದಲ್ಲಿ. ಮಾಲೆಗಾಂವ್ ಸ್ಫೋಟದಲ್ಲಿ ಭಾಗಿಯಗಿದ್ದಾನೆ ...ನ್ನಲಾದ ರಾಕೇಶ ಧಾವಡೆ 2003ರಲ್ಲಿ ಪುಣೆಯಲ್ಲಿ ಸಿಂಹಗಢ ಕೋಟೆಯಲ್ಲಿ ಬಜರಂಗ ದಳದ ಸದಸ್ಯರಿಗೆ ಒಂದು ಭಯೋತ್ಪಾದನಾ ತರಬೇತಿ ಶಿಬಿರವನ್ನು ಸಂಘಟಿಸಿದ್ದ.

ದೇಶದ ಹಲವೆಡೆ ನಡೆದ ಸ್ಫೋಟಗಳಲ್ಲಿ ಆರೆಸ್ಸೆಸ್ ಸಂಬಂಧಿತ ಸಂಘಟನೆಗಳು ಶಾಮೀಲಾಗಿದ್ದವು ಎಂಬುದನ್ನು ಹಿಂದೆ ನೋಡಿದ್ದೇವೆ. 2003ರಲ್ಲಿ ಮಹಾರಾಷ್ಟ್ರದ ಪರ್ಭಾನಿ, ಜಾಲ್ನಾ ಮತ್ತು ...ಗಾಂವ್ ಜಿಲ್ಲೆಗಳಲ್ಲಿ, 2005ರಲ್ಲಿ ಉತ್ತರಪ್ರದೇಶದ ಮಾವು ಜಿಲ್ಲೆಯಲ್ಲಿ, 2006ರಲ್ಲಿ ಮಹಾರಾಷ್ಟ್ರದ ನಾಂದೇಡ್‌ನಲ್ಲಿ, ಜನವರಿ 2008ರಲ್ಲಿ ತಮಿಳುನಾಡಿನ ತೆಂಕಾಸಿಯ ಆರೆಸ್ಸೆಸ್ ಕಚೇರಿಯ ಬಳಿ, ಆಗಸ್ಟ್ 2008ರಲ್ಲಿ ಕಾನ್ಪುರದಲ್ಲಿ... ಇತ್ಯಾದಿ, ಇತ್ಯಾದಿ. ನಂತರ ಸಪ್ಟೆಂಬರ್ 29, 2008ರಲ್ಲಿ ಎಟಿಎಸ್ ಹಲವು ಆರೆಸ್ಸೆಸ್ ಮಂದಿಯನ್ನು ಹಿಡಿದು ಪ್ರಶ್ನಿಸಿತು. ಸಾಧ್ವಿ ಪ್ರಜ್ಞಾ ಸಿಂಗ್ ಥಾಕುರ್, ನಾಸಿಕದ



ಭೋಂಸಾಲಾ ಮಿಲಿಟರಿ ಸ್ಕೂಲಿನ ಮುಖ್ಯಸ್ಥ ಮುಂತಾದವರನ್ನು ಬಂಧಿಸಲಾಯಿತು.

ಮುಸೊಲಿನಿ-ಹಿಟ್ಲರ್ ಆದರ್ಶ!

ಹಿಂದುಗಳಿಗೆ ಮಿಲಿಟರಿ ತರಬೇತಿಯ ಒಂದು ದೊಡ್ಡ ಇತಿಹಾಸವೇ ಇದೆ. ಸಾವರ್ಕರ್ "ಎಲ್ಲಾ ರಾಜಕೀಯವನ್ನು ಹಿಂದೂಕರಿಸಿ ಮತ್ತು ಹಿಂದುತ್ವವನ್ನು ಮಿಲಿಟರೀಕರಿಸಿ" ಎಂಬ ಘೋಷಣೆ ಕೊಟ್ಟಿದ್ದರು. ಇದರಿಂದ ಪ್ರೇರಣೆ ಪಡೆದ ಆರೆಸ್ಸೆಸ್ ಸಂಸ್ಥಾಪಕ ಹೆಡ್ಗೆವಾರ್‌ರವರ ಗುರು ಡಾ. ಬಿ.ಎಸ್. ಮುಂಜೆಯವರು ಫ್ಯಾಸಿಸ್ಟ್ ಸರ್ವಾಧಿಕಾರಿ ಮುಸೊಲಿನಿಯನ್ನು ಭೇಟಿಯಾಗಲು ಇಟೆಲಿಗೇ ತೆರಳಿದರು! 1931ರ ಮಾರ್ಚ್ 19ರಂದು ಆತನನ್ನು ಭೇಟಿಯಾಗಿ ಅವರು ಬಹಳಷ್ಟು ಆಕರ್ಷಿತರಾದರಂತೆ. ಫ್ಯಾಸಿಸ್ಟರು ತಮ್ಮ 'ಯುವಜನ'ರಿಗೆ ಅಂದರೆ ಗಲಭೆಕೋರರಿಗೆ ನೀಡುತ್ತಿದ್ದ ತರಬೇತಿಯಿಂದ ಪ್ರಭಾವಿತರಾದ ಅವರು ಭಾರತಕ್ಕೆ ಮರಳಿದ ಮೇಲೆ 1935ರಲ್ಲಿ ನಾಶಿಕದಲ್ಲಿ 'ಕೇಂದ್ರ ಹಿಂದು ಮಿಲಿಟರಿ ಶಿಕ್ಷಣ ಸಂಸ್ಥೆ'ಯನ್ನು ಆರಂಭಿಸಿದರು. ಇದರ ಮುಂದುವರೆದ ಪ್ರಕ್ರಿಯೆಯಾಗಿ 1937ರಲ್ಲಿ ಭೋಂಸಾಲಾ ಮಿಲಿಟರಿ ಸ್ಕೂಲ್ ಆರಂಭವಾಯಿತು.

1939ರಲ್ಲಿ ನಾಝಿ ಫ್ಯಾಸಿಸಂ ಅಡಿಯಲ್ಲಿ ಹಿಟ್ಲರ್ ಯೆಹೂದಿ ಜನಗಳ ಮಾರಣ ಹೋಮ ನಡೆಸುತ್ತಿದ್ದಾಗ ಅದನ್ನು ಮೆಚ್ಚಿಕೊಂಡ ಗುರು ಗೋಲ್ವಾಲ್ಕರ್ ಹಿಂದೂಗಳು ಇದರಿಂದ ಒಳ್ಳೆಯ ಪಾಠ ಕಲಿಯಬಹುದು ಎಂದಿದ್ದರಂತೆ. ತೀರಾ ಇತ್ತೀಚೆಗೆ ಬಾಬ್ರಿ ಮಸೀದಿಯನ್ನು ಆರೆಸ್ಸೆಸ್ ಕಬಂಧ ಬಾಹುಗಳು, ವಿಹೆಚ್‌ಪಿ, ಬಜರಂಗ ದಳ ಇತ್ಯಾದಿಗಳ 'ಕರಸೇವಕ'ರು ಕೆಡವಿದಾಗ ಆ ಬಗ್ಗೆ ಈ ಸಂಘಟನೆಗಳ ಮುಖಂಡರು 'ಹೆಮ್ಮೆ' ಪಟ್ಟರು. ಆಗಿನ ಅಲ್ಲಿನ ಬಿಜೆಪಿ ಮುಖ್ಯ ಮಂತ್ರಿ ಒಬ್ಬ ಅನುಭವೀ ಕಾಂಟ್ರಾಕ್ಟರಿಗಿಂತ ತ್ವರಿತವಾಗಿ, ದಕ್ಷತೆಯಿಂದ ತಮ್ಮ ಕರಸೇವಕರು ಧ್ವಂಸಕಾರ್ಯ ನಡೆಸಿದರೆಂದು ಹೆಮ್ಮೆಯಿಂದ ಹೇಳಿಕೊಂಡರು!

ಹೀಗಿರುವಾಗ ಹಿಂದೂ ಭಯೋತ್ಪಾದಕತೆ ಎಂಬ ಪದವನ್ನು ಬಳಸುವ ಬಗ್ಗೆ ಈ ಆರೆಸ್ಸೆಸ್ ಮತ್ತು ಅದರ ವಿವಿಧ ಬಾಹುಗಳು ಆಕ್ಷೇಪ ಎತ್ತುತ್ತಿರುವುದು ನಿಜಕ್ಕೂ ಒಂದು ವೈಚಿತ್ರ್ಯವೇ. ಹೌದು, ಯಾವುದೇ ಧಾರ್ಮಿಕ ಸಮುದಾಯದ ವ್ಯಕ್ತಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದರೆ ಅದಕ್ಕೆ ಇಡೀ ಸಮುದಾಯವನ್ನೇ ಹೊಣೆ ಮಾಡುವುದು ಖಂಡಿತಾ ಸರಿಯಲ್ಲ, ಆದರೆ ಇದು ಎಲ್ಲ ಧರ್ಮಗಳಿಗೂ ಅನ್ವಯಿಸಬೇಕಲ್ಲವೇ? ಆದರೆ ಆರೆಸ್ಸೆಸ್ ಇದನ್ನು ಒಪ್ಪುವುದಿಲ್ಲ. ಅವರು ಇಸ್ಲಾಮೀ ಭಯೋತ್ಪಾದನೆ ಎಂಬ ಪದ ಬಳಸಬಹುದು, ಇತರರು ಮಾತ್ರ ಹಿಂದೂ ಭಯೋತ್ಪಾದನೆ ಎಂಬ ಪದ ಬಳಸಬಾರದು! ಕಳೆದ ವರ್ಷ ಅಕ್ಟೋಬರಿನಲ್ಲಿ ನಡೆದ ಅದರ ಅಖಿಲ ಭಾರತ ಕಾರ್ಯಕಾರಿಣಿ ಮಂಡಳಿಯ "ಬೈಠಕ್" ನಲ್ಲಿ "ಇಸ್ಲಾಮಿ ಭಯೋತ್ಪಾದನೆಯನ್ನು ಹತ್ತಿಕ್ಕಿ" ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಭಯೋತ್ಪಾದನೆಗೆ ಧರ್ಮವೆಂಬುದಿಲ್ಲ...

ಇಷ್ಟೇ ಅಲ್ಲ, ಮಹಾರಾಷ್ಟ್ರದ ಪೋಲೀಸ್ ಪಡೆಗಳು, ವಿಶೇಷವಾಗಿ ಎಟಿಎಸ್‌ನ 'ಯಶಸ್ವಿ' ಕಾರ್ಯಾಚರಣೆಗಳ ಬಗ್ಗೆ ಮುಕ್ತ ಕಂಠದಿಂದ ಹೊಗಳಿದ ಈ ಮಂದಿ ಅದೇ ಎಟಿಎಸ್ ಹಿಂದುತ್ವ ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆ ಆರಂಭಿಸಿದಾಗ ಕೂಗಾಡಿದರು. ಅದೇನೇ ಇರಲಿ, ಇತ್ತೀಚಿನ ಈ ಗೋವಾ ಸ್ಫೋಟದ ತನಿಖೆಯನ್ನು ತ್ವರಿತವಾಗಿ ನಡೆಸಿ ತಕ್ಕ ಕಾನೂನು ಕ್ರಮ ನಡೆಸಬೇಕು. ಅಷ್ಟೇ ಅಲ್ಲ, ಈ ಎಲ್ಲಾ ಸ್ಫೋಟಗಳ ಆಮೂಲಾಗ್ರ ತನಿಖೆ ನಡೆಸಿ. ತಪ್ಪಿತಸ್ಥರನ್ನು ಶಿಕ್ಷಿಸಬೇಕಾದ ಸಮಯವೀಗ ಬಂದಿದೆ.

ಈ ಬೆಳವಣಿಗೆಗಳು ಎರಡು ಅಂಶಗಳನ್ನು ಮತ್ತೊಮ್ಮೆ ಸಾಬೀತು ಮಾಡಿವೆ. ಒಂದು, ಭಯೋತ್ಪಾದನೆಗೆ ಧರ್ಮವೆಂಬುದಿಲ್ಲ ಎಂಬ ಸಂಗತಿ. ಯಾವುದೇ ಭಯೋತ್ಪಾದನೆಯಾಗಲಿ, ಅದು ರಾಷ್ಟ್ರ-ವಿರೋಧಿ, ಆದ್ದರಿಂದ ಆ ಬಗ್ಗೆ ಚೌಕಾಸಿಗೆ ಅವಕಾಶವಿಲ್ಲ, ಅದು ಸ್ವೀಕಾರಾರ್ಹವೂ ಅಲ್ಲ. ಎರಡನೆಯದಾಗಿ, ಈ ಎಲ್ಲಾ ಭಯೋತ್ಪಾದನೆಗಳೂ ಪರಸ್ಪರ ಆಹಾರ ಒದಗಿಸುತ್ತವೆ, ಒಂದನ್ನೊಂದು ಬಲಪಡಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಅವು ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನೇ ನಾಶ ಮಾಡುತ್ತವೆ.

ಭಯೋತ್ಪಾದನೆಯನ್ನು ರಾಜಕೀಯ ಬೆಂಬಲ ಗಳಿಸುವ ಸಾಧನವಾಗಿ ಬಳಸುವ ಇಂತಹ ದುಷ್ಟ ಸೈದ್ಧಾಂತಿಕ ವಿಧಾನಗಳ ಹೆಜ್ಜೆ ಗುರುತುಗಳು ವಿಸ್ತರಿಸುತ್ತಿವೆ. ಒಟ್ಟಾರೆಯಾಗಿ ಚುನಾವಣಾ ಪ್ರಯೋಜನ ಗಿಟ್ಟಿಸಲು ಕೋಮುವಾದಿ ಧ್ರುವೀಕರಣ ಅಥವಾ ಪ್ರಾದೇಶಿಕ ಸಂಕುಚಿತತೆಯ ಮೂಲಕ ಬಡಿದೆಬ್ಬಿಸುವ ಭಯೋತ್ಪಾದನೆ ಖಂಡಿತವಾಗಿಯೂ ಭಾರತದ ಸಂಕೀರ್ಣ ಸಾಮಾಜಿಕ ಹಂದರವನ್ನು ಮುರಿದು ಬಿಸಾಕುವಂತದ್ದು. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಅಡಿಪಾಯವನ್ನು ಕಾಯ್ದುಕೊಂಡು ಅದನ್ನು ಬಲಪಡಿಸಬೇಕಾದರೆ ಇಂತಹ ರಾಜಕೀಯವನ್ನು ಸೋಲಿಸಲೇಬೇಕಾಗಿದೆ.

('ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಸಂಪಾದಕೀಯದ ಕನ್ನಡ ರೂಪ)

ಆಹಾರದ ಹಕ್ಕಿಗಾಗಿ ಆಂದೋಲನ

ಆಹಾರದ ವ್ಯಾಪಾರದಲ್ಲಿ ಜೂಜಾಟ.... ಜನತೆಗೆ ಬೆಲೆ ಏರಿಕೆಯ ಪ್ರಾಣ ಸಂಕಟ

ಬೆಲೆ ಏರಿಕೆಗೆ ಜನಸಂಖ್ಯೆ ಹೆಚ್ಚಳದಿಂದ ಆರಂಭಿಸಿ ಏನೇನೋ ಕಾರಣಗಳನ್ನು ನೀಡಲಾಗುತ್ತದೆ. ಆದರೆ ಆಹಾರ ವಸ್ತುಗಳ ಬೆಲೆ ಏರಿಕೆ ನಿಜವಾದ ಕಾರಣವೇನು?

ಕೊಳೆಯುವಷ್ಟು ಹಣಕಾಸು ಬಂಡವಾಳದ ಶೇಖರಣೆ

↓

ಹಣಕಾಸು ಬಂಡವಾಳದ ಲಂಗುಲಗಾಮಿಲ್ಲದ ಹರಿದಾಟ : ಜಾಗತೀಕರಣ

↓

ಶೇರು ಮಾರುಕಟ್ಟೆಯ ದಿಢೀರ್ ಏರಿಕೆ - ಜೂಜಾಟ, ದಿಢೀರ್ ಲಾಭ

↓

ಶೇರು ಮಾರುಕಟ್ಟೆ ಕುಸಿತ ಬಂಡವಾಳ ಪಲಾಯನ

↓

ಚಿನ್ನ, ಪೆಟ್ರೋಲ್, ಆಹಾರ ಮಾರುಕಟ್ಟೆಗಳಲ್ಲಿ ಕೊಳೆತ ಹಣದ ಹೂಡಿಕೆ

↓

ಆಹಾರ, ಪೆಟ್ರೋಲ್‌ನಲ್ಲಿ ಭವಿಷ್ಯದ ಮಾರುಕಟ್ಟೆ ವಾಯಿದ ಮಾರುಕಟ್ಟೆಗಳ ಸ್ಥಾಪನೆ ಜೂಜಾಟಕ್ಕೆ ಅವಕಾಶ

↓

ಚಿನ್ನ, ಆಹಾರ, ಪೆಟ್ರೋಲ್‌ಗಳ ಬೆಲೆ ವಿಪರೀತ ಏರಿಕೆ

↓

ಜನರಲ್ಲಿ ಅನ್ನಕ್ಕಾಗಿ ಪರದಾಟ

ಜಿ.ಎನ್.ನಾಗರಾಜ್

ಸಾಮಾನ್ಯವಾಗಿ ಬೆಲೆ ಏರಿಕೆ ಏಕೆ?

ವಸ್ತುಗಳ ಬೆಲೆ ಆಯಾ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಇರುವ ಬೇಡಿಕೆ ಹೆಚ್ಚಾಗಿ, ಆ ವಸ್ತುವಿನ ಸರಬರಾಜು ಕಡಿಮೆಯಾದರೆ ಆಗ ಬೆಲೆ ಏರಿಕೆಯಾಗುತ್ತದೆ ಎಂಬುದು ಮಾರುಕಟ್ಟೆಯ ಮೂಲಭೂತ ನಿಯಮ. ಆಹಾರ ಉತ್ಪಾದನೆ ಕಡಿಮೆಯಾಗಿ ಬೇಡಿಕೆ ಬಹಳ ಹೆಚ್ಚಾದರೆ ಆಗ ಆಹಾರ ವಸ್ತುಗಳ ಬೆಲೆ ಬಹಳ ಹೆಚ್ಚಾಗುತ್ತದೆ.

ಇತ್ತೀಚಿನ ಬೆಲೆ ಏರಿಕೆಗೆ ಆಹಾರದ ಕೊರತೆ ಕಾರಣವೇ?

ಭಾರತದಲ್ಲಿ ಆಹಾರದ ಉತ್ಪಾದನೆಯಲ್ಲಿ ಕೊರತೆಯಿದೆ ಎಂಬುದು ನಿಜ. ಆಹಾರದ ವಸ್ತುಗಳ ಆಮದಿಗೆ ಮುಕ್ತ ಅವಕಾಶ ಇದ್ದು ಪ್ರಪಂಚದ ಯಾವ ದೇಶದಿಂದಲಾದರೂ ಆಹಾರ ವಸ್ತುಗಳನ್ನು ತರಿಸಿಕೊಳ್ಳಬಹುದಾಗಿದೆ. ವಿಶ್ವದ ಮಟ್ಟದಲ್ಲಿ ಕೃಷಿ ಉತ್ಪಾದನೆ ಶೇ.5.4 ರಷ್ಟು ಹೆಚ್ಚಾಗಿದೆ. ವಿಶ್ವದಲ್ಲಿ ಹೆಚ್ಚು ಆಹಾರಧಾನ್ಯ ದಾಸ್ತಾನಾಗಿದೆ. ಆದ್ದರಿಂದ ಆಹಾರ ಕೊರತೆಯಿಂದಾಗಿ ಅವುಗಳ ಬೆಲೆ ಏರಿಕೆ ಹೆಚ್ಚಾಗಿದೆ ಎಂಬುದು ನಿಜವಲ್ಲ.

ಡಾಲರ್ ಎಂಬ ಮಾರಾಟದ ವಸ್ತು

ಎರಡನೇ ಮಹಾ ಯುದ್ಧದ ನಂತರ ಬ್ರಿಟಿಷ್ , ಫ್ರೆಂಚ್ ಮೊದಲಾದ ಸಾಮ್ರಾಜ್ಯಗಳು ಕುಸಿದ ನಂತರ ಡಾಲರು ವಿಶ್ವ ವಿನಿಮಯದ ಹಣವಾಯಿತು. ಜಗತ್ತಿನ ವ್ಯಾಪಾರ ಡಾಲರುಗಳಲ್ಲಿ ನಡೆಯುವುದಕ್ಕೆ ಆರಂಭವಾಯಿತು. ಅಮೇರಿಕ ವಿಶ್ವದಲ್ಲಿ ಹೂಡಿದ ಅನೇಕ ಯುದ್ಧಗಳಿಗೆ 1953 ರಲ್ಲಿ ಕೊರಿಯಾ ಯುದ್ಧ, 1960, 70 ರ ದಶಕದಲ್ಲಿ ವಿಯೆಟ್ನಾಂ ಯುದ್ಧ, ಇತರ ಅನೇಕ ಸಣ್ಣ ದೊಡ್ಡ ಯುದ್ಧಗಳಿಗೆ ಹಣ ಪೂರೈಸಲು ಅಮೇರಿಕ ವಿಪರೀತವಾಗಿ ಡಾಲರುಗಳನ್ನು ಮುದ್ರಿಸಿತು. ವಸ್ತುಗಳನ್ನು ಕೊಳ್ಳುವುದಕ್ಕೆ ಹಣವನ್ನು ಬಳಸಲಾಗುತ್ತದೆ. ಆದರೆ ಹಣವೇ ಒಂದು ವಸ್ತುವಲ್ಲ. ಹಣವನ್ನು ಯಾರೂ ಕೊಳ್ಳುವುದಿಲ್ಲ. ತಮ್ಮ ದುಡಿಮೆಗೆ ದುಡಿಯುವ ಜನರ ಮೈಯಲ್ಲಿರುವ ಶ್ರಮಶಕ್ತಿಯ ಮಾರಾಟಕ್ಕೆ ಪ್ರತಿಫಲವಾಗಿ ಹಣವನ್ನು ವೇತನವಾಗಿ ಪಡೆಯುತ್ತಾರೆ. ತಾವು ಉತ್ಪಾದಿಸಿದ ವಸ್ತುವಿನ ಮಾರಾಟಕ್ಕೆ ಪ್ರತಿಫಲವಾಗಿ ಹಣವನ್ನು ಪಡೆಯುತ್ತಾರೆ. ಉದಾಹರಣೆಗೆ ರೈತರು . ಆದರೆ ಡಾಲರ್ ತಾನೇ ಒಂದು ಮಾರಾಟದ ವಸ್ತುವಾಗಿಬಿಟ್ಟಿತು. ತನಗೆ ಬೇಕಾದಾಗಲೆಲ್ಲಾ ಅಮೇರಿಕ ಡಾಲರು ಗಳನ್ನು ಮುದ್ರಿಸಿ, ಮುದ್ರಿಸಿ ಜಗತ್ತಿನ ಮಾರುಕಟ್ಟೆಗೆ ಬಿಡುಗಡೆ ಮಾಡಿತು. ಜಾಗತಿಕ ವ್ಯಾಪಾರಿಗಳು, ಕಳ್ಳ ಹಣವನ್ನು ಸಂಪಾದಿಸಿ ವಿದೇಶದ ಬ್ಯಾಂಕ್‌ಗಳಲ್ಲಿ ಶೇಖರಿಸುವವರು ಹೀಗೆ ಅನೇಕ ಉಪಯೋಗಕ್ಕಾಗಿ ಡಾಲರನ್ನು ಕೊಳ್ಳಲಾರಂಭಿಸಿದರು. 1970 ರ ದಶಕದಲ್ಲಿ ಪೆಟ್ರೋಲ್ ದರಗಳು ತೀವ್ರವಾಗಿ ಏರಿದ್ದರಿಂದ ದಿಢೀರನೆ ಡಾಲರುಗಳ ಪ್ರವಾಹ ವಿಶ್ವದ ಬ್ಯಾಂಕ್‌ಗಳಿಗೆ ಹರಿದುಬಂದಿತು. ಹಾಗೆಯೇ ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಅಮೇರಿಕ ಮೊದಲಾದ ಸಾಮ್ರಾಜ್ಯಶಾಹಿ ದೇಶಗಳು ಶೋಷಣೆ ಮಾಡುತ್ತಿರುವುದರಿಂದ ಪಡೆದ ಅಪಾರ ಲಾಭಗಳ ವಿಶ್ವದ ಬ್ಯಾಂಕ್



ಮೊದಲಾದ ಹಣಕಾಸು ಸಂಸ್ಥೆಗಳಿಗೆ ಹೆಚ್ಚು ಹಣ ಶೇಖರವಾಯಿತು.

ಹೀಗೆ ವಿಪರೀತ ಹಣ ಜಗತ್ತಿನ ಕೃಷಿ ಮತ್ತು ಕೈಗಾರಿಕಾ ಉತ್ಪಾದನೆ ಮಾರಾಟ ಇವುಗಳಿಗೆ ಅವಶ್ಯವಾದದ್ದಕ್ಕಿಂತ ವಿಪರೀತ ಹೆಚ್ಚು ಹಣ ಶೇಖರವಾಗಿ ಕುಣಿಯಲಾರಂಭಿಸಿತು.

ಹಣಕಾಸು ಬಂಡವಾಳದ ಲಂಗುಲಗಾಮಿಲ್ಲದ ಹರಿದಾಟ

ಹೀಗೆ ವಿಶ್ವದ ಬ್ಯಾಂಕ್‌ಗಳಲ್ಲಿ ಅಮೇರಿಕ, ಯುರೋಪ್, ಜಪಾನ್ ಮೊದಲಾದ ದೇಶದ ಬೃಹತ್ ಬ್ಯಾಂಕ್‌ಗಳಲ್ಲಿ ಅತಿಯಾದ ಹಣ ಶೇಖರವಾಯಿತು. ಬ್ಯಾಂಕ್‌ಗಳಲ್ಲಿ ಶೇಖರವಾದ ಹಣಕ್ಕೆ ಪ್ರತಿ ಕ್ಷಣ ಲಾಭ ಬೇಕು. ವಸ್ತುಗಳ ವ್ಯಾಪಾರಕ್ಕಿಂತ ಬಹಳ ಹೆಚ್ಚು ಪ್ರಮಾಣದ ಹಣ ಶೇಖರವಾದ್ದರಿಂದ ವಸ್ತುಗಳ ವ್ಯಾಪಾರದಲ್ಲಿ ಇಷ್ಟೊಂದು ಪ್ರಮಾಣದ ಹಣಕ್ಕೆ ಲಾಭ ಸಿಗುವುದು ಸಾಧ್ಯವಿರಲಿಲ್ಲ. ಇನ್ನು ಜಗತ್ತಿನ ವಿವಿಧ ಕೈಗಾರಿಕೆಗಳಲ್ಲಿ ಹಣ ಹೂಡಿ ಲಾಭ ಪಡೆಯೋಣವೆಂದರೆ ಜನಸಾಮಾನ್ಯರಲ್ಲಿ ಹಣವಿಲ್ಲದೆ ಉತ್ಪಾದಿಸಿದ ವಸ್ತುಗಳು ಕೊಳೆಯಲಾರಂಭಿಸಿದ್ದವು. ಆಗ ವಿಶ್ವದ ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿ ಶೇರುಗಳ ದರಗಳನ್ನು ಏರಿಸಿ ಇಳಿಸಿ ಲಾಭ ಮಾಡುವ ದಾರಿಯನ್ನು ಕಂಡುಕೊಳ್ಳಲಾಯಿತು.

ವಿಶ್ವದ ಅನೇಕ ದೇಶಗಳಲ್ಲಿ ವಸ್ತುಗಳ ವ್ಯಾಪಾರಕ್ಕೆ, ಶೇರು ಮಾರುಕಟ್ಟೆಯಲ್ಲಿ ಹಣ ಹೂಡುವುದಕ್ಕೆ, ಹೂಡಿದ ಹಣವನ್ನು ವಾಪಸ್ ಪಡೆದು ಹೆಚ್ಚು ಲಾಭ ಬರುವ ಮತ್ತೊಂದು ಕ ಹಾರುವ ಅವಕಾಶಕ್ಕೆ ಒತ್ತಡ ಹಾಕಲಾಯಿತು

ಇದೇ ಜಾಗತೀಕರಣ. ಅದಕ್ಕಾಗಿ ಖಾಸಗೀಕರಣ, ಉದಾರೀಕರಣ

ಪ್ರತಿದಿನ ನೂರಾರು ಲಕ್ಷ ಕೋಟಿ ರೂ.ಗಳಷ್ಟು ಬೆಲೆಯ ಹಣಕಾಸು ಬಂಡವಾ ಜಗತ್ತಿನಲ್ಲಿ ಹರಿದಾಡುತ್ತದೆ. ಇದು ಜಗತ್ತಿನ ವಸ್ತುಗಳ ವ್ಯಾಪಾರಕ್ಕೆ ಅಗತ್ಯವಾದದ್ದಕ್ಕಿಂತ 50 ರಷ್ಟು ಹೆಚ್ಚು ಹಣ. ಹೀಗೆ ವಸ್ತುಗಳನ್ನು ಕೊಳ್ಳುವುದಕ್ಕಿಂತ ಶೇರು ಮಾರುಕಟ್ಟೆ ವಸ್ತುಗ ಭವಿಷ್ಯದ ಮಾರುಕಟ್ಟೆಗಳಿಗೆ ಬಹಳ ಹೆಚ್ಚು ಹ ಹೂಡಲ್ಪಡುತ್ತಿದೆ.

ಶೇರು ಮಾರುಕಟ್ಟೆಯ ದಿಢೀರ್ ಏರಿಕೆ, ದಿಢೀರ್ ಲಾಭ

ಹೀಗೆ ಹಣ ಹೊಸ ಕೈಗಾರಿಕೆಗಳನ್ನು ಸ್ಥಾ ಜನರಿಗೆ ಉದ್ಯೋಗ ನೀಡುವುದಕ್ಕೆ ಬದಲಾಗಿ ಈಗಾಗಲೇ ಇದ್ದ ಕೈಗಾರಿಕೆಗಳನ್ನು ಅದರಲ್ಲೂ ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಕೈಗಾರಿಕೆಗಳ ಶೇರುಗಳನ್ನು ಕೊಳ್ಳಲು ಹೂಡಲಾಯಿತು. ಹೀಗೆ ದೊಡ್ಡ ಪ್ರಮಾಣದ ವಿದೇಶಿ ಹಣಕಾಸು ಸಂಸ್ಥೆಗಳ ಹಣ ಹರಿದುಬಂದಿದ್ದರಿಂದ ವಿವಿಧ ಕಂಪನಿಗಳ ಶೇರುಗಳಲ್ಲಿ ತೀವ್ರ ಏರಿಕೆ, ಶೇರು ದಲ್ಲಾಳಿಗ ಅಗಾಧ ಪ್ರಮಾಣದ ಮೋಸದಾಟಗಳು ದಿನನಿತ್ಯದ ಮಾತಾಯಿತು.

ಮೊದಲು ಬಾಂಬೇ ಶೇರುಮಾರುಕಟ್ಟೆಯ ಸೂಚ್ಯಾಂಕ ಒಂದು ಸಾವಿರ ಪಾಯಿಂಟ್ ಜ ಕಾಣಲು 10 ವರ್ಷಗಳು ಬೇಕಾಗುತ್ತಿತ್ತು. ಆ 2007, 2008 ರ ವರ್ಷಗಳಲ್ಲಿ ಒಂದೇ ದಿನ ಸರಿಸುಮಾರು ಸಾವಿರ ಪಾಯಿಂಟ್‌ನಷ್ಟು, ಕೆಲವೇ ದಿನಗಳಲ್ಲಿ 4 ರಿಂದ 5 ಸಾವಿರ ಪಾಯಿಂಟ್‌ನಷ್ಟು ಸೂಚ್ಯಾಂಕಗಳ ಏರಿಕೆ ಉಂಟಾಯಿತು.

ಕೆಲವೊಮ್ಮೆ ಕೈಗಾರಿಕೆಗಳಲ್ಲಿ ನಷ್ಟವಾಗಿ, ಮುಚ್ಚಿಕೊಂಡು ತುಕ್ಕು ಹಿಡಿದ ಹಲವು ವರ್ಷಗಳ ಮೇಲೆ ಆ ಕಾರಖಾನೆಗಳ ಶೇರುಗಳು 30 ರಿಂದ 40 ಪಟ್ಟು ಏರಿದ್ದೂ ಉಂಟು.

ಬೆಳಗ್ಗೆ ಶೇರುಗಳನ್ನು ಕೊಂಡು ಸಾಯಂಕಾಲ ಮಾರಿ ಲಕ್ಷಾಂತರ, ಕೋಟ್ಯಾಂತರ ರೂ. ಲಾಭ ಮಾಡಿಕೊಳ್ಳಲಾಗಿದೆ.


ಶೇರು ಮಾರುಕಟ್ಟೆಯ ದಿಢೀರ್ ಕುಸಿತ

ಹೀಗೆ ನಿರಂತರವಾಗಿ ವೇಗವಾಗಿ ಏರುತ್ತಾ, ಏರುತ್ತಾ ಮೇಲೆ ಮೇಲೆ ಹೋಗುತ್ತಿದ್ದ ವಿಶ್ವಾದ್ಯಂತದ ಶೇರು ಮಾರುಕಟ್ಟೆಗಳು 1990 ರ ದಶಕದ ಕೊನೆಯಲ್ಲಿ ದಿಢೀರ್ ಕುಸಿತ ಕಾಣಲಾರಂಭಿಸಿದುವು. ಭಾರತದಲ್ಲಿ 2000 ರ ದಶಕದಲ್ಲಿ ದಿಢೀರ್ ಕುಸಿತ [illegible]ಲಾರಂಭಿಸಿದುವು. ಲಕ್ಷಗಟ್ಟಲೆ ಜನ ಶೇರು ಮಾರುಕಟ್ಟೆಯ ಆಘಾತದಿಂದ ನಷ್ಟಕ್ಕೊಳಗಾದರು.

ಪೆಟ್ರೋಲ್, ಚಿನ್ನ, ಆಹಾರ ವಸ್ತುಗಳತ್ತ ಜೂಜುಕೋರ ಬಂಡವಾಳ

ಹೀಗೆ ಶೇರು ಮಾರುಕಟ್ಟೆಗಳಲ್ಲಿ ದಿಢೀರ್ ಲಾಭ ಪಡೆಯುವ ಕನಸು ಸುಳ್ಳಾಗತೊಡಗಿದಂದಿನಿಂದ ಕೊಳೆಯುತ್ತಿರುವ ಹಣಕಾಸು ಬಂಡವಾಳದ ಪರ್ವತದ ಮೇಲೆ ಕುಳಿತಿರುವ ಜೂಜುಕೋರ ಬಂಡವಾಳಶಾಹಿಗಳ ಕಣ್ಣು ಲಾಭ ತರುವ ಇತರ ದಾರಿಗಳನ್ನು ಹುಡುಕಾಡ ತೊಡಗಿತು. ಆಗ ಇವರ ಕೆಟ್ಟ ಕಣ್ಣಿಗೆ ಬಿದ್ದದ್ದೇ ಪೆಟ್ರೋಲ್‌ನಂತಹ ವಸ್ತು.





ಜಗತ್ತು ಪೆಟ್ರೋಲಿಲ್ಲದೆ ಒಂದು ಕ್ಷಣವೂ ಚಲಿಸಲಾರದು. ಹೀಗಾಗಿ ಪೆಟ್ರೋಲ್ ವಸ್ತುಗಳ ಉಪಯೋಗ ದಿನದಿಂದ ದಿನಕ್ಕೆ ಏರುತ್ತಲೇ ಇರುತ್ತದೆ. ಅದರ ಮೇಲೆ ಹಣ ಹಾಕಿದರೆ ನಿರಂತರ ಹಾಗೂ ದಿಢೀರ್ ಲಾಭ ಗ್ಯಾರಂಟಿ. ಆದ್ದರಿಂದ ಪೆಟ್ರೋಲ್ ಕಡೆಗೆ ಕೊಳೆತ ಹಣಕಾಸು ಹರಿಯತೊಡಗಿತು. ಇದರಿಂದಾಗಿ ಪೆಟ್ರೋಲ್‌ಬೆಲೆ 25 ರಿಂದ 30 ಡಾಲರುಗಳಿಂದ 150 ಡಾಲರುಗಳಿಗೆ ಕೇವಲ ಕೆಲವೇ ತಿಂಗಳುಗಳಲ್ಲಿ ಏರಿತು. ಕೆಲವೇ ಕೆಲವು ಲಕ್ಷಾಂತರ ಕೋಟಿಗಳ ಒಡೆಯರ ಧನದಾಹಕ್ಕೆ ಇಡೀ ಜಗತ್ತಿನ ಜನವೇ ಉಬ್ಬಸ ಪಡುವಂತಾಯಿತು. ಆದರೆ ಈ ಏರಿಕೆಗೂ ಒಂದು ಕೊನೆ ಬಂದಿತು. ಜುಲೈ 2008 ರಲ್ಲಿ 150 ಡಾಲರುಗಳಿಂದ ಡಿಸೆಂಬರ್ ತಿಂಗಳ ವೇಳೆಗೆ 40 ಡಾಲರುಗಳಿಗೆ ಕುಸಿಯಿತು. ಪೆಟ್ರೋಲ್‌ನ ಬೆಲೆಯಲ್ಲಿ ಆಟವಾಡಿ ಕೋಟ್ಯಾಂತರ ಡಾಲರು ಲಾಭ ಮಾಡಿಕೊಂಡು ಅಲ್ಲಿಂದ ಪಲಾಯನ ಮಾಡಿದ ಬಂಡವಾಳ ಈಗ ಚಿನ್ನ ಹಾಗೂ ಆಹಾರಗಳತ್ತ ಮುಖಮಾಡಿದೆ.

ಆಹಾರ ವ್ಯಾಪಾರದಲ್ಲಿ ಜೂಜಾಟ ವಾಯಿದಾ, ಭವಿಷ್ಯ ಮಾರುಕಟ್ಟೆಗಳ ಸ್ಥಾಪನೆ

ಇಂತಹ ಜೂಜುಕೋರ ಕೊಳೆತ ಬಂಡವಾಳವನ್ನು ನಮ್ಮ ದೇಶಕ್ಕೆ ಸ್ವಾಗತಿಸುವುದಕ್ಕಾಗಿ ನಮ್ಮ ದೇಶದ ಕಾನೂನು ನಿಯಮಗಳ, ನಿಯಂತ್ರಣಗಳ ಭದ್ರಕೋಟೆಯನ್ನು ಒಡೆಯಲಾಯಿತು. ಅದಕ್ಕಾಗಿಯೇ ಸ್ವಾತಂತ್ರ್ಯ ಬಂದ ಮೇಲೆ ಹಲವಾರು ದಶಕಗಳ ಕಾಲ ನಿಷೇಧಿಸಲಾಗಿದ್ದ ಭವಿಷ್ಯದ ಮಾರುಕಟ್ಟೆಯನ್ನು ತೆರೆಯಲಾಯಿತು. ಅದಕ್ಕಾಗಿ ನಿಯಮಗಳನ್ನು ಸಡಿಲಿಸಲಾಯಿತು. ಹೇಗೆ ಈ ಹಣ ಆಹಾರ ಮತ್ತು ಕೃಷಿ ವಸ್ತುಗಳ ಭವಿಷ್ಯದ ಮಾರುಕಟ್ಟೆಗೆ ನುಗ್ಗಿಬಂದಿದೆಯೆಂದರೆ 2006 ರಲ್ಲಿ ಬಾಂಬೆ ಷೇರು ಮಾರುಕಟ್ಟೆಯಲ್ಲಿ 9,20,000 ಕೋಟಿ ರೂ.ನಷ್ಟು ಹೂಡಿಕೆಯಾದರೆ, 'ಭವಿಷ್ಯದ ಮಾರುಕಟ್ಟೆ' ಯಲ್ಲಿ ಅದಕ್ಕಿಂತ ಹೆಚ್ಚು 11,30,000 ಕೋಟಿ ರೂ. ನಷ್ಟು ಹಣ ಹೂಡಿಕೆಯಾಯಿತು. 2008 ರಲ್ಲಿ ಅದು 15 ಲಕ್ಷ ಕೋಟಿ ರೂ.ಗಿಂತ ಹೆಚ್ಚಾಗಿದೆ. ಈ ರೀತಿ ನುಗ್ಗಿದ ಕೊಳೆತ ಹಣ ಜನರ ಜೀವಗಳೊಡನೆ ಚೆಲ್ಲಾಟವಾಡುತ್ತಿದೆ. ಆಹಾರದ ಬೆಲೆಗಳನ್ನು ಧಿಡೀರನೆ ಏರಿಸಿದೆ. ಈಗ ಅಕ್ಕಿ 40 ರೂ. ತೊಗರಿಬೇಳೆ 100 ರೂ. ಎಣ್ಣೆ 80 ರೂ.ವರೆಗೆ ಮುಟ್ಟಿಸಿದೆ. ಒಟ್ಟಿನಲ್ಲಿ ಭೀಕರವಾದ ಬೆಲೆ ಏರಿಕೆಗೆ ಪ್ರಮುಖ ಕಾರಣ ಆಹಾರದ ಮಾರುಕಟ್ಟೆಗೆ ನುಗ್ಗಲು ಬಿಟ್ಟಿರುವ ಜೂಜುಕೋರ ಬಂಡವಾಳ. ಆದ್ದರಿಂದ ದೇಶದಲ್ಲಿ ಸ್ವಾತಂತ್ರ್ಯ ಬಂದ ದಿನದಿಮದ ಹಲವಾರು ದಶಕಗಳ ಕಾಲ ಇದ್ದಂತೆ ಭವಿಷ್ಯದ ಮಾರುಕಟ್ಟೆ ಎಂಬ ಜೂಜಾಟವನ್ನು ತಕ್ಷಣವೇ ನಿಷೇಧಿಸಬೇಕು.

ಬೆಂಗಳೂರು: ಪ್ರಮುಖ ಆಹಾರ ವಸ್ತುಗಳ ಬೆಲೆ ಏರಿಕೆ (ಎರಡು ವರ್ಷಗಳಲ್ಲಿ)

ಆಹಾರ ವಸ್ತು	ಪೇಟೆ ಧಾರಣೆ ಅಕ್ಟೋಬರ್ 15, 2009 (ಕೆ.ಜಿ.ಗೆ ರೂ.)*	ಪೇಟೆ ಧಾರಣೆ ಅಕ್ಟೋಬರ್ 15, 2007 (ಕೆ.ಜಿ.ಗೆ ರೂ.)*	ಏರಿಕೆ ದರ (ಶೇಕಡಾವಾರು)
ಅಕ್ಕಿ	29-38	14-20	ದುಪ್ಪಟ್ಟು
[illegible]	9-11	7.50-7.90	ಶೇ. 25
[illegible]	16-18	13-15.40	ಶೇ. 20
[illegible]	27-33	13.40-15.00	ದುಪ್ಪಟ್ಟು
[illegible]	7.9-11	8.4-9.0	ಶೇ. 20
ಆಲೂಗಡ್ಡೆ (ದೊಡ್ಡ)	12-18	10-14	ಶೇ. 30
ಈರುಳ್ಳಿ (ದೊಡ್ಡ)	14-15	11-13	ಶೇ. 15
ತೊಗರಿ ಬೇಳೆ	68-80	37-41	ದುಪ್ಪಟ್ಟು
ಉದ್ದಿನ ಬೇಳೆ	56-69	30-31	ದುಪ್ಪಟ್ಟಿಗಿಂತ ಹೆಚ್ಚು
[illegible]	55-68	26-28	ಎರಡೂವರೆ ಪಟ್ಟು
ಸಕ್ಕರೆ	29-30	13-14	ದುಪ್ಪಟ್ಟಿಗಿಂತ ಹೆಚ್ಚು
[illegible]	40-50	14.20-17.40	ಮೂರುಪಟ್ಟು
[illegible]	50-58	42-44	ಶೇ. 20

* [illegible]

ಅನ್ನ ಯಜ್ಞ

ಕೂಸುಗಳಿಗೆ ಹಾಲು ಇಲ್ಲ,
ಪಶುಬಲಿಯೇ ನಡೆದಿದೆ
ಕಾಳು ಇದೆ ಕೂಳು ಇಲ್ಲ ಹಣದ ಹುಚ್ಚು ಹಿಡಿದಿದೆ
ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ,
ಎಲ್ಲ ಇದೆ ಎಲ್ಲ ಇಲ್ಲ, ಇಲ್ಲೆ ಸುತ್ತು ಮುತ್ತಿದೆ

ಸಾಕು ಎಂಬುವಂತೆ ನೀಡು, ಬೇಕು ಎಂಬ ಹೊತ್ತಿಗೆ
ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದ ಹೊಟ್ಟೆ-ನೆತ್ತಿಗೆ

ಬರುವ ಸಾವ ನೆನೆದು ಕೆಲವು ತಿನ್ನುತಿಹವು ಹೆಚ್ಚಿಗೆ
ಕಾಳು ಸಾಲದೀಗ ಜನದ ಇರುವ ಹೊಟ್ಟೆ ಕಿಚ್ಚಿಗೆ
ಇದ ಕಂಡೂ ಕಂಡು ಕೂಡ ಏಳಬೇಡ ರೊಚ್ಚಿಗೆ
ಇದರ ಹೊಟ್ಟೆಯಲ್ಲಿ ಹುಟ್ಟತೀ ಪಿಶಾಚಿ ಹುಚ್ಚಿಗೆ

ಬಾಳ್ಮೆಯಲ್ಲಿ ತಾಳ್ಮೆಬೇಕು ಬದುಕಬೇಕು ಎಂದರೆ
ಜೀವವೇ ಸಾವಾಗಬಹುದು ಬಚ್ಚಬರಿಯೆ ನೊಂದರೆ

ಋಣವುರಣವು, ಜನವು ಹೆಣವು ಸಾವಿಗಾಗಿ ದುಡಿವರೇ?
ಯಾರ ಬಾಳಿಗಾಗಿ ಯಾರೂ ಯಾವೋ ಕೈಗೆ ಮಡಿವರೇ?
ಕಾವ ಕೈಯ್ಯೆ ಕೊಲ್ಲುತಿಹವು! ಮರಣದತ್ತ ನಡೆದರೇ
ಸಾವಿಗಾಗಿ ತಪಿಸುವವರು ಬಾಳ-ಬೀಜ ಹಿಡಿವರೇ?

ಕಣ್ಣೀರಿನ ಕಡಲ ನಡುವೆ ತೇಲುತಿಹವು ನೆಲಗಳು
ತಾಯಿ-ಹಾಲು ಕುದಿಯುತಿಹುದು ಕೆಂಪೇರಲು ಜಲಗಳು

● ದ.ರಾ. ಬೇಂದ್ರೆ

ಆಹಾರದ ಹಕ್ಕಿಗಾಗಿ ಆಂದೋಲನ

ರೇಷನ್ ಕಾರ್ಡ್‌ಗಾಗಿ ಕಾದಿರುವ ಜನರ ಬದುಕು ಫುಟ್‌ಬಾಲ್

ಹೊಸ ಹೊಸ ಬಗೆ ಬಗೆಯ ಪಡಿತರ ಚೀಟಿ ಜನ ಕ್ಯೂ ನಿಂತು, ದುಡ್ಡುಕೊಟ್ಟು ಫೋಟೋ ತೆಗೆಸಿಕೊಂಡು ಕಾಂಟ್ರಾಕ್ಟುದಾರರ ಜೇಬು ತುಂಬಿಸಿದ್ದಾಗಿದೆ ಹೊರತು ಜನರಿಗೆ ಶಾಶ್ವತ ರೇಷನ್ ಕಾರ್ಡು ಸಿಗಲಿಲ್ಲ.

ಜಿ.ಸಿ.ಬಯ್ಯಾರೆಡ್ಡಿ

ಕರ್ನಾಟಕ ರಾಜ್ಯದಲ್ಲಿ ರೇಷನ್ ಬಯಸಿ ರೇಷನ್ ಕಾರ್ಡುಗಳಿಗಾಗಿ ಕಾದು, ಸಾಲುಗಟ್ಟಿ ನಿಂತು ಪರಿತಪಿಸುತ್ತಿರುವ ಜನರ ಬದುಕು ಆಳುವ ಸರ್ಕಾರಗಳ ಕೈಯಲ್ಲಿ ಫುಟ್‌ಬಾಲ್ ಚೆಂಡಿನಂತಾಗಿದೆ. ರೇಷನ್ ಇರಲಿ ಸಮರ್ಪಕವಾದ ರೇಷನ್ ಕಾರ್ಡ್ ಪಡೆಯುವುದೇ ಒಂದು ಮರೀಚಿಕೆಯನ್ನು ಬೆನ್ನಟ್ಟಿದಂತಾಗಿದೆ.

ಕೆಲವು ದಿನಗಳ ಹಿಂದೆ ದೇಶದ ಬರ ಪರಿಸ್ಥಿತಿಯ ಬಗೆಗೆ ಮಾತನಾಡಿದ ಪ್ರಧಾನಮಂತ್ರಿ ಮನಮೋಹನ ಸಿಂಗ್‌ರವರು ಏನೇ ಸನ್ನಿವೇಶ ಬಂದರೂ ದೇಶದಲ್ಲಿ ಯಾರೂ ಹಸಿದ ಹೊಟ್ಟೆಯಲ್ಲಿ ಮಲಗುವ ಪರಿಸ್ಥಿತಿಗೆ ಅವಕಾಶ ಕೊಡುವುದಿಲ್ಲ ಎಂದು ಘೋಷಿಸಿದರು. ಯಡಿಯೂರಪ್ಪ ಕೂಡ ಇಂತಹ ಘೋಷಣೆ ಹೊರಡಿಸುವುದರಲ್ಲಿ ಕಡಿಮೆಯವರೇನಲ್ಲ. ಇದೀಗ ಪ್ರವಾಹ ಎಂಬುದು ಒಂದು ಉತ್ತರ ಕರ್ನಾಟಕದ ಜನರ ಬಳಿ ಇದ್ದ ಬದ್ದ ಆಹಾರವನ್ನು ಬಳಿದುಕೊಂಡುಹೋಗಿದೆ. ಆಹಾರಕ್ಕಾಗಿ ಹಾಹಾಕಾರ ಮುಗಿಲುಮುಟ್ಟಿದೆ.

ದಕ್ಷಿಣ ಭಾರತದಲ್ಲೇ ಕೆಟ್ಟ ಪರಿಸ್ಥಿತಿ ಕರ್ನಾಟಕದ್ದು

ಅಗತ್ಯ ವಸ್ತುಗಳ ಬೆಲೆ ದೇಶದಲ್ಲೆಲ್ಲಾ ಕಡೆ ಏರುತ್ತಿದೆ. ಆದರೆ ಕರ್ನಾಟಕದ್ದು ವಿಶೇಷ. ಏಕೆಂದರೆ ಕರ್ನಾಟಕ ಈ ಬೆಲೆ ಏರಿಕೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಬೆಲೆ ಏರಿಕೆಯ ಬಿಸಿಯಲ್ಲಿ ಜನರು ಬೆಂದು ಕರುಕಲಾಗದಂತೆ ಕಿಂಚಿತ್ತಾದರೂ ಜನರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಇರುವ ಸಾಧನ ಪಡಿತರ ವ್ಯವಸ್ಥೆ. ಆದರೆ ಕರ್ನಾಟಕ ರಾಜ್ಯದಲ್ಲಿ ಈ ಪಡಿತರ ವ್ಯವಸ್ಥೆಯನ್ನು ಕೂಡ ಅತ್ಯಂತ ದುರ್ಬಲಗೊಳಿಸಲಾಗಿದೆ. ಜನರಿಗೆ ಸರಿಯಾಗಿ ರೇಷನ್ ಇರಲಿ ರೇಷನ್ ಕಾರ್ಡನ್ನು ಕೂಡ ಕೊಡಲಾರದ ಜನವಿರೋಧಿತನವನ್ನು ನಮ್ಮರಾಜ್ಯದ ಸರ್ಕಾರಗಳು ಮೆರೆಯುತ್ತಿವೆ.

ಹೊಸ ಹೊಸ ಬಗೆ ಬಗೆಯ ಪಡಿತರ ಚೀಟಿ ಜನ ಕ್ಯೂ ನಿಂತು, ದುಡ್ಡುಕೊಟ್ಟು ಫೋಟೋ ತೆಗೆಸಿಕೊಂಡು ಕಾಂಟ್ರಾಕ್ಟುದಾರರ ಜೇಬು ತುಂಬಿಸಿದ್ದಾಗಿದೆ ಹೊರತು ಜನರಿಗೆ ಶಾಶ್ವತ ರೇಷನ್ ಕಾರ್ಡು ಸಿಗಲಿಲ್ಲ.

ನೆರೆಹೊರೆಯಲ್ಲಿ

ನೆರೆಯ ತಮಿಳುನಾಡಿನಲ್ಲಿ ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯಂತೆ ಕಾರ್ಡಿಗೆ 35 ಕೆ.ಜಿ ಅಕ್ಕಿ ದೊರೆಯುತ್ತಿದೆ. ಆಂಧ್ರದಲ್ಲಿ 2 ರೂ.ನಂತೆ ದೊರೆಯುತ್ತಿದೆ. ಕೇರಳದಲ್ಲಿಯೂ 2 ರೂ. ಬೆಲೆಗೆ 35 ಕೆ.ಜಿ. ಅಕ್ಕಿ ದೊರೆಯುತ್ತಿದೆ. ಇದಲ್ಲದೇ ಕರ್ನಾಟಕದಲ್ಲಿನ ಜನತಾ ಬಜಾರ್‌ಗಳಂತಹ 'ಮಾವಳಿ ಸ್ಟೋರ್ಸ್' ಎನ್ನಲಾಗುವ ಮಳಿಗೆಯಲ್ಲಿ ಕೇವಲ 15 ರೂ.ಗೆ ಯಾರು ಎಷ್ಟು ಬೇಕಾದರೂ ಖರೀದಿಸಬಹುದು. ಅಂತಹ ವ್ಯವಸ್ಥೆಯಿದೆ. ಕರ್ನಾಟಕದಲ್ಲಿ ಬಿಜೆಪಿ ಪಕ್ಷವು ಕರ್ನಾಟಕದಲ್ಲಿ ಚುನಾವಣೆಗೆ ಮುಂಚೆ 2 ರೂಪಾಯಿಗೆ ಕೆ.ಜಿಯಂತೆ ಅಕ್ಕಿ ಕೊಡುವುದಾಗಿ ಭರವಸೆ ನೀಡಿತು. ಇದು ಮಾತ್ರವಲ್ಲ ಬಡತನ ರೇಖೆಯ ಮಾನದಂಡ ಅಂದರೆ ಬಿಪಿಎಲ್ ಎಂಬುದನ್ನು ನಿಗದಿ ಮಾಡುವ ಮಾನದಂಡದಲ್ಲಿ ಮಿತಿಯನ್ನು ಹೆಚ್ಚಿಸಿ ಜನರಿಗೆ ಅನುಕೂಲ ಮಾಡಿಕೊಡುವುದಾಗಿ ಹೇಳಿತು.

ಆದರೆ ಅಧಿಕಾರಕ್ಕೇರಿದ ಮೇಲೆ ಈ ಭರವಸೆಗಳ ಬಗೆಗೆ ಚಕಾರವೆತ್ತದೆ ಜಾಣ ಮೌನವನ್ನು ಪಾಲಿಸುತ್ತಿದೆ.

ಬಿಪಿಎಲ್ ಕಾರ್ಡುದಾರರ ಸಂಖ್ಯೆಯನ್ನು ಕಡಿತ ಮಾಡಿ ಬಡಜನರ ಹೊಟ್ಟೆಯ ಮೇಲೆ ಬಡಿಯುವ ಕೆಲಸವನ್ನು ಎಲ್ಲ ಸರ್ಕಾರಗಳು ಮಾಡುತ್ತಲೇ ಬರುತ್ತಿವೆ. ಬಿಜೆಪಿ ಸರ್ಕಾರದ್ದೂ ಕೂಡ ಅದೇ ದಾರಿ. ಆದರೆ ಮೊನ್ನೆ ಮೊನ್ನೆ ಲೋಕಸಭಾ ಚುನಾವಣೆಗಳು ಬಂದಾಗ ಅದನ್ನು ಗಮನದಲ್ಲಿರಿಸಿಕೊಂಡು ನೆಮ್ಮದಿ ಕೇಂದ್ರ ಅಂತ ಮಾಡಿ ಅದರ ಮೂಲಕ ತಾತ್ಕಾಲಿಕವಾಗಿ ಪಡಿತರ ಚೀಟಿ ನೀಡಿತು. ಈಗ ಚುನಾವಣೆಗಳು ಮುಗಿದಿವೆ. ಸಾಧಿಸಿಕೊಳ್ಳಬೇಕಾದ ಕೆಲಸ ಮುಗಿಯಿತು. ಈಗ ಫೋಟೋಗಳಿಲ್ಲದ ಪಡಿತರ ಚೀಟಿಗಳಿಗೆ ರೇಷನ್ ಕೊಡುವುದಿಲ್ಲ ಎಂದು ಸರ್ಕಾರ ಕೈಚೆಲ್ಲಿ ಜನರಿಗೆ ಆಕಾಶ ತೋರಿಸುತ್ತಿದೆ. ರಾಜ್ಯದಲ್ಲಿ ಜನರಿಗೆ ಹೊಟ್ಟೆ ತುಂಬಿಸಿಕೊಳ್ಳಲು ಅನ್ನ ಸಿಗದಿದ್ದರೂ ಒಟ್ಟು 4 ಬಗೆಯ ಪಡಿತರ ಚೀಟಿಗಳು ಏಕಕಾಲಕ್ಕೇ ಜಾರಿಯಲ್ಲಿದ್ದು ಜನರು ಇದನ್ನು ನೋಡಿಕೊಂಡೇ ಸಂಭ್ರಮ ಪಡಬೇಕಿದೆ.



ಬಗೆಬಗೆಯ ರೇಷನ್ ಕಾರ್ಡ್

1. ಅಂತ್ಯೋದಯ	11,99,700
2. ಬಿಪಿಎಲ್	66,24,533
3. ಎಪಿಎಲ್	52,97,772
4. ನೆಮ್ಮದಿ ಕೇಂದ್ರದ ಕಾರ್ಡ್	28,44,361
ಒಟ್ಟು	1,59,65,366

ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ 1 ಕೋಟಿ 59 ಲಕ್ಷಕ್ಕೂ ಹೆಚ್ಚು ಪಡಿತರ ಚೀಟಿ ಚಾಲ್ತಿಯಲ್ಲಿರುವುದರಿಂದ ಅದೊಂದು ಬಾರಿ ಸಂಖ್ಯೆಯಂತೆ ಎಲ್ಲರಿಗೂ ರೇಷನ್ ಸಿಗುತ್ತಿರುವಂತೆ ಕಾಣುತ್ತದೆ. ಆದರೆ ವಿಷಯ ಅಷ್ಟು ಸರಳವಾಗಿಲ್ಲ.

ಮೇಲಿನ ಪಟ್ಟಿಯಲ್ಲಿ ಅಂತ್ಯೋದಯ ಕಾರ್ಡ್‌ನಲ್ಲಿ 2 ರೂಪಾಯಿಗೆ ಕೆ.ಜಿಯಂತೆ ಆಹಾರ ಅಂದರೆ 29 ಕೆ.ಜಿ. ಅಕ್ಕಿ 6 ಕೆ.ಜಿ ಗೋಧಿ ನೀಡಲಾಗುತ್ತದೆ. ಇದನ್ನು ಕೇಂದ್ರ ಸರ್ಕಾರವೇ ನೀಡುತ್ತದೆ. ಇನ್ನು ಬಿಪಿಎಲ್ ಕಾರ್ಡ್‌ಗಳ ಪ್ರಶ್ನೆಗೆ ಬಂದರೆ ರಾಜ್ಯದಲ್ಲಿ 66,24,533 ಬಡತನ ರೇಖೆಯ ಕೆಳಗಿನ ಕುಟುಂಬಗಳಿವೆ ಎಂಬುದನ್ನು ಕೇಂದ್ರ ಸರ್ಕಾರ ಒಪ್ಪಿಲ್ಲ. ಅದು ಕೇವಲ ಸುಮಾರು 46 ಲಕ್ಷ ಕುಟುಂಬಗಳಿಗೆ ಮಾತ್ರವೇ ಆಹಾರ ನೀಡುತ್ತದೆ. ಉಳಿದ 20,200,300 ಕುಟುಂಬಗಳಿಗೆ ಎ.ಪಿ.ಎಲ್ ಕಾರ್ಡ್‌ಗಳಿಗೆ ನೀಡಲಾಗುವ ಆಹಾರವನ್ನೇ ರಾಜ್ಯಸರ್ಕಾರ ಬಳಸಿಕೊಳ್ಳುತ್ತಿತ್ತು. ಎ.ಪಿ.ಎಲ್ ಕಾರ್ಡ್‌ಗಳಲ್ಲಿ ಕೆ.ಜಿ. ಅಕ್ಕಿಗೆ 8.30 ಪೈಸೆ. ಅದನ್ನು 3 ರೂಪಾಯಿಗೆ ಕೊಡಲು ಬೇಕಾದ ಹೆಚ್ಚುವರಿ ಹಣವನ್ನು ರಾಜ್ಯಸರ್ಕಾರ ಭರಿಸುತ್ತಿದೆ.

ಯುಪಿಎ ಸರ್ಕಾರ ಇದೀಗ ಎ.ಪಿ.ಎಲ್ ಕಾರ್ಡುದಾರರಿಗೆ ಆಹಾರ ಕಡಿತ ಮಾಡಿದೆ. ಪರಿಣಾಮವೆಂದರೆ ಈಗ ಎ.ಪಿ.ಎಲ್ ಕಾರ್ಡುದಾರರಿಗೆ ಅಕ್ಕಿ, ಸಕ್ಕರೆ ಯಾವುದೂ ಸಿಗುತ್ತಿಲ್ಲ. ಮನೆಗೆ ಅಡುಗೆ ಅನಿಲ ಸಂಪರ್ಕ ಇಲ್ಲವಾದರೆ ಅವರಿಗೆ ಸೀಮೆ ಎಣ್ಣೆ ಮಾತ್ರ ಸಿಗುತ್ತದೆ.

ಕೇಂದ್ರ ಸರ್ಕಾರ ಈಗ ಬಡವರ ಬದುಕಿಗೆ ಆಹಾರ ಭದ್ರತೆ ನೀಡುವುದಾಗಿ ಹೇಳುತ್ತ ಆಹಾರ ಭದ್ರತಾ ಕಾಯ್ದೆಯನ್ನು ತರಲು ಹೊರಟಿದೆ. ಆ ಪ್ರಕಾರ ಈಗ ಕೊಡಲಾಗುತ್ತಿರುವ ಅಕ್ಕಿಯನ್ನು 35 ಕೆ.ಜಿ. ಯಿಂದ 25 ಕೆ.ಜಿ.ಗೆ ಇಳಿಸಲಾಗುತ್ತಿದೆ. ಬೆಲೆಯನ್ನು ಕೆ.ಜಿಗೆ ಈಗ ಇರುವ 2 ರೂ. ನಿಂದ 3 ರೂ.ಗೆ ಏರಿಸಲಾಗಿದೆ. ಇದರಿಂದ ಕೇಂದ್ರ ಸರ್ಕಾರ ಈಗ ಖರ್ಚು ಮಾಡುತ್ತಿರುವುದರಲ್ಲಿ 4000 ಕೋಟಿ ರೂಪಾಯಿಗಳನ್ನು ಉಳಿಸಿಕೊಳ್ಳಲಿದೆ. ಹೀಗಿದೆ ಕೇಂದ್ರ ಸರ್ಕಾರದ 'ಆಹಾರ ಭದ್ರತಾ ಕಾಯ್ದೆ'ಯ ಸ್ವರೂಪ!!

ಏನಾಗಬೇಕಿದೆ

ಇದರ ಅರ್ಥವೇನೆಂದರೆ ಕೇಂದ್ರ ಯು.ಪಿ.ಎ ಸರ್ಕಾರಕ್ಕಾಗಲಿ, ರಾಜ್ಯ ಬಿಜೆಪಿ ಸರ್ಕಾರಕ್ಕಾಗಲಿ ಜನರಿಗೆ ಆಹಾರ ನೀಡಬೇಕೆಂದು ಬದ್ಧತೆಯೇನಿಲ್ಲ. ಅವು ಈ ಜವಾಬ್ದಾರಿಯಿಂದ ಎಷ್ಟು ಸಾಧ್ಯವೋ ಅಷ್ಟು ಜಾರಿಕೊಳ್ಳಲು ಮೈಗೆ ಎಣ್ಣೆ ಹಚ್ಚಿಕೊಂಡು ನಿಂತಿವೆ.

ನಮ್ಮ ಮುಂದಿರುವ ಪ್ರಶ್ನೆ ಎಂದರೆ ಎಲ್ಲರಿಗೂ ರೇಷನ್ ಕಾರ್ಡು ಬೇಕು ಹಾಗೂ ಎಲ್ಲರಿಗೂ ಕೂಡ ಕನಿಷ್ಟ 2 ರೂ. ಕೆ.ಜಿಯಂತೆ ಕಾರ್ಡಿಗೆ ಕನಿಷ್ಟ 35 ಕೆ.ಜಿ.ಯಂತೆ ಎಲ್ಲರಿಗೂ ಆಹಾರವನ್ನು ಪಡೆಯುವುದಾಗಿದೆ. ಅಂದರೆ ಪಡಿತರ ವ್ಯವಸ್ಥೆಯ ಸಾರ್ವತ್ರೀಕರಣ. ಇದು ಜನರಿಗೆ ಆಹಾರ ಭದ್ರತೆಯನ್ನು ಖಾತ್ರಿ ಮಾಡುವ ಅತಿ ಮುಖ್ಯ ಕ್ರಮವಾಗಲಿದೆ. ಅದಕ್ಕಾಗಿ ಚಳುವಳಿ ತೀವ್ರಗೊಳ್ಳಬೇಕಿದೆ.

ಹಣ ಎಲ್ಲಿಂದ?

ಎಲ್ಲರಿಗೂ ರೇಷನ್ ಕಾರ್ಡ್, ಅದರಲ್ಲಿ ಆಹಾ[...] ನೀಡಲು ಸರ್ಕಾರಕ್ಕೆ ಸಾಧ್ಯವಾ ಎಂದು ಹಲ[...] 'ಉದ್ದಾಮ ಆರ್ಥಿಕ ಪಂಡಿತ'ರೇ ಪ್ರಶ್ನೆ ಮಾಡುವುದ[...] ಇದೆ. ಈ ಪ್ರಶ್ನೆಗೆ ಉತ್ತರ ಸರಳ ಇದೆ. ದೇಶ[...] ವಾರ್ಷಿಕ ಬಜೆಟ್ ಸುಮಾರು 10 ಲಕ್ಷ ಕೋಟಿಯ[...] ಮೊತ್ತದ್ದು. ಅದರಲ್ಲಿ ಈಗ ಕೇಂದ್ರ ಸರ್ಕಾ[...] ನೀಡುತ್ತಿರುವ ಆಹಾರ ಸಬ್ಸಿಡಿ 53 ಸಾವಿರ 30[...] ಕೋಟಿ ಅಷ್ಟೆ.

ಮೇಲೆ ಹೇಳಿದಂತೆ ಎಲ್ಲರಿಗೂ ಆಹಾ[...] ನೀಡಬೇಕಾದರೆ ಸರ್ಕಾರ ಒದಗಿಸಬೇಕಾದ ಸಬ್ಸಿ[...] 1 ಲಕ್ಷ 20 ಸಾವಿರ ಕೋಟಿ ಮಾತ್ರ. ದೇಶದ[...] ಜನರ ಆಹಾರ ಭದ್ರತೆಗೆ ಸರ್ಕಾರ ಇದ್ದು ಜವಾಬ್[...] ಹೊರಲು ಸಿದ್ಧವಾಗಬೇಕು. ಇದು ಸರ್ಕಾರ ಕರ್ತವ[...] ಒಟ್ಟು ರಾಷ್ಟ್ರೀಯ ಉತ್ಪನ್ನದ ಲೆಕ್ಕದಲ್ಲಿ ನೋಡಿದ[...] ಈ ಪ್ರಮಾಣದ ಆಹಾರ ಸಬ್ಸಿಡಿಗೆ ಅಗತ್ಯವಾದದ[...] ಜಿಡಿಪಿಯ 1.2 ಶೇ ಮಾತ್ರ. ಆಹಾರದಂತಹ ಜನ[...] ಅತಿ ಮೂಲಭೂತ ಅವಶ್ಯಕತೆ, ದೇಶದ 110 ಕೋ[...] ಜನರ ಜೀವನಾವಶ್ಯಕವಾದ ಅನ್ನದ ಪ್ರಶ್ನೆಗೆ ನ[...] ಸರ್ಕಾರ ಇಷ್ಟು ವೆಚ್ಚ ಮಾಡಲು ಸಿದ್ಧವಾಗಲೇಬೇಕ[...] ಬಂಡವಾಳಗಾರರಿಗೆ ಶ್ರೀಮಂತ ವಿಭಾಗಗಳ[...] ಲಕ್ಷಾಂತರ, ಕೋಟಿ ರಿಯಾಯಿತಿ, ವಿನಾಯಿ[...] ಘೋಷಿಸುವ ಸರ್ಕಾರಗಳಿಗೆ ಇಷ್ಟು ಸಂಪನ್ಮೂ[...] ಹೊಂದಿಸುವುದು ಒಂದು ದೊಡ್ಡ ಪ್ರಶ್ನೆಯೇ ಅ[...] ದೇಶದ ಶ್ರೀಮಂತರಿಗೆ, ಬಂಡವಾಳಿಗರಿಗೆ ಕೇಂ[...] ಸರ್ಕಾರ ಪ್ರತಿದಿನ ಸುಮಾರು 700 ಕೋ[...] ರಿಯಾಯಿತಿ, ವಿನಾಯಿತಿ ನೀಡುತ್ತಿದೆ ಎಂದು ಒಂ[...] ಅಂದಾಜು ಮಾಡಲಾಗಿದೆ. ರಾಜ್ಯ ಸರ್ಕಾರ ಸೀಮಿ[...] ಸಂಪನ್ಮೂಲಗಳ ಮೇಲೆ ಹೆಚ್ಚು ಭಾರ ಬೀಳುವ[...] ಮಾಡದೆ ಕೇಂದ್ರ ಸರ್ಕಾರ ಈ ಜವಾಬ್ದಾರಿಯ[...] ಹೊರಲು ಸಿದ್ಧವಾಗಬೇಕು.

ಕೇಂದ್ರ ಸರ್ಕಾರ ಸಾಗುತ್ತಾ ಬರುತ್ತಿರು[...] ದಾರಿಯನ್ನು ನೋಡಿದರೆ ವಿಚಾರ ಸ್ಪಷ್ಟವಿದೆ. ಕೇಂ[...] ಸರ್ಕಾರಕ್ಕೆ ಈ ಮನಸಿಲ್ಲ. ಜನರ ಹೋರಾ[...] ಸಾಮೂಹಿಕ ಆಂದೋಲನದ ಒತ್ತಡ ಮಾತ್ರ ಕೇಂ[...] ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ವಹಿಸುವಂತೆ ಮಾಡ[...] ಸಾಧ್ಯ. ○

ರೇಷನ್ ಪದ್ಧತಿ ರೈತ ಪರ

ಬಡಜನರಿಗೆ ಪಡಿತರ ಆಹಾರ ನೀಡು[...] ಮೂಲಕ ಜನರನ್ನು ಸೋಮಾರಿನಗಳನ್ನಾ[...] ಮಾಡಲಾಗುತ್ತಿದೆ. ರೈತರಿಗೆ ಕೆಲಸಗಳಿ[...] ಕೂಲಿಕಾರರು ಸಿಗುತ್ತಿಲ್ಲ, ಇತ್ಯಾದಿಯಾಗಿಯು[...] ವಾದಗಳು ಚಾಲ್ತಿಯಲ್ಲಿವೆ.

ರೈತರ ಬೆಳೆಗೆ ಕನಿಷ್ಟ ಬೆಂಬಲ ಬೆಲೆ ನೀ[...] ರೈತರ ಬೆಳೆಯನ್ನು ಕೊಳ್ಳಲು ಬಲಿಷ್ಟ ಪಡಿತ[...] ವ್ಯವಸ್ಥೆ ಅಗತ್ಯ. ಬೆಳೆದ ಬೆಳೆಗೆ ಬೆಲೆ ಸಿಗದೆ ರೈ[...] ಹತಾಶನಾಗಿರುವ ಸ್ಥಿತಿಯಲ್ಲಿ ಬೆಂಬಲ ಬೆಲೆ ರೈತ[...] ಪರವೂ ಹೌದು, ಜನರ ಆಹಾರ ಭದ್ರತೆ[...] ಪೂರಕವೂ ಹೌದು.

ಲಂಕೇಶ್ ಪತ್ರಿಕೆ

ಲಂಕೇಶರ ಕಾಲದ ಎಲ್ಲ ಮೌಲ್ಯಗಳನ್ನು ಗಾಳಿಗೆ ತೂರಿ ಸರ್ಕಾರಿ ಪ್ರಾಯೋಜಿತ ಕಸವನ್ನು ಓದುಗರಿಗೆ ನೀಡಲು ಶುರುವಿಟ್ಟುಕೊಂಡ ಇಂದ್ರಜಿತ್‌ರ 'ಲಂಕೇಶ್' ಇದೀಗ ಆರೆಸ್ಸೆಸ್ ಪ್ರಾಯೋಜಿತ ಕೋಮುವಾದಿ ವಿಷವನ್ನು ಹರಡಲು ನಿಂತಿರುವುದು ವಿಷಾದನೀಯವಾಗಿದೆ.

ಆಹಾ ! ಆನೆ ಹೊಟ್ಟೆಯಿಂದ ಎಂಥಾ ಲದ್ದಿ !!

ಕುವೆಂಪು ಅವರ ಮಗ ಪೂರ್ಣಚಂದ್ರ ತೇಜಸ್ವಿಯವರು. ಹುಟ್ಟಿನಿಂದ ತನಗೆ ಅಂಟಿಕೊಂಡು ಬಂದ 'ತನ್ನ' ಜಾತಿಗೆ ಸೇರಿಲ್ಲದ ಯುವತಿಯನ್ನು ಮದುವೆಯಾಗುವ ಸಮಾಚಾರ ಕೇಳಿದ ಯಾರೋ 'ಎಂಥಾ ತಂದೆಗೆ ಎಂಥಾ ಮಗ ಹುಟ್ಟಿದ! ಆನೆಯ ಹೊಟ್ಟೆಯಿಂದ ಲದ್ದಿ ಬಿದ್ದಂತೆ' ಅಂದಿದ್ದರಂತೆ.

ಜಾತೀಯತೆ, ಜಾತಿರಹಿತ ಮದುವೆಗಳ ಬಗೆಗೆ ಕುವೆಂಪು ಅವರ ವಿಚಾರ- ಚಿಂತನೆ ಏನು ಅನ್ನುವುದರ ಕಿಂಚಿತ್ತಾದರೂ ಪರಿಚಯವಿದ್ದಿದ್ದರೆ ಆ ಮನುಷ್ಯ ಇಂತಹ ಮಾತನ್ನು ಹೇಳುತ್ತಿರಲಿಲ್ಲವೇನೋ. ಇರಲಿ. ತೇಜಸ್ವಿಯವರಿಗೆ ಒಪ್ಪದ ಆ ಮಾತು ಕನ್ನಡದ ಖ್ಯಾತ ಸಾಹಿತಿ, ಪತ್ರಕರ್ತ ಪಿ.ಲಂಕೇಶರ ಪತ್ರಕರ್ತ ಸುಪುತ್ರನಿಗೆ ಬಹಳ ಚೆನ್ನಾಗಿ ಒಪ್ಪುತ್ತದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿ ಬಂದಿದೆ. ಅಕ್ಟೋಬರ್ 22, 2009 ರ 'ಲಂಕೇಶ್ ಪತ್ರಿಕೆ' ಯನ್ನು ಗಮನಿಸಿದವರು ಈ ಮಾತು ಕಡಿಮೆ ಅಂತ ಭಾವಿಸಿದರೂ ಅಚ್ಚರಿಯಲ್ಲ.


'ಪತ್ರಿಕೆ'ಯಲ್ಲಿ ಕೋಮುವಾದಿ - ವಿಷ ಸರ್ಕಾರಿ ಪ್ರಾಯೋಜಿತ ಕಸ

ಹಲವು ಕೊರತೆ, ದೋಷಗಳೊಂದಿಗೆ ಕೂಡ ಕರ್ನಾಟಕ ಪತ್ರಿಕೋದ್ಯಮ ದಲ್ಲಿ 'ಲಂಕೇಶ್ ಪತ್ರಿಕೆ'ಯ ಮೂಲಕ ತಮ್ಮದೇ ಆದ ಗಾಢ ಛಾಪನ್ನು ಒತ್ತಿದವರು ಲಂಕೇಶ್. ಕೋಮುವಾದದ ವಿರುದ್ಧ, ಜಾತಿವಾದದ ವಿರುದ್ಧ ಲಂಕೇಶ್ ಪತ್ರಿಕೆ ತಳೆದ ಪ್ರಖರ ನಿಲುವು, ಅದು ಮಾಡಿರುವ ಪರಿಣಾಮ, ಪ್ರಭಾವ ಕಡಿಮೆಯದೇನಲ್ಲ. ಲಂಕೇಶರ ಮರಣಾನಂತರ ಪತ್ರಿಕೆ ಎರಡು ಕವಲಾಗಿ ಅವೆರಡೂ ಕೂಡಾ 'ಲಂಕೇಶ್' ಪ್ರತಿಪಾದಿಸಿದ ಮೌಲ್ಯಗಳನ್ನು ಒದ್ದು ಅಡ್ಡದಿಡ್ಡಿ ಓಡುತ್ತಾ ಹಳ್ಳದ ಹಾದಿ ಹಿಡಿದಿವೆ ಎಂಬುದನ್ನು ನಾಡಿನ ಪ್ರಜ್ಞಾವಂತರು ಆತಂಕದಿಂದಲೇ ಗಮನಿಸುತ್ತಾ ಬರುತ್ತಿದ್ದಾರೆ. ಈ ಸಾಲಿನಲ್ಲಿ ಗೌರಿ ಲಂಕೇಶ್ ಕುರಿತು ಮುಂದೆ ಪ್ರತ್ಯೇಕ ಬರಹವೊಂದಿರುತ್ತದೆ. ಮೊದಲಿಗೆ 'ಇಂದ್ರಜಿತ್ ಲಂಕೇಶ್' ಕುರಿತು

ಬಣ್ಣ ಬದಲಿಸಿದ ಊಸರವಳ್ಳಿ

ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ (ಇಂದ್ರಜಿತ್) 'ಲಂಕೇಶ್ ಪತ್ರಿಕೆ'ಯ ಬಣ್ಣವೇ ಬದಲಾಯಿತು. "ಸರ್ಕಾರ ಮಾಡುವುದೆಲ್ಲವನ್ನು ವಿರೋಧಿಸುವುದಿಲ್ಲ, ಒಳ್ಳೆಯದನ್ನು ಪತ್ರಿಕೆ ಬೆಂಬಲಿಸುತ್ತದೆ' ಎಂದು ಘೋಷಿಸಿಕೊಂಡು ಪತ್ರಿಕೆಯು ತಳೆದ ಧೋರಣೆ 'ಲಂಕೇಶ್'ರು ನಂಬಿ ಆಚರಿಸಿಕೊಂಡು ಬಂದ ಮೌಲ್ಯವನ್ನೆಲ್ಲಾ ಮಣ್ಣುಪಾಲು ಮಾಡಿತು. ಬರಬರುತ್ತಾ ಸ್ವತ: ಬಿಜೆಪಿಯ ಕಾರ್ಯಕರ್ತರೂ ನಾಚುವಂತೆ ರಾಜ್ಯ ಬಿಜೆಪಿ ಸರ್ಕಾರದ ತುತ್ತೂರಿ ಊದತೊಡಗಿದ ಪತ್ರಿಕೆ ಕೊನೆಗೆ ಬಿಜೆಪಿ ಸರ್ಕಾರದ ಎಲ್ಲ ಹೊಲಸು ಕೆಲಸಗಳನ್ನು ಸಮರ್ಥಿಸಿಕೊಳ್ಳುವ ಬಿಜೆಪಿಯ ಕರಪತ್ರವೇ ಆಗಿಹೋಯ್ತು.

ಇಷ್ಟಾದಮೇಲೂ ಬಹುಶಃ ಲಂಕೇಶ್ ಪತ್ರಿಕೆಯು ವ್ಯಕ್ತಿಗತವಾಗಿ ಯಡಿಯೂರಪ್ಪನನ್ನು - ಅವರ ಸರ್ಕಾರವನ್ನು ಬೆಂಬಲಿಸುತ್ತಿರಬಹುದು. ಬಿಜೆಪಿ, ಆರೆಸ್ಸೆಸ್‌ನ್ನು ಅಲ್ಲ ಎಂದು ಭಾವಿಸುವವರೂ ಇದ್ದರು.



ಇದೀಗ ಬಹುತೇಕ ಎಲ್ಲವೂ ಸ್ಪಷ್ಟ ಎನ್ನುವಂತಾಗಿದೆ. ಆರೆಸ್ಸೆಸ್‌ನ ಮತಾಂಧತೆಯ ವಿಷ 'ಲಂಕೇಶ್ ಪತ್ರಿಕೆ'ಯ ಮಿದುಳಿಗೇ ಇಳಿದಿರುವುದು ಸ್ಪಷ್ಟವಾಗಿದೆ.

ಟೀಕೆ-ನಿಷ್ಠುರ, ವಿಮರ್ಶೆಗಳೆಲ್ಲಾ ಬಿಜೆಪಿ ಪಾದಾರವಿಂದಗಳಿಗೆ

ರಾಜ್ಯ ರಾಜಕಾರಣ ಕಂಡ ಅತ್ಯಂತ ಹೊಲಸು ರಾಜಕೀಯ ವ್ಯಾಪಾರವಾದ 'ಆಪರೇಷನ್ ಕಮಲ'ದ ಕುರಿತು ಪತ್ರಿಕೆ ಬರೆದಿರುವುದು ನೋಡಿ. ಶಿವಮೊಗ್ಗದಲ್ಲಿ ಆಪರೇಷನ್ ಕಮಲ ನಡೆಸಿ ಕಾಂಗ್ರೆಸ್ ಪಕ್ಷದವರನ್ನು ಸೆಳೆದುಕೊಂಡ ಯಡಿಯೂರಪ್ಪನವರ ನೇತೃತ್ವದ ಬಿಜೆಪಿಯ ಅನೈತಿಕ ರಾಜಕಾರಣದ ಕುರಿತು ಜುಲೈ 23, 2009 ರ ಸಂಚಿಕೆಯಲ್ಲಿ 'ರಾಜಕೀಯವನ್ನು ಸಂಪೂರ್ಣವಾಗಿ ಹಿಡಿತದಲ್ಲಿಟ್ಟುಕೊಳ್ಳಲು ಮಾಡಿರುವ ಕೆಲಸ, ಕೋಟ್ಯಾಂತರ ರೂಪಾಯಿ ಅಭಿವೃದ್ಧಿ ಕೆಲಸ ಮಾಡಲು ಮುಂದಾಗಿರುವ ಯಡಿಯೂರಪ್ಪನವರಿಗೆ ತಡೆಗಳನ್ನು ನಿವಾರಿಸಿಕೊಳ್ಳುವುದು ಅನಿವಾರ್ಯವಾಗಿದೆ' ಎಂದು ಬರೆದಿದೆ.

ಗೊಬ್ಬರ ಕೇಳಿದ ರೈತರ ಎದೆಗೆ ಗುಂಡಿಕ್ಕಿ ಕೊಂದು ಆಮೇಲೆ ಅವರ ಮನೆಗೆ ತೆರಳಿ ಗಳಗಳ ಅತ್ತು, ಈಗ ಸತ್ತವರು ರೈತರೇ ಅಲ್ಲ ಎಂದು ಬೊಗಳುತ್ತಿರುವ ಯಡಿಯೂರಪ್ಪನವರ ಬಗ್ಗೆ ಜೂನ್ 11, 2009 ಸಂಚಿಕೆಯಲ್ಲಿ '4 ಪುಟಗಳಷ್ಟು' ವಾಚಾಮಗೋಚರ ಹೊಗಳಲಾಗಿದೆ. 'ಮುಖ್ಯಮಂತ್ರಿಯಾಗಿ ಹೇಗೆ ಕೆಲಸ ಮಾಡಬೇಕು ಎಂಬುದನ್ನು ಯಡಿಯೂರಪ್ಪನವರಿಂದ ಕಲಿಯಬೇಕು' ಎಂದು ಫರ್ಮಾನು ಬೇರೆ ಹೊರಡಿಸಲಾಗಿದೆ. ಲೋಕವೆಲ್ಲಾ ಸಾರಿಗೆ ಮಂತ್ರಿ ಅಶೋಕ್‌ರ ಭ್ರಷ್ಟಾಚಾರ, ಹಗರಣ, ಭೂ ಕಬಳಿಕೆ ಬಗೆಗೆ ಮಾತನಾಡುತ್ತಿದ್ದರೆ. 'ಲಂಕೇಶ್ ಪತ್ರಿಕೆ'ಯು 'ಜನನಾಯಕ ಆಗಬೇಕೆಂದರೆ ಯಾವ ಮಾರ್ಗ ದಲ್ಲಿ ನಡೆಯಬೇಕೆಂಬುದನ್ನು ಅಶೋಕ್‌ರಿಂದ ಕಲಿಯಬೇಕು' ಎಂದು ಆದೇಶ ನೀಡಿದೆ.

ಒಮ್ಮೆ ವಿ.ಹೆಚ್.ಪಿ.ಯ ಅಖಿಲ ಭಾರತ ಉಪಾಧ್ಯಕ್ಷರೂ ಆಗಿ (ಗೋರಕ್ಷಣೆಯಂತಹ) ಆರೆಸ್ಸೆಸ್ ಅಜೆಂಡಾಗಳನ್ನು ತಲೆಯ ಹೊತ್ತು ಮೆರೆಯುತ್ತಿರುವ ಆದಿ ಚುಂಚನಗಿರಿಯ ಬಾಲಗಂಗಾಧರ ಸ್ವಾಮೀಜಿಯ ಕುರಿತು ಅಸಹ್ಯ ಆಗುವಷ್ಟು ಹೊಗಳಿ ಬರೆಯಲಾಗಿತ್ತು.

ಹೀಗೆ ಬರೆದರೆ ಪಟ್ಟಿ ದೊಡ್ಡದಾಗುತ್ತಾ ಹೋಗುತ್ತದೆ. ಮೊನ್ನೆ ಉತ್ತರಕರ್ನಾಟಕದಲ್ಲಿ ಉಂಟಾದ ಪ್ರವಾಹ, ಅದನ್ನು ಬಿಜೆಪಿ ಸರ್ಕಾರ ನಿಭಾಯಿಸಿದ ರೀತಿ ಕುರಿತು ಎಲ್ಲ ಕಡೆಗಳಿಂದ ಟೀಕೆಗಳು ಬಂದಿವೆ. ಸ್ವತಃ ಯಡಿಯೂರಪ್ಪ 'ರಾಜ್ಯದ ಜನ ಪ್ರವಾಹದ ಸಂಕಟದಲ್ಲಿದ್ದಾಗ ನೆಲಮಂಗಲದಲ್ಲಿ ತಾವು ಸನ್ಮಾನ ಸ್ವೀಕರಿಸಿದ್ದು ತಪ್ಪಾಗಿದೆ... ಒತ್ತಾಯಕ್ಕೆ ಕಟುಬಿದ್ದು ಅಲ್ಲಿಗೆ ಹೋದೆ' ಎಂದು ತಪ್ಪು ಒಪ್ಪಿಕೊಂಡಿದ್ದಾರೆ. ಇಷ್ಟಾದರೂ ಸರ್ಕಾರದ ಪ್ರವಾಹ ನಿರ್ವಹಣೆ ಬಗೆಗೆ ಒಂದೇ ಒಂದು ಪದದ ಟೀಕೆಯೂ ಇಲ್ಲದ 'ಲಂಕೇಶ್' ವರದಿ ಓದುವುದೇ ಒಂದು 'ಸೊಗಸಾದ' ಅನುಭವ.

ಅಂತೂ ಆನೆಯ ಹೊಟ್ಟೆಯಿಂದ ಸೊಗಸಾದ ಲದ್ದಿಯೇ ಬಿದ್ದಿದೆ ಎನ್ನುವುದಕ್ಕೆ ಎಷ್ಟೊಂದು ಸಾಕ್ಷಿಗಳು. ○

'ಲವ್ ಜಿಹಾದ್' ಎಂಬ 'ಕೇಸರಿ' ಪ್ರಚಾರ

ಇತ್ತೀಚಿನ 'ಲಂಕೇಶ್ ಪತ್ರಿಕೆ'ಯಲ್ಲಿ 'ಲವ್ ಜಿಹಾದ್' ಕುರಿತು ವಸಂತ್ ಮೊಟಾಲಿಯ ಅವರ 'ಪ್ರಿತ್ಸೆ ಪ್ರೀತ್ಸೆ' ಎಂಬ ಎರಡು ಪುಟದ ಲೇಖನ ಪ್ರಕಟವಾಗಿದೆ. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ನಿಯಂತ್ರಣದ ಭಯೋತ್ಪಾದಕರಾದ ಮುಸ್ಲಿಂ ಯುವಕರು ಇಲ್ಲಿನ ಕಾಲೇಜು ವಿದ್ಯಾರ್ಥಿನಿಯರನ್ನು ಮರುಳು ಮಾಡಿ 'ಪ್ರೀತಿ'ಯ ಬಲೆಯಲ್ಲಿ ಕೆಡವಿ ಅವರು ಮುಸ್ಲಿಂ ಧರ್ಮಕ್ಕೆ ಮತಾಂತರವಾಗುವಂತೆ ಮಾಡುತ್ತಾರೆ. ಆಮೇಲೆ ಗುಜರಾತ್‌ನಲ್ಲಿ ಮುಸ್ಲಿಮರ ಮೇಲೆ ನಡೆದ ದೌರ್ಜನ್ಯ ಇತ್ಯಾದಿ ಸಿಡಿಗಳನ್ನು ತೋರಿಸಿ ಅವರಲ್ಲಿ ಧಾರ್ಮಿಕ ಭಾವನೆ ಕೆರಳಿಸಿ ಆ ಯುವತಿಯರನ್ನು ಮಾನವ ಬಾಂಬ್ ಆಗಿ 'ಭಯೋತ್ಪಾದಕ ದುಷ್ಕೃತ್ಯಕ್ಕೆ ಬಳಸಿಕೊಳ್ಳುತ್ತಾರೆ. ಹೀಗೆಂದು ಪತ್ರಿಕೆ ಘೋಷಿಸಿದೆ. ಕೇರಳದಲ್ಲಿ ಇಂತಹ ಘಟನೆಗಳು ತುಂಬಾ ಆಗಿವೆಯಂತೆ. ಕರ್ನಾಟಕದಲ್ಲಿಯೂ ಇದು ಶುರುವಾಗೇ ಬಿಟ್ಟಿದೆಯಂತೆ. ಎರಡು ಪುಟಗಳ ದೀರ್ಘ ಬರವಣಿಗೆಯಲ್ಲಿ ಯಾವುದೇ ಒಂದು ನಿರ್ದಿಷ್ಟ ಘಟನೆ, ಪ್ರಕರಣದ ಉಲ್ಲೇಖವಿಲ್ಲ.

ಆದರೆ ಬೇರೆ ಬೇರೆ ಯಾವ್ಯಾವುದೋ ಭಯೋತ್ಪಾದಕರ, ಇಲ್ಲಿ ಹೇಳಲಾದ ಈ ಪ್ರಕರಣಕ್ಕೆ ನೇರ ಸಂಬಂಧವಿಲ್ಲದ ಮುಂಬೈ ದಾಳಿ ಹಾಗೂ ಅಮೇರಿಕಾ ಡಬ್ಲ್ಯುಟಿಸಿ ಕಟ್ಟಡದ ಮೇಲಿನ ದಾಳಿ..... ಹೀಗೆ ಯಾವ್ಯಾವುದೋ, ಚಿತ್ರಹಾಕಿ ಭೀತಿ ಮೂಡಿಸುವ, ಓದುಗರಲ್ಲಿ ತಲ್ಲಣ ಸೃಷ್ಟಿಸುವ ಯತ್ನ ಇದೆ.

ಚಾಮರಾಜನಗರದ ಸೆಲ್ವರಾಜ್ ಎಂಬುವವರ ಮಗಳನ್ನು ಮುಸ್ಲಿಂ ಯುವಕನೊಬ್ಬ ಆಕೆಯ ಕುಟುಂಬಕ್ಕೆ ತಿಳಿಯದಂತೆ ಕೇರಳದಲ್ಲಿ ಮದುವೆಯಾದನೆಂಬ ಬಗ್ಗೆ ಆಕೆ ಇಸ್ಲಾಂಗೆ ಮತಾಂತರ ಹೊಂದಿದ್ದಾಳೆ ಎಂಬ ಬಗ್ಗೆ ಇಲ್ಲಿ ಹೇಳಲಾಗಿದೆ. ಪತ್ರಿಕೆಗೆ ಇಷ್ಟರ ಬಗ್ಗೆ ಮಾತ್ರವೇ ಮಾಹಿತಿ ಇರುವುದು. 'ಆಕೆಯನ್ನು ಯಾಮಾರಿಸಿ ಮದುವೆಯಾಗಿರುವ ಅಸ್ಗರ್‌ನ ಹಿನ್ನೆಲೆಗಳು, ಅಪರಾಧ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲಬೇಕಾಗುತ್ತದೆ' ಎಂದು ಸ್ವತಃ ಪತ್ರಿಕೆ ಕೊನೆಯಲ್ಲಿ ಬರೆದಿದೆ. ಆದರೆ ಅದಕ್ಕೂ ಮೊದಲೇ ಕರ್ನಾಟಕದಲ್ಲಿ.... ಚಾಮರಾಜನಗರದಲ್ಲಿ ಇಂತಹದ್ದೊಂದು (ಲವ್ ಜಿಹಾದ್) ಪ್ರಕರಣ ನಡೆದೇ ಹೋಗಿದೆ' ಎಂದು ಘೋಷಿಸಿದೆ. ಇದು ಯಾವ ಪರಿಯ ಪತ್ರಿಕೋದ್ಯಮ. ಲಂಕೇಶ್ ಬದುಕಿದಿದ್ದರೆ ಅವರ ಎದೆ ಒಡೆಯುತ್ತಿರಲಿಲ್ಲವೇ? ಮುಸ್ಲಿಂರ ಕುರಿತು ಗುಮಾನಿ, ಅನುಮಾನ ಮೂಡಿಸಿ ಅವರನ್ನು ದೇಶದ್ರೋಹಿಗಳೆಂಬಂತೆ ಚಿತ್ರಿಸುವ ಆರೆಸ್ಸೆಸ್, ಭಜರಂಗದಳಗಳ ಯೋಜಿತ ಕಾರ್ಯಾಚರಣೆಗೆ ಯಾವ ರೀತಿ ಈ ಪ್ರಚಾರ ಕಡಿಮೆ ಇದೆ?

ಕೇರಳ ಹೈಕೋರ್ಟ್ ಆದೇಶದಂತೆ 'ಲವ್ ಜಿಹಾದ್' ಬಗೆಗೆ ಪ್ರಾಥಮಿಕ ವರದಿ ಸಲ್ಲಿಸಿದ ಕೇರಳ ಪೊಲೀಸ್ ಇಲಾಖೆ ಇಂತಹ ವರದಿ ಬಹುತೇಕ ಕಪೋಲಕಲ್ಪಿತ, ವಾಸ್ತವಿಕ ಅಲ್ಲ ಎಂದು ವರದಿ ನೀಡಿದೆ. ಇತ್ತೀಚೆಗೆ ಸೆಲ್ವರಾಜ್ ಪುತ್ರಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ತಾನು ಸ್ವಇಚ್ಛೆಯಿಂದ ಮತಾಂತರಗೊಂಡಿದ್ದು ಇದರಲ್ಲಿ ಯಾರದ್ದೂ ಬಲವಂತ ಇರಲಿಲ್ಲ ಎಂದು ಸ್ಪಷ್ಟ ಹೇಳಿಕೆ ನೀಡಿದ್ದಾಳೆ ಮತ್ತು ಆಕೆ ಪ್ರೀತಿ ಮತ್ತು ಮತಾಂತರದಂತಹ ವಿಚಾರಗಳ ಬಗೆಗೆ ತೀರ್ಮಾನ ಕೈಗೊಳ್ಳಬಹುದಾದಂತಹ 'ಮೇಜರ್'. ಮತ್ತೆ ಯಾಕೆ ಈ ಬೊಬ್ಬೆ!

ಮತಾಂತರ ಎಂದಾಕ್ಷಣ [illegible]. ಮುಸ್ಲಿಮರು ಎಂದಾಕ್ಷಣ [illegible] ಬೊಬ್ಬಿಡುವುದು ಮತಾಂಧತೆಯ [illegible]. [illegible] ಪ್ರಕರಣ, ಅದಕ್ಕೆ ಆಧಾರ ಇದ್ದಲ್ಲಿ ವಸ್ತುನಿಷ್ಠ [illegible] ನೀಡುವುದಾದಲ್ಲಿ ಯಾರೂ [illegible].

ಕುರುಡು ಕಾಂಚಾಣ

ಸರ್ಕಾರಿ ಬ್ಯಾಂಕುಗಳಿಗಾಗಿ ವಿಶ್ವ ಬ್ಯಾಂಕಿನ ಸಾಲ

ಜಿ.ಎಸ್.ಮಣಿ

ನಮ್ಮ ಸರ್ಕಾರಿ ಬ್ಯಾಂಕುಗಳ ಬಂಡವಾಳ ಹೆಚ್ಚಿಸಲು ಭಾರತ ಸರ್ಕಾರ ವಿಶ್ವ ಬ್ಯಾಂಕಿನ ಮೊರೆ ಹೊಗಿದೆ. ವಿಶ್ವ ಬ್ಯಾಂಕು ಈ ಮೊರೆ ಕೇಳಿ ಎರಡು ಬಿಲಿಯ ಡಾಲರುಗಳ ನೆರವನ್ನು ಮಂಜೂರಿ ಮಾಡಿದೆ. ಒಳ್ಳೆಯದಾಯಿತಲ್ಲ ಎನ್ನಬಹುದು ನೀವು!. ವಿಶ್ವ ಬ್ಯಾಂಕಿಗೆ ನಿಜಕ್ಕೂ ಒಳ್ಳೆಯದಾಗುತ್ತದೆ. ಭಾರತದ ಜನತೆಗೆ ಕೆಡುಕೇ ಆಗುವುದು. ಹೆಗೆ ಎಂಬುದು ನಿಮ್ಮ ಪ್ರಶ್ನೆಯಲ್ಲವೆ?

ವಿಶ್ವ ಬ್ಯಾಂಕಿನ ಸಾಲದ ಜೊತೆಗೆ ಅದರ ಷರತ್ತುಗಳೂ ಬರುತ್ತವೆ. ಈ ಷರತ್ತುಗಳು ಎಂದಿಗೂ ಸಾಮ್ರಾಜ್ಯಶಾಹಿಗಳ ಹಿತ ಕಾಯುವ ಸಲುವಾಗಿಯೆ ಇರುವಂತಹವುಗಳು. ವಿಶ್ವ ಬ್ಯಾಂಕಿನ ಪ್ರತಿನಿಧಿ ಪ್ರಕಾರ ಸಾಲಕ್ಕೆ ಯಾವುದೇ ಷರತ್ತುಗಳಿಲ್ಲ. ಈ ಮಾತಿನ ಜೊತೆಗೆ ಹೇಳಿರುವುದು: 'ಈ ಬ್ಯಾಂಕುಗಳು ಸಂಬಳ ಹೆಚ್ಚಿಸುವುದು ಬೇಡ. ಹೆಚ್ಚು ಲಾಭ ಗಳಿಸಲಿ' ಎಂದು. ಇದರಲ್ಲೇನು? ಸರಿಯಾಗೆ ಹೇಳಿದ್ದಾರಲ್ಲ ಎಂದು ಹೇಳಬಹುದು ನೀವು. ನಿಮ್ಮ ಮಾತನ್ನೇ ಅನುಸರಿಸಿ ಹೋಗುವುದಾದರೆ ಬಡಬಗ್ಗರಿಗೆ ಬ್ಯಾಂಕಿಂಗ್ ಅನುಕೂಲ ನೀಡಬಾರದು. ಯಾಕೆಂದರೆ ಅದರಿಂದ ಹಾನಿಯೆ ಹೆಚ್ಚು ಎನ್ನಬಹುದು. ಬರೀ ಶ್ರೀಮಂತರಿಗೆ ಬ್ಯಾಂಕಿಂಗ್ ಅನುಕೂಲ ಒದಗಿಸುವುದು ಸುಲಭ ಮತ್ತು ಲಾಭಕರ(?). ನಮ್ಮ ದೇಶದೊಳಗಿನ ಸಾಮಾಜಿಕ ನ್ಯಾಯದ ಕಾಳಜಿ ವಿಶ್ವ ಬ್ಯಾಂಕಿಗೆಲ್ಲಿ?

ಕೃಷಿಗೆ ಪಂಗನಾಮ

ಕೃಷಿಗೆ ಏನು ಒಳ್ಳೆಯದು ಮಾಡಿರುವಿರಿ ಎಂದು ಕೇಳಿದರೆ ರೈತರಿಗೆ ಬ್ಯಾಂಕುಗಳಿಂದ ಸಾಲ ನೀಡುತ್ತಿದ್ದೇವೆ ಎಂದು ಕೇಂದ್ರ ಸರ್ಕಾರದ ಮಂತ್ರಿ ಮಹೋದಯರುಗಳು ಹೇಳುವುದು ಸಾಮಾನ್ಯ. ಈ ವರ್ಷ ಮಳೆ ಕೈಕೊಟ್ಟಿದ್ದರಿಂದ ಈ ಮಾತನ್ನು ಹೇಳುವಂತಿಲ್ಲ. ಖಾರಿಫ ಬೆಳೆಗೆ ನೀಡುವ ಸಾಲದ ಬರಿ ಶೇ.30 ರಷ್ಟನ್ನು ಮಾತ್ರ ಅಗಸ್ಟ್‌ವರೆಗೆ ನೀಡುವುದು ಸಾಧ್ಯವಾಗಿದೆ. ನಬಾರ್ಡ ಪ್ರಕಾರ ಈ ಸಾಲಿಗೆ ಕೃಷಿ ವಲಯಕ್ಕೆ 3,25,000 ಕೋಟಿ ರೂಗಳ ಸಾಲ ನೀಡಬೇಕು. ಈವರೆಗೆ ಬರೀ 3,25,000 ಕೋಟಿ ರೂಗಳ ಸಾಲ ನೀಡುವುದು ಸಾಧ್ಯವಾಗಿದೆ. ಸಾಮನ್ಯವಾಗಿ ಖಾರಿಫ್ ಹಂಗಾಮಿನಲ್ಲಿ ಶೇ.60 ರಷ್ಟು ಸಾಲ ವಿತರಣೆಯಾಗಿರಬೇಕಿತ್ತು. ಇದರರ್ಥ ಈ ವರ್ಷ ದೇಶದ ಕೃಷಿಯ ಪರಿಸ್ಥಿತಿ ಅಲ್ಲೋಲ ಕಲ್ಲೋಲವಾಗುತ್ತದೆ. ಇಂತಹ ಪರಿಸ್ಥಿತಿ ಎದುರಿಸಲು ಸರ್ಕಾರದ ಬಳಿ ಯಾವುದೇ ಯೋಜನೆ ಇರುವಂತಿಲ್ಲ. ಗಾಯದ ಮೇಲೆ ಬರೆ ಎಂಬಂತೆ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ನೆರೆ ತಾಂಡವವಾಡಿದೆ. ಎಷ್ಟು ಜನ ರೈತರನ್ನು ಆತ್ಮಹತ್ಯೆಯ ದವಡೆಗೆ ಈ ಯುಪಿಎ ಸರ್ಕಾರ ದೂಡುತ್ತದೊ. ಅಲ್ಲವೆ? ದೇಶದಾದ್ಯಂತ ಪ್ರತಿಭಟನೆಯ ಮಹಾಪೂರ ಹರಿದು ಬರಬೇಕಿದೆ.

ಅಂಗನವಾಡಿ ಅಖಿಲ ಭಾರತ ಸಮ್ಮೇಳನ

ಪುಟ 6 ರಿಂದ

ಪ್ರಮುಖ ಹೋರಾಟಗಳು

18 ಏಪ್ರಿಲ್ 2006 ರಂದು ಹಲವಾರು ರಾಜ್ಯಗಳ ರಾಜಧಾನಿಗಳಲ್ಲಿ ಬೃಹತ್ ರ್‍ಯಾಲಿಗಳು ನಡೆದಿವೆ. 2006 ಜುಲೈ 25 ರಿಂದ ಆಗಸ್ಟ್ 3ರತನಕ 22 ರಾಜ್ಯಗಳ 15 ಸಾವಿರಕ್ಕೂ ಹೆಚ್ಚು ಅಂಗನವಾಡಿ ನೌಕರರ ಉಪವಾಸ ಮುಷ್ಕರ ನಡೆದಿದೆ. ಈ ಹೋರಾಟ ಭಾರತದ ಕಾರ್ಮಿಕ ಚಳುವಳಿಯಲ್ಲಿಯೇ ಮೈಲಿಗಲ್ಲಾದದ್ದು ಈ ಹೋರಾಟದ ನಂತರದಲ್ಲಿ ಸಂಘಟನೆ ಹಿಂದಿ ರಾಜ್ಯಗಳಲ್ಲಿಯೂ ವಿಸ್ತರಿಸಲಿಕ್ಕೆ ಸಾಧ್ಯವಾಯಿತು ಮತ್ತು ದೇಶದಲ್ಲಿಯೇ ಅತ್ಯಂತ ಪ್ರಭಾವಶಾಲಿ ಸಂಘಟನೆಯಾಗಿ ಬೆಳೆಯತೊಡಗಿದೆ.

2007 ಜುಲೈನಲ್ಲಿ 7000 ಸಾವಿರ ಜನರು ದೆಹಲಿಯಲ್ಲಿ ಬಂಧನಕ್ಕೊಳಗಾದರು. ಐಸಿಡಿಎಸ್ ಉಳಿಸಿ, ಕಾರ್ಯಕ್ರಮದ ಆಧಾರದಲ್ಲಿ ಜೆಎಂಎಸ್ ಕಿಸಾನ್ ಸಭಾ, ಕೃಷಿ ಕೂಲಿಕಾರರ ಸಂಘಟನೆ, ಸಿಐಟಿಯು ವಿನೊಟ್ಟಿಗೆ ಜಂಟಿ ಸಮಾವೇಶವನ್ನು ನಡೆಸಿ, ಕೆಲವು ರಾಜ್ಯಗಳಲ್ಲಿಯೂ ಕೂಡ ಈ ಸಮಾವೇಶಗಳನ್ನು ನಡೆಸಲಾಗಿದೆ.

ಸಂಘಟನೆ

ದೇಶದ ಆಂಧ್ರ, ಆಸ್ಸಾಂ, ಬಿಹಾರ, ಛತ್ತೀಸ್‌ಘಡ, ದೆಹಲಿ, ಗುಜರಾತ್, ಹರ್ಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ಪಾಂಡಿಚೇರಿ, ಪಂಜಾಬ್, ರಾಜಸ್ಥಾನ, ತಮಿಳುನಾಡು, ತ್ರಿಪುರಾ, ಉತ್ತರ ಪ್ರದೇಶ, ಉತ್ತರಕಾಂಡ, ಪಶ್ಚಿಮ ಬಂಗಾಳಗಳಲ್ಲಿ ಸಂಘಟನೆಯಿದೆ. 2004 ರಲ್ಲಿ 2.29,748 ಇದ್ದ ಸದಸ್ಯತ್ವ 2009 ರಲ್ಲಿ 3,87,159 ಅಂದರೆ ಶೇ.68.51 ಸದಸ್ಯತ್ವ ಹೆಚ್ಚಾಗಿದೆ. ಅದರಲ್ಲಿ ಕರ್ನಾಟಕ 4ನೇ ಸ್ಥಾನದಲ್ಲಿದೆ)

ದೇಶದಲ್ಲಿ ಅಂಗನವಾಡಿ ಕೇಂದ್ರಗಳ ಸಂಖ್ಯೆ 9,89,822. ಈ ಕೇಂದ್ರಗಳಲ್ಲಿ 19,79,644 ಅಂಗನವಾಡಿ ಕಾರ್ಯಕರ್ತೆಯರಾಗಿ ಮತ್ತು ಸಹಾಯಕಿಯರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. (ಕೆಲವು ಮಿನಿ ಅಂಗನವಾಡಿಗಳಲ್ಲಿ ಸಹಾಯಕಿ ಇರುವುದಿಲ್ಲ)

750 ಸದಸ್ಯತ್ವಕ್ಕೆ ಒಬ್ಬ ಪ್ರತಿನಿಧಿಯನ್ನು ನಿಗದಿಪಡಿಸಲಾಗಿತ್ತು. ಕರ್ನಾಟಕದಿಂದ 40 ಜನ ಪ್ರತಿನಿಧಿಗಳು ಆಯ್ಕೆಯಾಗಿದ್ದರು.

ಈ ಸಮ್ಮೇಳನದಲ್ಲಿ 23 ರಾಜ್ಯಗಳಿಂದ 535 ಕಾರ್ಯಕರ್ತೆಯರು ಮತ್ತು 35 ಸಹಾಯಕಿಯರು ಪಾಲ್ಗೊಂಡಿದ್ದರು.

ಸಮ್ಮೇಳನದಲ್ಲಿ ಐಸಿಡಿಸಿ ಯೋಜನೆಗೆ ಸಂಬಂಧಿಸಿದಂತೆ 28 ಬೇಡಿಕಾಪಟ್ಟಿಯನ್ನು ಅಂತಿಮಗೊಳಿಸಲಾಯಿತು.

ಮುಂದಿನ ಕರ್ತವ್ಯಗಳ ಭಾಗವಾಗಿ 7 ಲಕ್ಷ ಸದಸ್ಯತ್ವ, ಶಿಕ್ಷಣ ಮತ್ತು ಸಂಘಟನೆಯನ್ನು ಬೆಸೆಯುವ, ರಾಜ್ಯ ಮತ್ತು ಅಖಿಲ ಭಾರತ ಸಂಘಟನಾ ಕೇಂದ್ರಗಳನ್ನು ಬಲಿಷ್ಠಗೊಳಿಸುವುದು, ತಾಲ್ಲೂಕು ಸಮಿತಿಯ ಪ್ರಜಾಸತ್ತಾತ್ಮಕ ಕಾರ್ಯವೈಖರಿ ಅಂಗನವಾಡಿ ಸಹಾಯಕಿಯ ಸಮಸ್ಯೆಗಳು, ರಾಜ್ಯಮಟ್ಟದ ಪೂರ್ಣಾವಧಿ ಕಾರ್ಯಕರ್ತೆಯರನ್ನು ನೇಮಿಸುವುದು, ಐಸಿಡಿಎಸ್ ಉಳಿಸಲು ತೀವ್ರ ಪ್ರಚಾರಾಂದೋಲನಕ್ಕೆ ಸಂಬಂಧಿಸಿದಂತೆ ಮುಂದಿನ ಗುರಿಗಳನ್ನು ನಿಗದಿ ಮಾಡಲಾಯಿತು.

ಐಸಿಡಿಎಸ್‌ನಿಂದ ನಿರೀಕ್ಷಿತ ಉತ್ತಮ ಫಲಿತಾಂಶವನ್ನು ಪಡೆಯುವುದು ಹೇಗೆ?

ಅಂಗನವಾಡಿ ನೌಕರರಿಗೆ ಸಾಮಾಜಿಕ ಭದ್ರತೆ, ಪ್ರಜಾಸತ್ತಾತ್ಮಕ ಕಾರ್ಯವೈಖರಿ ಮತ್ತು ಐ.ಸಿ.ಡಿ.ಎಸ್ ನನ್ನು ಅಭದ್ರಗೊಳಿಸುತ್ತಿರುವ ಬಗ್ಗೆ ಆಯೋಗಗಳನ್ನು ನೇಮಕ ಮಾಡಲಾಗಿತ್ತು.

ಕೋಮುವಾದ ವಿರುದ್ಧ, ಆಹಾರ ಭದ್ರತೆಗೆ ಸಂಬಂಧಿಸಿ, ಕಾರ್ಮಿಕ ಹಕ್ಕುಗಳ ಮೇಲಿನ ಧಾಳಿ ಮತ್ತಿತರ 13 ವಿಚಾರಗಳಿಗೆ ಸಂಬಂಧಿಸಿ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮ್ಮೇಳನದ ಸಂದರ್ಭದಲ್ಲಿ 'ಅಂಗನವಾಡಿ ನೌಕರರ ಹೋರಾಟಕ್ಕೆ' ಸಂಬಂಧಿಸಿದಂತೆ 'scaring nue heights" ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭಧಲ್ಲಿ ಐಸಿಡಿಎಸ್ ಮತ್ತು ಮಾನವ ಅಭಿವೃದ್ಧಿಯ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಕಾಂ.ಪ್ರಭಾತ್ ಪಟ್ನಾಯಕ್‌ರವರು ಮುಖ್ಯ ಭಾಷಣಕಾರರು ಆಗಿದ್ದರು.

ಈ ಸಮ್ಮೇಳನದಲ್ಲಿ 67 ಜನರ ಕಾರ್ಯಕಾರಿ ಸಮಿತಿಯನ್ನು ಸರ್ವಾನುವ ತದಿಂದ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಕಾಂ.ನೀಲಿಮಾ ಮೈತ್ರಾ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ.ಹೇಮಲತಾ, ಖಜಾಂಚಿಯಾಗಿ ಕಾಂ.ಸರೋಜ ವರ್ಮಾ (ಹೆಚ್.ಪಿ) ಆಯ್ಕೆಯಾಗಿ ಕಾಂ. .ಆರ್.ಸಿಂಧು ಕಾರ್ಯದರ್ಶಿಯಾಗಿ ಆಯ್ಕೆಯಾ ರು.

ರಾಜ್ಯದಿಂದ ಕಾಂ.ಎಸ್.ವರಲಕ್ಷ್ಮಿ ಕಾರ್ಯದರ್ಶಿಯಾಗಿ, ಕಾಂ.ಶಾಂತ.ಎನ್.ಘಂಟೆ, ಕಾಂ. ಯಮುನಾ ಗಾಂವ್ಕಾರ್ ಮತ್ತು ಕಾಂ.ಸರೋಜ ಕೇಂದ್ರ ಸಮಿತಿಗೆ ಆಯ್ಕೆಯಾದರು.

ಕಾಂ.ಶಾಂತ. ಎನ್.ಘಂಟೆಯವರನ್ನೊಳಗೊಂಡಂತೆ 11 ಜನರ ಅಧ್ಯಕ್ಷೀಯ ಮಂಡಳಿ ಸಮ್ಮೇಳನದ ಕಾರ್ಯಕಲಾಪ ಗಳನ್ನು ನಡೆಸಿಕೊಟ್ಟಿತು. ಪ್ರಧಾನ ಕಾರ್ಯದರ್ಶಿಗಳ ವರದಿಯ ಮೇಲೆ ಕಾಂ.ಗೌರಮ್ಮ ಮಂಜುಳಾರಾಜ್ ಮತ್ತು ಸುಜಾತ ಬೆಳಗಾಂಕರರವರು ಮಾತನಾಡಿದರು. ಕಾಂ.ಸುನಂದಾ ಕಾರ್ಮಿಕರ ಹಕ್ಕುಗಳ ಮೇಲಿನ ದಾಳಿಗೆ ಸಂಬಂಧಿಸಿದ ನಿರ್ಣಯವನ್ನು ಮಂಡಿಸಿದರು. ಸಮ್ಮೇಳನದ ಕೊನೆಯಲ್ಲಿ we shall over come-ಗೆದ್ದೇ ಗೆಲ್ಲುವೆವು ಹಾಡಿನೊಂದಿಗೆ ಮುಂದಿನ ಸಂಘಟನಾ ಹೋರಾಟಕ್ಕೆ ಮಾನಸಿಕವಾಗಿ ಅಣಿಯಾಗುವ ಛಲ ತೊಡುತ್ತಾ ಸಮ್ಮೇಳನಕ್ಕೆ ಮುಕ್ತಾಯ ಹಾಡಲಾಯಿತು.

ಲಾಭದ ಮೇಲೆ ತೆರಿಗೆ ಕೇಳಿದ್ದಕ್ಕೆ ಪಾಶ್ಚಿಮಾತ್ಯ ರಾಯಭಾರಿಗಳ ಪ್ರತಿಭಟನೆ!

ಎರಡು ವರ್ಷಗಳ ಹಿಂದೆ ಭಾರತದ ಅತಿ ದೊಡ್ಡ ಎಫ್‌ಡಿಐ ವ್ಯವಹಾರ ಒಂದು ನಡೆಯಿತು. ವೊಡಫೋನ್ ಆಗ ಭಾರತದಲ್ಲಿ ಮೊಬೈಲ್ ಸೇವೆ ಒದಗಿಸುತ್ತಿದ್ದ ಹಚಿನ್‌ಸನ್(ಹಚ್) ಕಂಪನಿಯ ವ್ಯವಹಾರಗಳನ್ನು ವಹಿಸಿಕೊಂಡಿತು. ಭಾರತದ ತೆರಿಗೆ ನಿಯಮಗಳ ಪ್ರಕಾರ ಈ ವ್ಯವಹಾರದಲ್ಲಿ ಅದು ಗಳಿಸಿದ ಲಾಭದ ಮೇಲೆ 200ಕೋಟಿ ಡಾಲರು ತೆರಿಗೆ ಕಟ್ಟಬೇಕಾಗಿತ್ತು. ಆದರೆ ಈ ವ್ಯವಹಾರ ವಿದೇಶದಲ್ಲಿ ನಡೆದುದರಿಂದ ಹಾಗೂ ಹಚ್ ಅದಾಗಲೇ ನಮ್ಮ ದೇಶ ಬಿಟ್ಟು ಹೋಗಿದ್ದರಿಂದ ಈ ತೆರಿಗೆ ವಸೂಲಿಯ ಪ್ರಶ್ನೆಯಲ್ಲಿ ವೊಡಫೋನ್‌ನ್ನು ಭಾರತ ಸರಕಾರದ ತೆರಿಗೆ ಅಧಿಕಾರಿಗಳು ಕೇಳುತ್ತಿದ್ದಾರೆ. ಇದು ಮೊದಲು ಭಾರತ ಮತ್ತು ಬ್ರಿಟನ್ ನಡುವಿನ ವಿವಾದವಾಗಿ ಈಗ ಬ್ರಿಟನ್ ಅಲ್ಲದೆ ಇತರ ಆರು ಶ್ರೀಮಂತ ದೇಶಗಳಾದ ಅಮೆರಿಕಾ, ನೆದರ್ಲೆಂಡ್, ಸ್ಪೇನ್, ಆಸ್ಟ್ರೇಲಿಯ, ನ್ಯೂಜೀಲೆಂಡ್ ರಾಯಭಾರಿಗಳು ಮತ್ತು ಯುರೋಪಿಯನ್ ಕಮಿಶನ್ ಮುಖ್ಯಸ್ಥರು ಹಣಕಾಸು ಮಂತ್ರಿಗಳಿಗೆ 'ಪ್ರತಿಭಟನೆ' ಸಲ್ಲಿಸಿದ್ದಾರೆ. ಹೀಗೆ ಮಾಡಿದರೆ(ಭಾರತದಲ್ಲಿ ಗಿಟ್ಟಿಸಿದ ಲಾಭಗಳ ಮೇಲೆ ತೆರಿಗೆ ಕೇಳಿದರೆ) ವಿದೇಶಿ ಹೂಡಿಕೆದಾರರ ವಿಶ್ವಾಸವನ್ನು ಕಳಕೊಳ್ಳಬೇಕಾಗುತ್ತದೆ ಎಂದು ಬೆದರಿಸಲಾಗುತ್ತಿದೆ. ಜಾಗತೀಕರಣ-ಉದಾರೀಕರಣ ಎಂದರೆ ಇದೇ ತಾನೇ!

★

ಏತಕ್ಕಾಗಿ ಎನ್‌ಟಿಪಿಸಿಯ 10ಶೇ. ಶೇರು ಮಾರಾಟ?

ದೇಶದ ಸಾರ್ವಜನಿಕ ವಲಯದ 'ನವರತ್ನ'ಗಳಲ್ಲಿ ಒಂದಾದ ರಾಷ್ಟ್ರೀಯ ತಾಪ ವಿದ್ಯುತ್ ನಿಗಮ(ಎನ್‌ಟಿಪಿಸಿ)ದ 10 ಶೇ. ಶೇರುಗಳನ್ನು ಮಾರಾಟ ಮಾಡಲು ಯುಪಿಎ ಸರಕಾರ ನಿರ್ಧರಿಸಿದೆಯಂತೆ. ಈ ನಿಗಮದ ಮೀಸಲು ನಿಧಿ ಕಳೆದ ಒಂದು ವರ್ಷದಲ್ಲೇ 5000ಕೋಟಿ ರೂ.ಗಳಷ್ಟು ಹೆಚ್ಚಿ 49000ಕೋಟಿ ರೂ. ತಲುಪಿದೆ. ಅಲ್ಲದೆ 15000ಕೋಟಿ ರೂ. ನಗದು ಬ್ಯಾಂಕಿನಲ್ಲಿದೆ. ಹೀಗಿರುವಾಗ 8500ಕೋಟಿ ರೂ.ಗಳಿಗಾಗಿ ಅದರ ಶೇರುಗಳನ್ನು ಮಾರುವ ಅಗತ್ಯವಾದರೂ ಏನಿದೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಪ್ರಶ್ನಿಸಿದೆ.

ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದ ಯುಪಿಎ-1 ಸರಕಾರ ಶೇರು ಮಾರಾಟ ಪ್ರಕ್ರಿಯೆ ನಡೆಸಲು ಸಾಧ್ಯವಾಗಿರಲಿಲ್ಲ. ಈಗ 'ಜನತೆಯ ಒಡೆತನ' ಎಂಬ ಹೆಸರಲ್ಲಿ ಬಹಳಷ್ಟು ಲಾಭಗಳಿಸುತ್ತಿರುವ ಈ 'ನವರತ್ನ' ಗಳಲ್ಲೇ ಸ್ವಲ್ಪ-ಸ್ವಲ್ಪವಾಗಿ ಶೇರು ಮಾರಾಟ ನಡೆಸಿ, ಅವಕಾಶ ಸಿಕ್ಕಾಗ ಅವನ್ನು ಪೂರ್ಣವಾಗಿ ಖಾಸಗೀಕರಿಸುವ ತಂತ್ರವನ್ನು ಯುಪಿಎ-2 ಸರಕಾರ ಅನುಸರಿಸಿದೆ ಎಂದು ಸಿಐಟಿಯು ಖಂಡಿಸಿದೆ. ಅಲ್ಲದೆ ಸಾರ್ವಜನಿಕವಾಗಿ ಶೇರು ಮಾರಾಟವನ್ನು ವಿರೋಧಿಸುವ, ಆದರೆ ಸಂಪುಟದಲ್ಲಿ ಅದನ್ನು ಬೆಂಬಲಿಸುವ ಡಿಎಂಕೆ ಮತ್ತು ತೃಣಮೂಲ ಕಾಂಗ್ರೆಸ್ ಮುಂತಾದ ಆದರ ಅಂಗಪಕ್ಷಗಳ ಗೋಸುಂಬೆತನದ ನಿಲುವನ್ನೂ ಇದು ಬಯಲು ಮಾಡಿದೆ ಎಂದು ಅದು ಹೇಳಿದೆ.

★

ವಾತಾವರಣ ಬದಲಾವಣೆ ಮಾತುಕತೆಯಲ್ಲೂ ಅಮೆರಿಕ ಪರ ತಿಪ್ಪರಲಾಗದ ಪ್ರಯತ್ನ

ವಾತಾವರಣವನ್ನು ವಿಷಾನಿಲಗಳಿಂದ ಕಲುಷಿತಗೊಳಿಸುವಲ್ಲಿ ಅಭಿವೃದ್ಧಿ ಹೊಂದಿದ ದೇಶಗಳದ್ದೇ ದೊಡ್ಡ ಪಾತ್ರವಾದ್ದರಿಂದ ಅದನ್ನು ತಡೆಯುವಲ್ಲಿ ಅವುಗಳೇ ಹೆಚ್ಚಿನ ಶರತ್ತುಗಳನ್ನು ಪಾಲಿಸಬೇಕು, ಅವುಗಳ ತಪ್ಪಿಗೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ದಂಡ ತೆರುವಂತಾಗ ಬಾರದು ಎಂಬುದು ಈಗ ನಡೆಯುತ್ತಿರುವ ವಾತಾವರಣ ಬದಲಾವಣೆ ಕುರಿತ ಮಾತುಕತೆಗಳಲ್ಲಿ ಮಲಿನತೆ ತಡೆಯುವಲ್ಲಿ ಭಾರತವೂ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಿಲುವು. ಆದರೆ ಭಾರತ ಈ ನಿಲುವನ್ನು ಬಿಟ್ಟು ಅಮೆರಿಕಾ ಮತ್ತಿತರ ಅಭಿವೃದ್ಧಿ ಹೊಂದಿರುವ ದೇಶಗಳ ನಿಲುವಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ಕೇಂದ್ರ ಪರಿಸರ ಮಂತ್ರಿಗಳ ಸೂಚನೆಗೆ ದೇಶದ್ಯಂತ ವಿರೋಧ ವ್ಯಕ್ತವಾಗಿದೆ. ಭಾರತದ ಪರ ಮಾತುಕತೆಗಳಲ್ಲಿ ಭಾಗವಹಿಸುವ ನಿಯೋಗದ ಸದಸ್ಯರೊಬ್ಬರಿಂದ ರಾಜೀನಾಮೆ ನೀಡುವ ಬೆದರಿಕೆಯೂ ಬಂದಿರುವ ಹಿನ್ನೆಲೆಯಲ್ಲಿ ಯುಪಿಎ ಸರಕಾರ ಇದು ಸೂಚನೆಯಷ್ಟೇ ಸರಕಾರದ ನಿಲುವು ಅಲ್ಲ ಎಂದು ಈಗ ಸ್ಪಷ್ಟಪಡಿಸಿದೆ. ಆದರೆ ಅಭಿವೃದ್ಧಿ ಹೊಂದಿರುವ ದೇಶಗಳು ಈಗಾಗಲೆ ಈ ಸೂಚನೆಯನ್ನು ಬಾರ್ಸೆಲೋನ ಮತ್ತು ಕೋಪನ್ ಹೆಗನ್ ನಗರಗಳಲ್ಲಿ ನಡೆಯುವ ಮಾತುಕತೆಗಳಲ್ಲಿ ಬಳಸಿ ಕೊಳ್ಳುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

★

ಅಮೆರಿಕಾದಲ್ಲಿ ನಿಷೇಧ : ಭಾರತದಲ್ಲಿ ಮಾರಾಟಕ್ಕೆ ಲಂಚ


ಎರಡು ವರ್ಷಗಳ ಹಿಂದೆ ಅಮೆರಿಕಾದ ಪ್ರಖ್ಯಾತ ರಾಸಾಯನಿಕ ಕಂಪನಿ ಡವ್ ಕೆಮಿಕಲ್ಸ್ ತಮ್ಮ ದೇಶದಲ್ಲಿ ಮಕ್ಕಳಿಗೆ ಬಹಳ ಹಾನಿಕಾರಕ ಎಂದು ನಿಷೇಧಿಸಲ್ಪಟ್ಟ ಕೀಟನಾಶಕವನ್ನು ಭಾರತದಲ್ಲಿ ಮಾರಾಟ ಮಾಡಲು ಅವಕಾಶ ಮಾಡಿಕೊಡಲು ಭಾರತ ಸರಕಾರದ ಅಧಿಕಾರಿಗಳಿಗೆ ಲಂಚ ಕೊಟ್ಟಿದೆ ಎಂಬ ಆರೋಪ ಬಂದಾಗ ಈ ಬಗ್ಗೆ ಸಿಬಿಐ ತನಿಖೆ ಮಾಡಲಾಗುವುದು ಎಂದು ಭರವಸೆ ನೀಡಲಾಗಿತ್ತು. ಆದರೆ ಈ ನಿಟ್ಟಿನಲ್ಲಿ ಏನು ಮಾಡಲಾಗಿದೆ ಎಂದು ಈಗಲೂ ಬೆಳಕಿಗೆ ಬಂದಿಲ್ಲ. ಈ ನಡುವೆ ಅಮೆರಿಕಾದ ಕಂಪನಿಗಳು ಭಾರತದಲ್ಲಿ ಕಾಂಟ್ರಾಕ್ಟುಗಳನ್ನು, ವಿಶೇಷ ಸೌಲಭ್ಯಗಳನ್ನು ಪಡೆಯಲು ಭಾರತದ ಉನ್ನತ ಅಧಿಕಾರಿಗಳಿಗೆ ಲಂಚ ತಿನ್ನಿಸುತ್ತಿದ್ದಾರೆ ಎಂಬ ಬಗ್ಗೆ ಇನ್ನಷ್ಟು ಸುದ್ದಿಗಳು ಬರುತ್ತಿವೆ. ಯುಪಿಎ ಸರಕಾರ ಇವೆಲ್ಲವನ್ನು ಗಂಭೀರವಾಗಿ ಪರಿಗಣಿಸಿ, ತನಿಖೆ ನಡೆಸಿ ರಾಷ್ಟ್ರೀಯ ಹಿತಾಸಕ್ತಿಗಳ ವಿರುದ್ಧ ವಿದೇಶಿ ಕಂಪನಿಗಳಿಗೆ ವಿಶೇಷ ಅನುಕೂಲ ಕಲ್ಪಿಸುತ್ತಿರುವ ಅಧಿಕಾರಿಗಳ ವಿರುದ್ಧ ದೃಢ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

★

ಮತ್ತೆ ಟೆಲಿಕಾಂ ಹಗರಣ ಸುದ್ದಿಯಲ್ಲಿ

ಯುಪಿಎ-1 ಅಧಿಕಾರಾವಧಿಯಲ್ಲಿ ದೂರಸಂಪರ್ಕ ಇಲಾಖೆಯಲ್ಲಿ 2ಜಿ ಲೈಸೆನ್ಸ್ ಗಳ ನೀಡಿಕೆಯಲ್ಲಿ ಅವ್ಯವಹಾರ ನಡೆದಿದೆ ಎಂಬ ಬಗ್ಗೆ ಬಹಳಷ್ಟು ಚರ್ಚೆ ನಡೆದಿತ್ತು. ಈಗ ಕೇಂದ್ರ ಜಾಗ್ರತಾ ಆಯೋಗ ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಕೇಳಿರುವುದಾಗಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸಂಪರ್ಕ ಮಂತ್ರಿ ಡಿಎಂಕೆಯ ಎ.ರಾಜ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಎಐಡಿಎಂಕೆ ಮುಖಂಡರಾದ ಜಯಲಲಿತ ಆಗ್ರಹಿಸಿದ್ದಾರೆ.

ಯುಪಿಎ II ದರ್ಬಾರ್‌ನಲ್ಲಿ





ಬಿಜೆಪಿ ದರ್ಬಾರ್‌ನಲ್ಲಿ

ಸಾಮೂಹಿಕ ಮದುವೆಯೂ, ಸಿನಿಮಾ ದರ್ಶನವೂ

ಸ್ಥಳ ಗದಗ್. ಅದೊಂದು ಸಾಮೂಹಿಕ ವಿವಾಹ ಸಮಾರಂಭ. ಸಮಾರಂಭದಲ್ಲಿ ವೇದಿಕೆ ಕುರ್ಚಿ, ಇತ್ಯಾದಿ ಇರುವುದು ಸಹಜ. ಅವು ಅಲ್ಲಿದ್ದವು. ಆದರೆ ಪ್ರವೇಶ ದ್ವಾರದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿ ಶ್ರೀರಾಮುಲುರವರ ಬೃಹತ್ ಕಟೌಟ್. ಏನು ಶ್ರೀರಾಮುಲು ಇಲ್ಲಿ ಮದುವೆ ಆಗುತ್ತಾರ? ಇಲ್ಲ, ಅವರು ಮದುವೆ ಆಗುತ್ತಿಲ್ಲ. ಮದುವೆ ಮಾಡಿಸುತ್ತಿದ್ದಾರೆ. ಕಟೌಟ್ ಯಾಕೆ ಅಂತಿರಾ? ಅರೆ ಕಟೌಟ್ ನಿಲ್ಲಿಸದಿದ್ದರೆ 'ಪುಣ್ಯ' ಕಾರ್ಯದ ಪ್ರಚಾರ ಆಗುವುದು ಹೇಗೆ? ಪ್ರಚಾರ ಇಲ್ಲದೆ ರಾಜಕೀಯ, ಚುನಾವಣೆ ನಡೆಯುತ್ತವೆಯೇ?

ಇರಲಿ, ಈಗ ಅಸಲಿ ವಿಷಯ ಅಂದರೆ ಇದು. ಮಹಿಳಾ ಮತ್ತು ಮಕ್ಕಳ ಹಕ್ಕು ಆಯೋಗದ ಅಧ್ಯಕ್ಷೆ ಮೀರಾ ನಾಯಕ್ ಸಾಮೂಹಿಕ ವಿವಾಹದ ಜೋಡಿಗಳ ದಾಖಲೆ ಪರಿಶೀಲಿಸಿ ಮದುವೆಗೆ ಸಿದ್ಧವಾಗಿದ್ದ ನೂರಾರು ಜೋಡಿಗಳಲ್ಲಿ 26 ಜೋಡಿಗಳು ಅಪ್ರಾಪ್ತ ವಯಸ್ಸಿನ ಮಕ್ಕಳು ಎಂಬುದನ್ನು ಪತ್ತೆ ಹಚ್ಚಿದೆ. ಸಾಮೂಹಿಕ ವಿವಾಹ ಸಂಘಟಿಸುವವರಿಗೆ ಇದು ಗೊತ್ತಾಗಬೇಡವೆ? ಅದೆಲ್ಲಾ ಯಾಕೆ ಗೊತ್ತಾಗಬೇಕು. ಗುಂಪಲ್ಲಿ ಗೋವಿಂದ ಎಂದು ಒಂದಷ್ಟು ರಾಜಕೀಯ ಲಾಭ ಆದರೆ ಸಾಕು. ಬಾಲ್ಯ ವಿವಾಹ ಆದರೂ ಸರಿಯೇ. ಅದನ್ನು ಕಟ್ಟಿಕೊಂಡು ಮಂತ್ರಿಗಳಿಗೇನು?

ಮಂತ್ರಿಗಳು ಸಿನಿಮಾ ನೋಡಿದ್ದು ನೋಡಿದಿರಾ?

ಹಾ, ನಮ್ಮ ಗದಗ್ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಬಿ.ಶ್ರೀರಾಮುಲು ಅವರು ಮೊನ್ನೆ ಸಿನಿಮಾ ನೋಡಿದರಂತೆ. ಅದರಲ್ಲೇನು ವಿಶೇಷ ಅಂದಿರಾ? ವಿಶೇಷ ಏನೂಂತ ಯಡಿಯೂರಪ್ಪ ಹೇಳಬೇಕು. ಏಕೆಂದರೆ ಶ್ರೀರಾಮುಲು ಅವರು ಸಿನಿಮಾ ನೋಡಿದ್ದು ಪ್ರವಾಹ ಪರಿಹಾರ ಕಾಮಗಾರಿಗಳನ್ನು ಸರಿಯಾಗಿ ನಿರ್ವಹಿಸಿಲ್ಲ, ನಿರ್ಲಕ್ಷ್ಯ ತೋರಿದ್ದಾರೆ ಎಂಬ ಕಾರಣಕ್ಕೆ ರಾಜ್ಯ ಬಿಜೆಪಿ ಸರ್ಕಾರ ಅಮಾನತ್ತು ಮಾಡಿದ ಅಧಿಕಾರಿಗಳು ಹಾಗೂ ಶಿಸ್ತುಕ್ರಮವಾಗಿ ಬೇರೆಡೆಗೆ ವರ್ಗಾವಣೆ ಮಾಡಲಾದ ಗದಗ್ ಜಿಲ್ಲಾ ಜಿಲ್ಲಾಧಿಕಾರಿಗಳ ಜೊತೆ ಅಂತೆ.ಯಡಿಯೂರಪ್ಪ ಈ ಬಗ್ಗೆ ವಿಚಾರಿಸುತ್ತೇನೆ ಎಂದಿದ್ದಾರೆ.

ಯಾರಿಗೂ ಸಹಾಯ ಮಾಡಿಲ್ಲ

"ಆರಂಭವಾಗಿ ಒಂದು ವರ್ಷದಲ್ಲಿ ಕೃಷಿ ಮಿಷನ್ ಒಬ್ಬನೇ ಒಬ್ಬ ರೈತನಿಗೂ ಸಹಾಯ ಮಾಡಿಲ್ಲ. ಯಾವುದೇ ಸೌಲಭ್ಯ ರೈತರಿಗೆ ತಲುಪಿಲ್ಲ ಎಂದ ಮೇಲೆ ಅದರಲ್ಲಿ ಮುಂದುವರಿಯುವುದರಲ್ಲಿ ಅರ್ಥವೇನಿದೆ?"

ಹೀಗೆಂದು ಪ್ರಶ್ನಿಸಿರುವವರು ಯಾರು ಗೊತ್ತೆ? ರಾಜ್ಯ ಸಾವಯವ ಕೃಷಿ ಮಿಷನ್‌ಗೆ ರಾಜೀನಾಮೆ ನೀಡಿದ, ಸಾವಯವ ಕೃಷಿ ಪ್ರತಿಪಾದಕ ಹಾಗೂ ಗಾಂಧಿವಾದಿ ಎಲ್.ನಾರಾಯಣರೆಡ್ಡಿ. ಇಷ್ಟು ಹೇಳಿದ ಮೇಲೆ ಬಿಜೆಪಿ ಸರ್ಕಾರವು 180 ಕೋಟಿ ಅನುದಾನ ನೀಡಿರುವ ಸಾವಯವ ಕೃಷಿ ಮಿಷನ್ ಯೋಗ್ಯತೆ ಏನು ಅಂತ ತಿಳಿಯುತ್ತದೆ. ಅಲ್ಲವೇ?

ಈ ಕೋಟಿ ಕೋಟಿ ಹಣ ಅರಸ್ಸಿಗರ ಜೇಬಿಗೆ ಅಂತ ಹೇಳಿದ್ದು ಸುಮ್ಮನೆ ಏನಲ್ಲ. ಅಲ್ಲವೇ?


ಜಗದಗಲ

ಶರತ್‌ಚಂದ್ರ

ಹೊಂಡೂರಸ್ ಬಿಕ್ಕಟ್ಟು ಪರಿಹರಿಸಲು ಮುಂದಾದ ಬ್ರೆಜಿಲ್

ಹೊಂಡುರಸ್ ಎಂಬ ಪುಟ್ಟ ದೇಶದ ರಾಜಕೀಯ ಬಿಕ್ಕಟ್ಟು ಹೊಸ ನಾಟಕೀಯ ಮತ್ತು ನಿರ್ಣಾಯಕ ತಿರುವು ಪಡೆದಿದೆ. ಸಿ.ಐ.ಎ. (ಅಮೇರಿಕದ ಕುಖ್ಯಾತ ಗುಪ್ತಚರ ಸಂಸ್ಥೆ) ಬೆಂಬಲಿತ ಮಿಲಿಟರಿ ಹಸ್ತಕ್ಷೇಪದಿಂದ ಪದಚ್ಯುತರಾಗಿ ದೇಶ ಬಿಡಬೇಕಾದ ಚುನಾಯಿತ ಎಡ ಒಲವಿನ ಅಧ್ಯಕ್ಷ ಝೆಲಾಯ, ಇದ್ದಕಿದ್ದ ಹಾಗೆ ದೇಶದಲ್ಲಿ ಪ್ರತ್ಯಕ್ಷರಾಗಿ ಹೊಂಡುರಾಸ್‌ನಲ್ಲಿರುವ ಬ್ರೆಜಿಲ್ ದೇಶದ ರಾಯಬಾರ ಕಚೇರಿಯಲ್ಲಿ ಆಶ್ರಯ ಪಡೆದಿದ್ದಾರೆ. ಅವರು ಪದಚ್ಯುತರಾಗಿ ಮೂರು ತಿಂಗಳ ಕಾಲ ಸತತವಾಗಿ ಅವರಿಗೆ ಅಧಿಕಾರ ತಿರುಗಿ ವಹಿಸುವಂತೆ ನಡೆದ ಚಳುವಳಿ ಮುಂದುವರೆದಿದೆ. ಝೆಲಾಯ ಇರುವ ಬ್ರೆಜಿಲ್ ರಾಯಬಾರ ಕಚೇರಿಯನ್ನು ಒಂದು ಕಡೆ ಹೊಂಡುರಾಸ್ ದೇಶದ ಮಿಲಿಟರಿ ಸುತ್ತುವರೆದಿದೆ. ಇನ್ನೊಂದು ಕಡೆ ಝೆಲಾಯ ಅವರ ಪರ ಚಳುವಳಿಗಾರರು ಮಿಲಿಟರಿ ಯಾವುದೇ ಕಾರ್ಯಾಚರಣೆ ಎಸಗದಂತೆ ರಕ್ಷಣಾ ಕವಚ ಕೊಟ್ಟು ಸುತ್ತುವರೆದಿದ್ದಾರೆ.

ಕಳೆದ ಮೂರು ತಿಂಗಳುಗಳಿಂದ ಹೊಂಡುರಸ್ ಸ್ತಬ್ಧವಾಗಿದೆ. ದೇಶದ ಒಳಗೂ ಅಂತರ್‍ರಾಷ್ಟ್ರೀಯವಾಗಿಯೂ ಹಲವು ಮಧ್ಯಸ್ತಿಕೆ ಮಾತುಕತೆ ನಡೆದಿದ್ದರೂ ಬಿಕ್ಕಟ್ಟು ಮುಂದುವರೆದಿದೆ. ಮಿಲಿಟರಿ ನಾಯಕರು ಅಧಿಕಾರ ಕಸಿದು ಕೊಂಡು ದೇಶವನ್ನು ಬಲಪ್ರಯೋಗದಿಂದ ಆಳುತ್ತಿದ್ದರೂ ಜನ ಈ ಸರ್ಕಾರವನ್ನು ಮಾನ್ಯ ಮಾಡಿಲ್ಲ. ತುರ್ತು ಪರಿಸ್ಥಿತಿ ಘೋಷಿಸಿ ಹಲವು ಮೂಲಭೂತ ಹಕ್ಕುಗಳನ್ನು ಮೊಟಕು ಮಾಡಿರುವ ಮಿಲಿಟರಿ ಸರ್ಕಾರದ ಮೇಲೆ ಲ್ಯಾಟಿನ ಅಮೆರಿಕದ ದೇಶಗಳು ಸೇರಿದಂತೆ ಹಲವು ದೇಶಗಳು ನಿರ್ಬಂಧ ವಿಧಿಸಿವೆ. ಆದರೂ ಮಣಿಯದ ಮಿಲಿಟರಿ ಸರ್ಕಾರ ಬ್ರೆಜಿಲ್‌ಗೆ 'ಕೊನೆಯ ಎಚ್ಚರಿಕೆ'


ಹೊಂಡುರಸ್ ಅಧ್ಯಕ್ಷ

ಕೊಟ್ಟಿದೆ. ಅಧ್ಯಕ್ಷ ಝೆಲಾಯ ಅವರನ್ನು 'ಸರ್ಕಾರ'ಕ್ಕೆ ಒಪ್ಪಿಸಬೇಕು ಅಥವಾ ಬ್ರೆಜಿಲ್‌ನಲ್ಲಿ ರಾಜಕೀಯ ಆಶ್ರಯ ಕೊಟ್ಟು ಬ್ರೆಜಿಲ್‌ಗೆ ಸಾಗಿಸಬೇಕು. ಇದು ಎರಡನ್ನೂ ಮಾಡದಿದ್ದರೆ ಬ್ರೆಜಿಲ್ ರಾಯಬಾರ ಕಚೇರಿಗೆ ನುಗ್ಗಿ ಝೆಲಾಯ ಅವರನ್ನು 'ಸರ್ಕಾರ ಬಂಧಿಸುತ್ತದೆ ಎಂದು ಎಚ್ಚರಿಕೆ ನೀಡಿದೆ.

ಬ್ರೆಜಿಲ್ ರಾಯಬಾರ ಕಚೇರಿಯು ಬ್ರೆಜಿಲ್‌ನ ಸಾರ್ವಭೌಮ ಪ್ರದೇಶ. ಅಲ್ಲಿ ಯಾರನ್ನು ಇರಿಸಬೇಕು, ಎಷ್ಟು ಸಮಯ ಇದು ಬ್ರೆಜಿಲ್‌ನ ನಿರ್ಧಾರ. ಅಧಿಕಾರ ಕಸಿದುಕೊಂಡ ಕ್ಷಿಪ್ರಕ್ರಾಂತಿಕೋರರ ಜತೆ ತಾನು ಈ ಬಗ್ಗೆ ಮಾತನಾಡುವುದೂ ಇಲ್ಲ ಎಂದು ಬ್ರೆಜಿಲ್ ಅಧ್ಯಕ್ಷ ಲೂಲಾ ಖಾರ ಪ್ರತಿಕ್ರಿಯೆ ನೀಡಿದ್ದಾರೆ. ಇದರ ಮೊದಲು ಅಮೆರಿಕನ್ ದೇಶಗಳ ಸಂಘಟನೆ ಹೊಂಡುರಸ್ ಸದಸ್ಯತ್ವವನ್ನು ಸಸ್ಪೆಂಡ್ ಮಾಡಿದೆ.. ಹೊಂಡೂರಸ್‌ನಲ್ಲಿ ಪಿತೂರಿಕೋರರನ್ನು ಸೋಲಿಸಿ ಪ್ರಜಾಪ್ರಭುತ್ವವನ್ನು ಮರುಸ್ಥಾಪನೆ ಮಾಡುವುದು ಇಡೀ ಲ್ಯಾಟಿನ ಅಮೆರಿಕದ ದೇಶಗಳ ಪ್ರಥಮ ಆದ್ಯತೆ ಆಗಿದೆ. ಆದರ ಜಾರಿಗೆ ದೊಡ್ಡ ದೇಶವಾದ ಬ್ರೆಜಿಲ್ ನಾಯಕತ್ವ ವಹಿಸಿರುವುದು ಮಹತ್ವದ ಬೆಳವಣಿಗೆ. ಈಗಾಗಲೇ ಅಂತರ್‍ರಾಷ್ಟ್ರೀಯವಾಗಿಯೇ ತೂಕ ಇರುವ ಬ್ರೆಜಿಲ್ ದೇಶವು ಈ ಖಂಡದ ಬೆಳವಣಿಗೆಯಲ್ಲಿ ಮಧ್ಯ ಪ್ರವೇಶಿರುವುದು ಸಕಾರಾತ್ಮಕ ಬದಲಾವಣೆ. ಬ್ರೆಜಿಲ್ ಈ ನಿಟ್ಟಿನಲ್ಲಿ ಲ್ಯಾಟಿನ ಅಮೆರಿಕದ ದೇಶಗಳ ಆಶಯವನ್ನು ಪ್ರತಿನಿಧಿಸುತ್ತಿದೆ.

ಹೊಂಡುರಸ್ ಅಧ್ಯಕ್ಷರ ಮತ್ತು ಪ್ರಜಾಪ್ರಭುತ್ವ ಮರುಸ್ಥಾಪನೆ ಲ್ಯಾಟಿನ ಅಮೆರಿಕದ ದೇಶಗಳ ಒಕ್ಕೊರಲಿನ ಕೂಗು ಆಗಿದೆ.

ತಾಲಿಬಾನ್ ವಿಷಯದಲ್ಲಿ ಅಮೆರಿಕ ಆಟವಾಡುತ್ತಿದೆಯೇ?

ಇದೀಗ ಪಾಕಿಸ್ತಾನದ ಮಿಲಿಟರಿ ಅಧಿಕಾರಿಗಳನ್ನು ಬಾಧಿಸುತ್ತಿರುವ ಪ್ರಶ್ನೆ. ಪಾಕಿಸ್ತಾನ-ಅಫಘಾನಿಸ್ತಾನ ಗಡಿಯಲ್ಲಿ ತಾಲಿಬಾನ್ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವಾಗ ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ ನಡೆಸುತ್ತಿದ್ದೇವೆ ಎಂದು ಹೇಳಿಕೊಳ್ಳುವ ಅಮೆರಿಕಾ ನೇತೃತ್ವದ ನಾಟೋ ಪಡೆಗಳು ಗಡಿ ಕಾವಲು ಠಾಣೆಗಳನ್ನು ಬಿಟ್ಟುಕೊಟ್ಟು ವಾಸ್ತವವಾಗಿ ತಾಲಿಬಾನ್‌ಗಳಿಗೆ ಸಲೀಸಾಗಿ ಪಾಕಿಸ್ತಾನವನ್ನು ಪ್ರವೇಶಿಸಲು ಅವಕಾಶ ಮಾಡಿಕೊಡುತ್ತಿವೆ ಎಂದು ವರದಿಯಾಗಿದೆ. ಇದು ತಾಲಿಬಾನ್ ವಿರುದ್ಧ ಪಾಕಿಸ್ತಾನೀ ಕಾರ್ಯಾಚರಣೆಯನ್ನು ಇನ್ನಷ್ಟು ದುರ್ಗಮಗೊಳಿಸುತ್ತದೆಯಾದ್ದರಿಂದ ಅಮೆರಿಕಾ ಏಕೆ ಹೀಗೆ ಮಾಡುತ್ತಿದೆ ಎಂದು ಪಾಕಿಸ್ತಾನೀ ಸರಕಾರಕ್ಕೆ ಆಶ್ಚರ್ಯವಾಗಿದೆ. ಅಫಘಾನಿಸ್ತಾನದಲ್ಲಿನ ಕಾರ್ಯಾಚರಣೆಯಲ್ಲಿ ತಮ್ಮ ಮೇಲಿನ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಅದು ಹೀಗೆ ಮಾಡುತ್ತಿದೆಯಂತೆ. ಪಾಕಿಸ್ತಾನದ ಆಳರಸರಂತೆ ಭಯೋತ್ಪಾದನೆಯ ವಿರುದ್ಧ ಹೋರಾಟದಲ್ಲಿ ಅಮೆರಿಕಾವನ್ನೇ ನಂಬಿರುವ ನಮ್ಮ ಆಳರಸರು ಇದನ್ನು ಗಮನಿಸಬೇಕು.

ದೆಹಲಿಯಲ್ಲಿ ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಪಕ್ಷಗಳ ಸಭೆ

ಇತ್ತೀಚೆಗೆ ಸಿಪಿಐ(ಎಂ) ಪಾಲಿಟ್‌ಬ್ಯುರೋ ತನ್ನ ಸಭೆಯಲ್ಲಿ ಕೈಗೊಂಡ ಕೆಲವು ತೀರ್ಮಾನಗಳು ಹೀಗಿವೆ

ಶ್ರೀಲಂಕಾಕ್ಕೆ ಸಂಸದರ ನಿಯೋಗ ಕುರಿತು

ಶ್ರೀಲಂಕಾದ ನಿರಾಶ್ರಿತರ ಶಿಬಿರಗಳಲ್ಲಿ ವಾಸಿಸುತ್ತಿರುವ ನಿರ್ವಸಿತ ತಮಿಳು ಜನರ ಪರಿಸ್ಥಿತಿಯ ಬಗ್ಗೆ ತಿಳಿಯಲು ಸಂಸದರ ನಿಯೋಗ ತೆರಳಲಿದೆ. ವಿರೋಧ ಪಕ್ಷದ ಸಂಸದರನ್ನು ಕೈಬಿಟ್ಟು ಕೇವಲ ಆಡಳಿತ ಪಕ್ಷದ ಸಂಸದರ ನಿಯೋಗವನ್ನಷ್ಟೆ ಕಳುಹಿಸುತ್ತಿರುವ ಕ್ರಮವನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಖಂಡಿಸಿದೆ. ಶ್ರೀಲಂಕಾ ದಲ್ಲಿರುವ ಅಲ್ಪಸಂಖ್ಯಾತ ತಮಿಳರ ಕಲ್ಯಾಣಕ್ಕೆ ಸಂಬಂದಿಸಿದ ವಿಷಯವಾದ್ದರಿಂದ ಈ ವಿಷಯದಲ್ಲಿ ಭೇಧಬಾವ ಮಾಡಬಾರದೆಂದು ಅದು ಹೇಳಿದೆ.

ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಸಭೆ

ನವಂಬರ್ 2009 ರ 20-22 ರವರೆಗೆ ನವದೆಹಲಿಯಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಕಮ್ಯುನಿಷ್ಟ್ ಮತ್ತು ಕಾರ್ಮಿಕ ಪಕ್ಷಗಳ ಸಭೆ ಸಿ.ಪಿ.ಐ. (ಎಂ) ಮತ್ತು ಸಿ.ಪಿ.ಐ. ಪಕ್ಷಗಳ ಜಂಟಿ ಅತಿಥ್ಯದಲ್ಲಿ ನಡೆಯಲಿದೆ. ಈ ಸಭೆಯು ಅಂತಾರಾಷ್ಟ್ರೀಯ ಬಂಡವಾಳಶಾಹಿಯ ಆರ್ಥಿಕ ಸಂಕಷ್ಟ, ಕಾರ್ಮಿಕರು ಮತ್ತು ಜನ ಚಳುವಳಿ, ಪರ್ಯಾಯಗಳು ಮತ್ತು ಕಮ್ಯುನಿಸ್ಟ್ ಮತ್ತು ದುಡಿಯುವ ವರ್ಗದ ಜನರ ಚಳುವಳಿಯ ಪರ್ಯಾಯ ಪಾತ್ರದ ಬಗ್ಗೆ ನಡೆಯಲಿದೆ. ಜಾಗತಿಕ ಆರ್ಥಿಕ ಹಿಂಜರಿತದಂತಹ ಜಗತ್ತಿನಾದ್ಯಂತ ದುಡಿಯುವ ವರ್ಗದ ಜನರು ಹಲವಾರು ಕಷ್ಟಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ನಡೆಯುತ್ತಿರುವ ಈ ಸಭೆಯು ಮಹತ್ವವನ್ನು ಪಡೆದುಕೊಂಡಿದೆ.

ಇತ್ತೀಚೆಗೆ ನಡೆದ ಜಿ-20 ಸಮಾವೇಶದ ಘೋಷಣೆಯೂ ಸೇರಿದಂತೆ ಮುಂದುವರಿದ ದೇಶದ ಸರ್ಕಾರಗಳು ಘೋಷಿಸುತಿರುವ ಬೇಲ್ ಔಟ್ ಪ್ಯಾಕೇಜ್‌ಗಳು ಅತ್ಯಂತ ದೊಡ್ಡ ವಿಫಲತೆಯನ್ನು ಕಂಡಿದ್ದು ಜನಸಮುದಾಯವನ್ನು ರಕ್ಷಿಸುವಲ್ಲಿ ವಿಫಲವಾಗಿವೆ. ಇದನ್ನು ಧೃಡೀಕರಿಸುವಂತೆ ಇತ್ತೀಚಿಗೆ ಅಮೆರಿಕ ಸೆನ್ಸಸ್ ಬ್ಯೂರೋ ಬಿಡುಗಡೆ ಮಾಡಿದ ವರದಿಯ ಅಂಕಿ ಅಂಶಗಳು ಅಮೆರಿಕದಲ್ಲಿ ಬಡತನದ ಪ್ರಮಾಣದಲ್ಲಿ ಏರಿಕೆಯಾಗಿರುವುದನ್ನು ಬಯಲು ಮಾಡಿದೆ. ಇದು 40 ಮಿಲಿಯನ್‌ಗಿಂತಲೂ ಹೆಚ್ಚು ಜನರನ್ನು ಒಳಗೊಂಡಿದೆ ಹಾಗೂ ಕಳೆದ ಹತ್ತು ವರ್ಷಗಳಲ್ಲಿ ಅತ್ಯಂತ ಗರಿಷ್ಟ ಪ್ರಮಾಣವು ಇದಾಗಿದೆ. ಇಂತಹ ಸಂದರ್ಭದಲ್ಲಿ ನಡೆಯುತ್ತಿರುವ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಅಂತಾರಾಷ್ಟ್ರೀಯ ಸಭೆಯು ಜಾಗತಿಕ ಆರ್ಥಿಕ ಹಿಂಜರಿತದಿಂದ ಬವಣೆ ಪಡುತ್ತಿರುವ ಜನಗಳಿಗೆ ಅಗತ್ಯವಿರುವ ಪರಿಣಾಮಕಾರಿ ಕ್ರಮಗಳ ಬಗ್ಗೆ ಹಾಗೂ ಆರ್ಥಿಕ ಹಿಂಜರಿತದ ಸಮಸ್ಯೆಯಿಂದ ಜನರನ್ನು ಹೊರತರುವ ಪರ್ಯಾಯ ಮಾರ್ಗದ ಬಗ್ಗೆ ಬೆಳಕು ಚೆಲ್ಲುವ ಸಭೆಯು ಗಂಭೀರ ಚರ್ಚೆ ನಡೆಸಲಿದೆ. 87 ದೇಶಗಳ ಸುಮಾರು 111 ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಿಗೆ ಸಭೆಯ ಆಹ್ವಾನವನ್ನು ನೀಡಲಾಗಿದೆ. ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ದುಡಿಯುವ ಜನರ ಒಕ್ಕೂಟವು ಸಭೆಯ ವಿಷಯ, ಸಭೆ ನಡೆಯುವ ಸ್ಥಳ ಮತ್ತು ಯಾವ ಪಕ್ಷಗಳಿಗೆ ಆಹ್ವಾನ ನೀಡಬೇಕು ಎನ್ನುವ ಬಗ್ಗೆ ತೀರ್ಮಾನಿಸಿದೆ. 18 ದೇಶದ 19 ಪಕ್ಷಗಳ ಸುಮಾರು 24 ಪ್ರತಿನಿಧಿಗಳು ಈಗಾಗಲೇ ಸಭೆಯಲ್ಲಿ ಭಾಗವಹಿಸುವ ಬಗ್ಗೆ ಖಚಿತಪಡಿಸಿರುತ್ತಾರೆ.

.........ಬರಿದು ಮಾಡಿದ ಬೆಣ್ಣೆಹಳ್ಳ

...ಟ 5 ರಿಂದ

...ಡುಗಡ್ಡೆಯಾಗಿ ತೋರಿತು. ಸೊಕ್ಕಿನಿಂದ ಹರಿದ ...ಮಲಪ್ರಭೆ ಉಕ್ಕಿ ಹರಿದ ಬೆಣ್ಣೆಹಳ್ಳ ಒಟ್ಟು ಸೇರಿ ...ರೋಣ ತಾಲೂಕಿನ ಮೆಣಸಿಗಿ, ಗಾಡಗೋಜಿ ಹೊಳೆ ...ಮಣ್ಣೂರ ಅಮರಗೋಳ ಗ್ರಾಮಗಳನ್ನು ...ಜಲಾವೃತಗೊಳಿಸಿತು. ಎರಡು ವರ್ಷಗಳ ಹಿಂದೆ ...ರೆ ಉಂಟಾಗಿ ನೀರು ಹೊಳೆಮಣ್ಣೂರ ...ಗ್ರಾಮದೊಳಗೆ ನುಗ್ಗಿದ್ದಲ್ಲದೆ ಮನೆಗಳ ...ಮೇಲ್ಛಾವಣಿವರೆಗೂ ಏರಿತ್ತು ಎಂದರೆ ಅಪಾಯದ ...ಅಲ್ಪನೆ ಮನದಟ್ಟಾದೀತು. ಈ ವರ್ಷದ ಕುಂಭದ್ರೋಣ ...ಮಳೆಗೆ ಸಾವಿರಾರು ಮನೆಗಳು ನೆಲಕಚ್ಚಿವೆ ಮತ್ತೆ ...ಲವನ್ನು ಬೆಣ್ಣೆಹಳ್ಳದಲ್ಲಿ ನೆಲಸಮಗೊಳಿಸಿದೆ. ...ದನಕರು, ಕುರಿ ಹಾಗೂ ಮನುಷ್ಯರ ಜೀವಗಳನ್ನು ...ನುಂಗಿಹಾಕಿದೆ.

...ಸಂತ್ರಸ್ತರಿಗೆ ನೆರವು

...ತಕ್ಷಣವೆ ಧಾರವಾಡ ಜಿಲ್ಲಾಡಳಿತ ಸಂತ್ರಸ್ಥರ ...ಗೆ ಬಂದಿದೆ. ಬೋಟ್ ಮೂಲಕ ಪ್ರವಾಹದಲ್ಲಿ ಸಿಲುಕಿದವರನ್ನು ಪಾರು ಮಾಡಲಾಗಿದೆ. ಅಲ್ಲಲ್ಲಿ ಗಂಜಿ ಕೇಂದ್ರಗಳನ್ನು ತೆರೆದು ಜನರಿಗೆ ಗಂಜಿ ವ್ಯವಸ್ಥೆ ಮಾಡಿದೆ. ಬೆಳೆ ಹಾನಿ ಮತ್ತು ಆಸ್ತಿ-ಪಾಸ್ತಿ ಹಾನಿ ಸಮೀಕ್ಷೆ ಸರಿಯಾಗಿ ಆಗಬೇಕಿದೆ. ಕೇವಲ ನೆರೆಹಾವಳಿಗೆ ಸಿಕ್ಕು ಹಾಳಾದ ಬೆಳೆ ಹಾನಿ ಸಮೀಕ್ಷೆ ಮಾಡಿದರೆ ಸಾಲದು. ಭಾರಿ ಮಳೆಯಿಂದ ಜಮೀನುಗಳಲ್ಲಿ ಕೊಳೆತು ಹೋದ, ಮೊಳಕೆಯೊಡೆದು ಹಾಳಾದ ಬೆಳೆಗಳ ಸಮೀಕ್ಷೆ ಕೂಡಾ ಆಗಬೇಕು. ಅದು ಇನ್ನು ನಿಧಾನಗತಿಯಲ್ಲಿದೆ. 'ಸುಡುವ ಮನೆಯಲ್ಲಿ ಗಳ ಹಿರಿಯುವ' ಕೆಲಸವು ನಡೆಯುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ಮುಖ್ಯ ಮಂತ್ರಿಗಳಿಂದ ವೈಮಾನಿಕ ಸಮೀಕ್ಷೆ ಕೂಡಾ ಆಗಿದೆ. ಇದೆಲ್ಲದರ ಮಧ್ಯದಲ್ಲಿ ಸಂತ್ರಸ್ಥರಿಗೆ, ಬೆಳೆ ನಷ್ಟ ಅನುಭವಿಸಿದ ರೈತರಿಗೆ, ಸೂಕ್ತ ಶೀಘ್ರ ಪರಿಹಾರ ಸಿಗಬೇಕಿದೆ.

ಬೆಣ್ಣೆಹಳ್ಳ ಶಾಶ್ವತ ಪರಿಹಾರ ಅಗತ್ಯ

ಇತ್ತೀಚಿನ ವರ್ಷಗಳಲ್ಲಿ ಬೆಣ್ಣೆಹಳ್ಳ ಅಪಾಯದ ಮಟ್ಟಕ್ಕೆ ಹರಿಯಿತು ಕಾರಣ ಅದರ ಪಾತಳಿ ಕಿರಿಯದಾಗಿರುವುದು ಅದರ ಪಾತಳಿಯಲ್ಲಿ ಹೂಳು ತುಂಬಿರುವದು. ಅಲ್ಲಲ್ಲಿ ಗಿಡ ಕಂಟಿಗಳು ಬೆಳೆದು ನೀರಿನ ಹರಿವು ಸರಳವಾಗಲು ಆತಂಕ ವುಂಟಾಗುತ್ತಿದೆ. ಹಳ್ಳ ಅಗಲೀಕರಣ ವಾಗುವದು ತೀರಾ ಅಗತ್ಯ. ಯೋಜನೆಯು ರೂಪಗೊಂಡಿದ್ದು ಆಗಿದೆ, ಮೂಲೆಗುಂಪಾಗಿದ್ದು ಆಗಿದೆ. ಹಳ್ಳಕ್ಕೆ ಪ್ರವಾಹ ಬಂದಾಗಲೆಲ್ಲ ಶಾಶ್ವತ ಪರಿಹಾರದ ಮಾತುಗಳು ರಾಜಕಾರಣಿಗಳಿಂದ ಕೇಳಿ ಬರುತ್ತಿವೆ. ದಿನಕಳೆದಂತೆ ಎಲ್ಲವೂ ನೆನಪಿನಂಗಳದಿಂದ ಮಾಯವಾಗುತ್ತಿದೆ. ಬೆಣ್ಣೆ ಹಳ್ಳದ ಅಗಲೀಕರಣದ ವಿಷಯವೆ ಚರಿತ್ರಾರ್ಹ ಹೋರಾಟಕ್ಕೆ ನಾಂದಿ ಹಾಡಿದರೆ ಆಶ್ಚರ್ಯವಿಲ್ಲ.

ಗೌಡಕಿ ದರ್ಪ ತೋರಿದ ಜನಪ್ರತಿನಿಧಿ

2007ರಲ್ಲಿ ಸುರಿದ ಬಾರಿ ಮಳೆ, ನೆರೆ ಹಾವಳಿಗೆ ರೋಣ ತಾಲೂಕಿನ ಗಾಡಗೋಳಿ, ಹೊಳೆ ಮಣ್ಣೂರ ಗ್ರಾಮಗಳು ನಲುಗಿದ್ದವು ಬಡಜನರ ಬದುಕು ಬಯಲಾಗಿತ್ತು. ಇಂದಿಗೂ ಸರಕಾರ ನಿರ್ಮಿಸಿದ ಶೆಡ್‌ಗಳಲ್ಲಿ 80 ಕುಟುಂಬಗಳವಾಸ. ಆ ಕಹಿ ನೆನಪು ಇನ್ನೂ ಹಸಿ ಇರುವಾಗಲೆ ಇನ್ನೊಂದು ಪ್ರವಾಹಕ್ಕೆ ಆ ಗ್ರಾಮಗಳು ತುತ್ತಾಗಿವೆ. ಆಗ ಕೊಟ್ಟ ಭರವಸೆ ಇನ್ನೂ ಈಡೇರಿಲ್ಲ. ಈಗ ಆದ ಹಾನಿ ವೀಕ್ಷಿಸಲು ಗದಗ ಜಿಲ್ಲಾ ಉಸ್ತುವಾರಿ ಸಚಿವ ಶ್ರೀರಾಮುಲು ಆ ಗ್ರಾಮಗಳಿಗೆ ತೆರಳಿದರು. ಅವರೊಂದಿಗೆ ನರಗುಂದ ಶಾಸಕ ಸಿ.ಸಿ.ಪಾಟೀಲ ಅವರೂ ಇದ್ದರು. ಜನರು ಆಕ್ರೋಶಭರಿತರಾಗಿ ವಸತಿಗೆ ಸಂಬಂಧಿಸಿದಂತೆ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿದಾಗ ಶಾಸಕ ಪಾಟೀಲರು ನಿಮ್ಮ ಭೂಮಿ ಕೊಡತೆರೇನು ? ಎಂದು ನೊಂದ ಜೀವಿಗಳ ಮುಂದೆ ಗೌಡಕಿ ದರ್ಪ ತೋರಿ ಹುಬ್ಬೇರಿಸಿದರು. ಹಲವು ಕಡೆ ಜನಪ್ರತಿನಿಧಿಗಳು ಛೀಮಾರಿ ಹಾಕಿಸಿಕೊಂಡ ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ.

ನೆರೆಪೀಡಿತ ಪ್ರದೇಶಗಳಿಗೆ ಸಿಪಿಎಂ ನಿಯೋಗ

ಸಿಪಿಎಂ ಪಕ್ಷದ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ. ಆರ್.ಎಚ್.ಅಯಿ, ಮಹೇಶ ಪತ್ತಾರ, ಎ ಎಮ್.ಖಾನರವರನ್ನೊಳಗೊಂಡ ನಿಯೋಗ ಪ್ರವಾಹ ಪೀಡಿತ ಪ್ರದೇಶಗಳಾದ ಯಮನೂರ, ನವಲಗುಂದ, ಗುಡಿಸಾಗರ, ಬೆಣ್ಣೆಹಳ್ಳ ಬ್ರಿಡ್ಜ್ ಬಸಾಪೂರ, ಅಣ್ಣಿಗೇರಿ, ಶಿರಗುಪ್ಪ ಮುಂತಾದ ಗ್ರಾಮಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿತು. ಸಂತ್ರಸ್ಥರಿಗೆ ತಕ್ಷಣ ಪರಿಹಾರಕ್ಕಾಗಿ ಸರಕಾರವನ್ನು ಒತ್ತಾಯಿಸಲಾಯಿತು.

...ಯುದ್ಧ ಸಾರಿರುವುದು ಯಾರ ವಿರುದ್ಧ?

...ಟ 3 ರಿಂದ

ಈಗಾಗಲೇ ಆ ಪ್ರದೇಶಗಳಲ್ಲಿ ಹಿಂದುತ್ವದ ...ಹಾಗೂ ಇಸ್ಲಾಮಿಕ್ ಮೂಲಭೂತವಾದಿಗಳು ...ಕ್ರಿಯವಾಗಿರುವ ಈ ಸಂದರ್ಭವು ಸನ್ನಿವೇಶವನ್ನು ...ನ್ನಷ್ಟು ಹಾಳುಗೆಡಹುವ ಸಂಭವವಿದೆ.

ಒಟ್ಟಾರೆ ಸಂವಿಧಾನ ನ್ಯಾಯಬದ್ಧ ಆಡಳಿತಕ್ಕೆ ...ರುದ್ಧವಾಗಿ ಕೋಮುಸಾಮರಸ್ಯ ಶಾಂತಿ ...ಹಾಳುಗಡೆಹುವ ಯಾವುದೇ ಬಣ್ಣದ ಶಕ್ತಿಗಳ ...ಯತ್ನಗಳನ್ನು ವಿಫಲಗೊಳಿಸುವುದು, ನ್ಯಾಯಯುತ ...ನ್ನು ವಹಿಸುವುದು ಅತ್ಯಗತ್ಯ. ಸಂವಿಧಾನ ಕರ್ತವ್ಯ. ...ನ್ನು ಪಾಲಿಸಬೇಕಾದ ಸರ್ಕಾರ ಗೋಬೆಲ್ಸ್ ...ತತಿಯ ಮೇಲೆ ಏನು ಕ್ರಮ ಜರುಗಿಸಲಿದೆ? ...ರ, ನಿಷ್ಪಕ್ಷಪಾತ ಕ್ರಮಗಳ ಬಗ್ಗೆ ಅನುಮಾನ ...ಟ್ಟಿಸುವಂತೆ ಸರ್ಕಾರ ನಡೆದುಕೊಳ್ಳುತ್ತಿದೆ.

...ರೆ-ರಾಜಕಾರಣ

ರಾಜ್ಯದಲ್ಲಿನ ನೆರೆಹಾವಳಿಗೆ ಹೆಚ್ಚಿನ ಪರಿಹಾರ ...ದೊರಕಲೆಂದು ರಾಜ್ಯ ಸರ್ಕಾರದ ನಿಯೋಗ ...ಧಾನಿಯನ್ನು ಭೇಟಿ ಮಾಡಿ ಅಹವಾಲು ...ಲ್ಲಿಸಿರುವುದು ಸರಿಯಷ್ಟೆ. ಆಗಿರುವ ಹಾನಿ ಬಗ್ಗೆ ...ಬಾಧಿತರ ಬದುಕು ಕಟ್ಟಿಕೊಡಲು ಕೇಂದ್ರಕ್ಕೆ ಮನವರಿಕೆ ...ಮಾಡಿಕೊಡುವುದು, ಇದನ್ನು ರಾಷ್ಟ್ರೀಯ ವಿಪತ್ತೆಂದು ...ಕೇಂದ್ರ ಘೋಷಿಸಲು ಆಗ್ರಹಿಸುವುದು ...ಅತ್ಯಗತ್ಯವಾಗಿತ್ತು. ಇದಕ್ಕೆ ಎಲ್ಲರೂ ...ಒಗ್ಗೂಡಿಸಬೇಕಿತ್ತು. ಆದರೆ ವಿರೋಧ ಪಕ್ಷಗಳಾದ ...ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳು ಈ ...ನಿಯೋಗದಿಂದ ಹೊರಗುಳಿದಿದ್ದು ಜವಾಬ್ದಾರಿತ ...ವರ್ತನೆ ಎಂದು ಹೇಳಲಾಗದು. ನಿಯೋಗದಲ್ಲಿ ಸರ್ವ ...ಪಕ್ಷಗಳನ್ನೂ ಒಳಗೊಳ್ಳಲು ಮುಖ್ಯಮಂತ್ರಿಗಳ ಪ್ರಯತ್ನ ...ಮನ್ನಣಿಯದಾಗಿತ್ತು. ಈ ನಿಯೋಗದಲ್ಲಿ ಎಲ್ಲರನ್ನೂ ...ಒಳಗೊಳ್ಳಬೇಕಿತ್ತು ಎನ್ನುವಾಗಲೇ ರಾಜ್ಯದ ...ಹಿತದೃಷ್ಟಿಯಿಂದ ತಮ್ಮ ಪಾಲಿನ ಪಾತ್ರವನ್ನು ವಿರೋಧಪಕ್ಷಗಳು ನಿರ್ವಹಿಸಬೇಕಿತ್ತು. ಯಾಕೆಂದರೆ ಸರ್ವಪಕ್ಷಗಳ ನಿಯೋಗವು ಕೇಂದ್ರದ ಮೇಲೆ ಇಡೀ ರಾಜ್ಯದ ಜನತೆಯ ಆಗ್ರಹಕ್ಕೆ ಹೆಚ್ಚಿನ ಬಲ ತರುತ್ತಿತ್ತು.


ಬಿಜೆಪಿ ಸರ್ಕಾರ ಹಾಗೂ ಸಂಘ ಪರಿವಾರ ಒಂದೆಡೆ ನೆರೆಯನ್ನೇ ಬಂಡವಾಳ ಮಾಡಿಕೊಳ್ಳಲು ಪ್ರಯತ್ನಗಳನ್ನು ಮುಂದುವರಿಸಿಯೇ ಇದೆ.

ಇನ್ನೊಂದೆಡೆ ಕಾಂಗ್ರೆಸ್ ಪ್ರತ್ಯೇಕ ನಿಯೋಗವಾಗಿ ತೆರಳಲು ಸಿದ್ಧತೆ ನಡೆಸಿದೆ. ಸ್ವಯಂ ಇಚ್ಛೆಯಿಂದ ಅದರೊಟ್ಟಿಗೆ ಸೇರಿ ಪ್ರಧಾನಿ ಭೇಟಿ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇಲ್ಲೂ ಜನರ ಹಿತ ಕಾಯುವುದೇ ತನ್ನ ರಾಜಕೀಯ ಎಂದು ಬಿಂಬಿಸಲು ಅವರು ಪ್ರಯತ್ನಿಸಿದ್ದಾರೆ. ಜೆಡಿ(ಎಸ್) ಕಾಂಗ್ರೆಸ್‌ಗಳು ತಮ್ಮದೇ ರಾಜಕೀಯ ಲೆಕ್ಕಾಚಾರದಲ್ಲಿ ವರ್ತಿಸುತ್ತಿವೆ. ಬರ, ನೆರೆಯಂತಹ ಗಂಭೀರ ಸನ್ನಿವೇಶದಲ್ಲಿ ರಾಜ್ಯದ ಜನರ ಹಿತಗಳನ್ನು ತಕ್ಷಣದಲ್ಲಿ ಕಾಯುವುದೂ ಸಹ ಒಂದು ಪ್ರಮುಖ ಕರ್ತವ್ಯವೆಂಬುದನ್ನು ಕಡೆಗಣಿಸುವುದು ಸಲ್ಲದು. ಪರಿಹಾರದ ಅನುಷ್ಠಾನದಲ್ಲಿ ಸರ್ಕಾರದ ಬಗ್ಗೆ ವಿಮರ್ಶಾತ್ಮಕವಾದ, ಕಾವಲು ಕಣ್ಣಿನ ಪಾತ್ರವನ್ನು ವಿರೋಧ ಪಕ್ಷಗಳು ಒಳಗೊಂಡು ಎಲ್ಲರೂ ವಹಿಸಬೇಕು. ಈಗ ಮಾಡುತ್ತಿರುವ ರಾಜಕಾರಣ ಪರಿಹಾರ ಬಯಸಿ ಕೇಂದ್ರಕ್ಕೆ ಅಹವಾಲು ಸಲ್ಲಿಸುವಾಗ ಅಲ್ಲ. ಆದರೆ ಆಡಳಿತ ಮತ್ತು ವಿರೋಧ ಪಕ್ಷಗಳ ಇಂತಹ ರಾಜಕೀಯ ತಂತ್ರಗಾರಿಕೆಗಳು ರಾಜ್ಯದ ಹಿತಕ್ಕೆ ಅನುಗುಣವಾಗಿಲ್ಲ. ಆ ಕಾಲ್ತುಳಿತದಲ್ಲಿ ಜನತೆ ಇನ್ನಷ್ಟು ನಜ್ಜುಗುಜ್ಜಾಗುವುದು ಬೇಡ.

ಈಗಲಾದರೂ ಸರ್ಕಾರ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯವೆಸಗುವ ಹೆಚ್ಚಿನ ಹೊಣೆಗಾರಿಕೆಯನ್ನು ತೋರಬೇಕಿದೆ.

ಹಸಿವು ಹೆಚ್ಚುತ್ತಿದೆ

ಆಹಾರದ ಹಕ್ಕಿಗಾಗಿ ಆಂದೋಲನ



ಭಾರತದಲ್ಲಿ ಹಸಿವು ಹೆಚ್ಚುತ್ತಿದೆ !

- ಜಗತ್ತಿನ ಆಗಾಗ ಹಸಿವಿನಿಂದ ಬಳಲುವ ನಾಲ್ವರಲ್ಲಿ ಒಬ್ಬ ಭಾರತೀಯ
- ಹಸಿವಿನ ಸೂಚಕದಲ್ಲಿ ೮೮ ದೇಶಗಳಲ್ಲಿ ಭಾರತಕ್ಕೆ ೬೬ ನೇ ಸ್ಥಾನ, ಸಹಾರಾ ಮತ್ತು ದಕ್ಷಿಣ ಏಷ್ಯಾದ ೩೩ ಬಡ ದೇಶಗಳಿಗಿಂತಲೂ ಹಿಂದೆ (೨೨ ತೀರಾ ಬಡದೇಶಗಳು ಬಿಟ್ಟರೆ)
- ಕುಪೋಷಣೆಯಿಂದ ಬಳಲುವ ಮಕ್ಕಳ ಪ್ರಮಾಣ (ಶೇ. ೪೭) ಸುಮಾರು ಅರ್ಧದಷ್ಟು – ಸಹಾರಾದ ದೇಶಗಳ ಇಮ್ಮಡಿ, ಚೀನಾದ ಐದು ಪಟ್ಟು
- ಮಕ್ಕಳ ಮರಣ ಪ್ರಮಾಣದಲ್ಲಿ ನಮಗೆ ಯಾವತ್ತೂ ಚಿನ್ನದ ಪದಕ !

ಕರ್ನಾಟಕದಲ್ಲಿ ಹಸಿವಿನ ಪರಿಸ್ಥಿತಿ ಇನ್ನಷ್ಟು ಕೆಡುತ್ತಿದೆ !!

- ಹಸಿವಿನ ಸೂಚಕದಲ್ಲಿ ಭಾರತದ ೧೭ ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕ ೧೧ ನೇ ಸ್ಥಾನದಲ್ಲಿದೆ.
- ಅರ್ಧಕ್ಕಿಂತ ಹೆಚ್ಚು ಗ್ರಾಮೀಣ ಕರ್ನಾಟಕದ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ (ಶೇ. ೫೨.೫)
- ಏಳು ಗ್ರಾಮೀಣ ಕರ್ನಾಟಕದ ಮಕ್ಕಳಲ್ಲಿ ಆರು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ (ಶೇ. ೮೪.೩)
- ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕದ ಗ್ರಾಮೀಣ ಆಹಾರ ಅಭದ್ರತೆಯ ೭ ಸೂಚಕಗಳಲ್ಲಿ ೪ ರಲ್ಲಿ ಪರಿಸ್ಥಿತಿ ಇನ್ನಷ್ಟು ಕೆಟ್ಟಿದೆ. ೬ ಅಂಶಗಳಲ್ಲಿ ಅಖಿಲ ಭಾರತ ರ್‍ಯಾಂಕ್‌ನಲ್ಲಿ ಕೆಳಗೆ ಹೋಗಿದೆ
- ಒಟ್ಟಾರೆ ಗ್ರಾಮೀಣ ಆಹಾರ ಅಭದ್ರತೆಯ ಪರಿಸ್ಥಿತಿಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಹಿನ್ನಡೆ ಕಂಡ ದೇಶದ ಮೂರೇ ರಾಜ್ಯಗಳಲ್ಲಿ ಅತ್ಯಂತ ಹೆಚ್ಚಿನ ಹಿನ್ನಡೆ ಕಂಡ 'ಹೆಗ್ಗಳಿಕೆ' ಕರ್ನಾಟಕದ್ದು !







ಭಾರತೀಯ ಮೂಲದ ವಿಜ್ಞಾನಿಗೆ ನೊಬೆಲ್ ಪಾರಿತೋಷಕ

ರೋಗ ನಿವಾರಕಗಳ ಅವಿಷ್ಕಾರ - ಮತ್ತೊಂದು ಹೆಜ್ಜೆ

ತಮಿಳುನಾಡಿನ ಚಿದಂಬರಮ್ ಮೂಲದ ವಿಜ್ಞಾನಿ ವೆಂಕಟರಾಮನ್ ರಾಮಕೃಷ್ಣನ್‌ರವರಿಗೆ 2009 ನೇ ಸಾಲಿನ ರಸಾಯನಶಾಸ್ತ್ರಕ್ಕೆ ನೀಡುವ ನೊಬೆಲ್ ಪಾರಿತೋಷಕ ಲಭಿಸಿದೆ. ಇವರು ಸುಮಾರು ರೂ. 7 ಕೋಟಿ ಮೊತ್ತದ ಪ್ರಶಸ್ತಿಯನ್ನು ಅಮೇರಿಕಾದ ಮತ್ತೊಬ್ಬ ವಿಜ್ಞಾನಿ ಥಾಮಸ್ ಸ್ಟೀಜ್ ಮತ್ತು ಇಸ್ರೇಲಿನ ವಿಜ್ಞಾನಿ ಅಡಾ



ಯೋನಾತ್‌ರವರೊಂದಿಗೆ ಹಂಚಿಕೊಂಡಿದ್ದಾರೆ. ಪ್ರಸ್ತುತ, ವೆಂಕಿ ರಾಮಕೃಷ್ಣನ್‌ರವರು ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಮೆಡಿಕಲ್ ರಿಸರ್ಚ್ ಕೌನ್ಸಿಲ್‌ನ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ರೋಗನಿವಾರಕಗಳು ಹೇಗೆ ಜೀವಕೋಶದ ರೈಬೋಸೋಮ್‌ಗಳೊಂದಿಗೆ ಸಂಯೋಗ ಹೊಂದುತ್ತವೆ ಎಂದು ತಿಳಿಸಿಕೊಟ್ಟಿದ್ದು, ಮೂರು ಆಯಾಮದ ಮಾಡೆಲ್‌ಗಳನ್ನು ಈ ಮೂವರೂ ವಿಜ್ಞಾನಿಗಳು ರೂಪಿಸಿದ್ದಾರೆ. ಕ್ಷ-ಕಿರಣ ಕ್ರಿಸ್ಟಲೋಗ್ರಫಿ ಎಂಬ ಉಪಕರಣವನ್ನು ಬಳಸಿಕೊಂಡು ರೈಬೋಸೋಮ್‌ಗಳು ಮಾಡಲ್ಪಟ್ಟಿರುವ ಲಕ್ಷಾಂತರ ಅಣುಗಳ ಸ್ಥಾನಗಳನ್ನು ಕಂಡುಹಿಡಿದಿದ್ದಾರೆ. ಇದನ್ನು ಬಳಸಿಕೊಂಡು ಹತ್ತಲವು ರೋಗನಿವಾರಕಗಳನ್ನು ಆವಿಷ್ಕರಿಸಬಹುದಿದ್ದು, ಹಲವು ರೋಗರುಜಿನಗಳನ್ನು ತಡೆಗಟ್ಟಬಹುದಿದೆ. ಬ್ಯಾಕ್ಟೀರಿಯಾದಿಂದ ಆರಂಭಿಸಿ ಮನುಷ್ಯ ದೇಹದ ಎಲ್ಲ ಜೀವಿಗಳ ಜೀವಕೋಶಗಳಲ್ಲಿ ರೈಬೋಸೋಮ್ ಎಂಬುದು ಬಹಳ ಮುಖ್ಯ ಪಾತ್ರ ವಹಿಸುತ್ತದೆ.

ಬ್ಯಾಕ್ಟೀರಿಯಾದಂಥಹ ಸೂಕ್ಷ್ಮಜೀವಿಯ ರೈಬೋಸೋಮ್‌ನ ಅಣುಗಳ ನೀಲಿನಕ್ಷೆಯನ್ನು ಅವರ ಸಂಶೋಧನೆಯಿಂದ ತಯಾರಿಸಲು ಸಾಧ್ಯವಾಗಿದೆ. ಈ ಸಂಶೋಧನೆಯಿಂದಾಗಿ ರೈಬೋಸೋಮ್‌ನ ಆಕೃತಿ ಮತ್ತು ಕಾರ್ಯನಿರ್ವಹಣೆ ಕುರಿತು ತಿಳಿದಂತಾಗಿದೆ. ರೋಗಗಳನ್ನು ತಡೆಗಟ್ಟುವ ಸಲುವಾಗಿ ರೋಗನಿವಾರಕಗಳನ್ನು ತಯಾರಿಸಲು ಈ ಸಂಶೋಧನೆಯು ಬಲು ಉಪಕಾರಿಯಾಗಲಿದೆ. ಪ್ರತಿಯೊಂದು ಜೀವಿಯು ಸಣ್ಣಾತಿಸಣ್ಣ ಘಟಕಗಳೆಂದರೆ ಜೀವಕೋಶಗಳು. ಪ್ರತಿಯೊಂದು ಜೀವಕೋಶದಲ್ಲಿಯೂ ರೈಬೋಸೋಮ್ ಎಂಬ ಶಕ್ತಿ ತಯಾರಿಕಾ ವಸ್ತುಗಳಿರುತ್ತವೆ. ರೈಬೋಸೋಮುಗಳು ಅಮೈನೋ ಆಮ್ಲ ಎಂಬ ರಾಸಾಯನಿಕ ವಸ್ತುವಿನಿಂದಾಗಿವೆ. ಈ ರೈಬೋಸೋಮ್‌ಗಳು ಪ್ರೋಟೀನನ್ನು ತಯಾರಿಸುವ ಕಾರ್ಖಾನೆಯಂತೆ ಕೆಲಸ ಮಾಡುತ್ತವೆ. ಪ್ರತಿ ಜೀವಿಯೊಂದರಲ್ಲಿ ಲಕ್ಷಾಂತರ ತರಹದ ಪ್ರೋಟೀನುಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಉದಾಹರಣೆಗೆ: ಆಮ್ಲಜನಕ ಸಾಗಣೆ ಮಾಡುವ ಹೀಮೋಗ್ಲೋಬಿನ್, ಸ್ವಾಸ್ಥ್ಯ ಆರೋಗ್ಯದ ರೋಗನಿರೋಧತೆ, ಇನ್ಸುಲಿನ್‌ನಂಥಹ ಹಾರ್ಮೋನ್‌ಗಳು, ಇತ್ಯಾದಿ.

ವಿಜ್ಞಾನಿ ದಂಪತಿಗಳ ಮಗನಾದ ವೆಂಕಟೇಶ್ ರಾಮಕೃಷ್ಣನ್ ಜನಿಸಿದ್ದು 1952ರಲ್ಲಿ, ಬಿ.ಎಸ್ಸಿ ಕಲಿತಿದ್ದು ಬರೋಡಾ ವಿಶ್ವವಿದ್ಯಾಲಯದಲ್ಲಿ. ನಂತರ ಉನ್ನತ ವ್ಯಾಸಂಗಕ್ಕಾಗಿ ಅಮೇರಿಕಾಗೆ ಪಯಣ. ಅವರು ನೊಬೆಲ್ ಪಾರಿತೋಷಕ ಪಡೆದ ಎಂಟನೇ ಭಾರತೀಯ ಅಥವಾ ಭಾರತೀಯ ಮೂಲದ ವಿಜ್ಞಾನಿಯೆನಿಸಿದ್ದಾರೆ. ಈಗ ಅವರು ಸಂಶೋಧನೆ ನಡೆಸುತ್ತಿರುವ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ನೊಬೆಲ್ ಪಡೆದಿರುವ ಹಲವು ವಿಜ್ಞಾನಿಗಳೊಂದಿಗೆ ಸೇರಿಹೋದ ಹಿರಿಮೆ.

ಈ ಸಂಶೋಧನೆಯು ಡಾರ್ವಿನ್ ರವರ ವಿಕಾಸವಾದ ಮತ್ತು 'ಡಬಲ್ ಹೆಲಿಕ್ಸ್' ಎಂದೇ ಕರೆಯಲಾಗುವ ಡಿಎನ್‌ಎ ಆಕೃತಿಯ ಆವಿಷ್ಕಾರಗಳನ್ನು ಮತ್ತಷ್ಟು ಮುಂದೊಯ್ಯುವಲ್ಲಿ ಮುಖ್ಯ ಪಾತ್ರವಹಿಸಿದೆ ಎಂದು ಹೇಳಲಾಗಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಪಾರಿತೋಷಕ:

ಈ ವರ್ಷದ ವೈದ್ಯಕೀಯ ಕ್ಷೇತ್ರದ ನೊಬೆಲ್ ಪಾರಿತೋಷಕವು ನಿರೀಕ್ಷೆಯಂತೆ ಎಲಿಜಬೆತ್ ಬ್ಲ್ಯಾಕ್‌ಬರ್ನ್, ಗ್ರೀಡರ್ ಮತ್ತು ಸ್ಜೋಸ್ತಕ್ ರವರಿಗೆ ಸಂದಿದೆ. ಜೀವಿಗಳಲ್ಲಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವಂಶವಾಹಿನಿ ಗುಣಗಳನ್ನು ವರ್ಗಾಯಿಸುವ ಕ್ರೋಮೋಸೋಮ್‌ಗಳ ಕುರಿತಾದ ಸಂಶೋಧನೆಗೆ ಈ ಪ್ರಶಸ್ತಿ ಲಭಿಸಿದೆ. ಕೂದಲೆಳೆಗಿಂತಲೂ ಕಡಿಮೆ ಗಾತ್ರವನ್ನು ಹೊಂದಿರುವ ಕ್ರೋಮೋಸೋಮ್‌ಗಳು ಜೀವಿಯೊಂದಕ್ಕೆ ವಯಸ್ಸಾದಂತೆ, ಜೀವಿಯ ಪುನರುತ್ಪಾದನೆಯ ನಂತರ ವಿಭಜನೆಗೊಂಡರೂ ಅವು ನಾಶವಾಗದೆ ಅದ್ದೇಗೆ ಮತ್ತೊಂದು ಪೀಳಿಗೆಗೆ ವರ್ಗಾಯಿಸಲ್ಪಡುತ್ತವೆ ಎಂಬುದು ಸಂಶೋಧನೆಯಾಗಿತ್ತು. ಕ್ರೋಮೋಸೋಮ್‌ಗಳ ಎರಡೂ ತುದಿಗಳಲ್ಲಿ ನಾವು ಷೂ ಕಟ್ಟಲು ಬಳಸುವ ದಾರದ ಎರಡೂ ಬದಿಯಲ್ಲಿರುವಂತೆ ಗಟ್ಟಿಯಾಗಿ ಹಿಡಿದಿಡುವಂತಹ ವಸ್ತುವಿದ್ದು ಅದನ್ನು 'ಟೆಲೊಮೆರೆಸ್' ಎಂದು ಕರೆಯಲಾಗುತ್ತದೆ. ಅಲ್ಲದೆ ಕ್ರೋಮೋ ಸೋಮ್‌ಗಳು ವಿಭಜನೆಯಾದ ಮೇಲೂ ನಿರ್ನಾಮವಾಗದೆ ಉಳಿಯಲು ಸಾಧ್ಯವಾಗುವುದೇಕೆಂದರೆ, ಟೆಲೊಮೇರಾಸ್ ಎಂಬ ವಸ್ತುವು ಅವುಗಳು ನಿರ್ನಾಮವಾಗದೆ ನೋಡಿಕೊಳ್ಳುತ್ತದೆ. ಇದರ ಆವಿಷ್ಕಾರದಿಂದಾಗಿ ಕ್ಯಾನ್ಸರ್‌ನಂಥಹ ರೋಗಗಳನ್ನು ನಿಯಂತ್ರಿಸಿ ಚಿಕಿತ್ಸೆ ನೀಡುವ ಸಾಧ್ಯತೆಯ ಬಾಗಿಲು ತೆರೆದಂತಾಗಿದೆ.

ಈ ಮೂರೂ ವಿಜ್ಞಾನಿಗಳ ಆವಿಷ್ಕಾರವು ನಮಗೆ ಜೀವಕೋಶವನ್ನು ಅರ್ಥಮಾಡಿಕೊಳ್ಳುವಲ್ಲಿ ಒಂದು ಹೊಸ ಆಯಾಮವನ್ನೇ ನೀಡಿದ್ದು, ರೋಗಗಳ ಕುರಿತು ಹೊಸ ಬೆಳಕು ಚೆಲ್ಲಿದ್ದು, ಹೊಸ ರೋಗನಿವಾರಕಗಳನ್ನು ಕಂಡುಹಿಡಿಯುವ ಸಾಧ್ಯತೆಗಳನ್ನು ನಿರ್ಮಾಣ ಮಾಡಿದೆಯೆಂದು ನೊಬೆಲ್ ಆಯ್ಕೆ ಸಮಿತಿ ತಿಳಿಸಿದೆ.

ಭೌತಶಾಸ್ತ್ರದಲ್ಲಿ ಪಾರಿತೋಷಕ

ಆಪ್ಟಿಕಲ್ ಫೈಬರ್ ಮೂಲಕ ಬೆಳಕನ್ನು ಹರಿಸುವ ಆವಿಷ್ಕಾರವನ್ನು ಮಾಡಿದ ವಿಜ್ಞಾನಿ




ಚಾರ್ಲ್ಸ್ ಕೆ.ಕೆವೋ ರವರಿಗೆ ಈ ವರ್ಷದ ಭೌತಶಾಸ್ತ್ರ ನೊಬೆಲ್ ಪಾರಿತೋಷಕವನ್ನು ನೀಡಲಾಗಿದ್ದು, ಅತಿ ಸಣ್ಣ ಡಿಜಿಟಲ್ ಕ್ಯಾಮೆರಾ 'ಕಣ್ಣ'ನ್ನು ಕಂಡು ಹಿಡಿದ ಬಾಯ್ಲ್ಸ್ ಮತ್ತು ಸ್ಮಿತ್‌ರವರಿಗೂ ಜಂಟಿಯಾಗಿ ನೊಬೆಲ್ ಪದವಿಯನ್ನು ನೀಡಲಾಗಿದೆ. ಆಧುನಿಕ ಡಿಜಿಟಲ್ ಯುಗದಲ್ಲಿ ಸಮಾಜ, ಸಮುದಾಯಗಳ ನಡುವೆ ಒಂದು ಜಾಲವನ್ನು, ಬಂಧವನ್ನು ಏರ್ಪಡಿಸುವಲ್ಲಿ ಸಹಕಾರಿಯಾದ ಅಂತರ್ಜಾಲಕ್ಕೆ ಬೆನ್ನೆಲೆಬಾಗಿರುವುದೇನೆಂದರೆ, ಅಂತರ್ಜಾಲದ ಮೂಲಕ ಅಗಾಧ ಮಾಹಿತಿಯನ್ನು ಒಂದು ಮೂಲೆಯಿಂದ ಜಗತ್ತಿನ ಮತ್ತೊಂದು ಮೂಲೆಗೆ ಹೊತ್ತೊಯ್ಯುವ ಆವಿಷ್ಕಾರ. ಟೆಲಿಫೋನ್ ಕೇಬಲ್‌ಗಳ ಮೂಲ

ಸಾವಿರಾರು ಕಿಲೋಮೀಟರ್ ದೂರಕ

ದೂರವಾಣಿ ಕರೆ ಮಾಡಬಹುದು, ಅಪಾ

ಮಾಹಿತಿಯನ್ನು ವರ್ಗಾಯಿಸಬಹುದು. ಇದರ



ಆಪ್ಟಿಕಲ್ ಫೈಬರ್‌ಗಳ ಬಳಕೆ ಮಾಡಲಾರಂಭಿಸಿ

ಮೇಲೆ ದೂರವಾಣಿ ಕರೆ ಮತ್ತು ಮಾಹಿತಿಗಳ

ಆರಂಭದಲ್ಲಿ 100 ಕಿಲೋ ಮೀಟರ್‌ವರೆಗ

ವರ್ಗಾಯಿಸಲು ಸಾಧ್ಯವಾಯಿತು. ಅದಕ

ಮೊದಲು ಕೇವಲ ಕೂಗಳತೆಯ ದೂರಕ

ಮಾಹಿತಿ ರವಾನಿಸಲು ಸಾಧ್ಯವಿರಲಿಲ್ಲ

1960ರ ದಶಕದಲ್ಲಿ ಇದು ಸಾಧ್ಯಗೊಂಡದ

ವಿಜ್ಞಾನಿ ಕೆವೋ ರವರಿಂದ.

ಲೇಖಕಿ ಹರ್ಟ ಮುಲ್ಲರ್ ಸಾಹಿತ್ಯಕ್ಕೆ ನೊಬೆಲ್

ರೋಮೇನಿಯಾ ಮೂಲದ ಜರ್ಮ

ಲೇಖಕಿ ಹರ್ತಾ ಮುಲ್ಲರ್‌ರವರಿಗೆ

ವರ್ಷದ ಸಾಹಿತ್ಯ ನೊಬೆಲ್ ಲಭಿಸಿದ

ಹರ್ತಾ ಮುಲ್ಲರ್ ರವರು 'ತಮ್ಮದೆಲ್ಲವನ

ಕಳಕೊಂಡ ಜನತೆಯ ಕಥನ'ವನ್ನು ತ

ಸಾಹಿತ್ಯದಲ್ಲಿ ಸೆರೆಹಿಡಿದಿದ್ದಾರೆಂದು ನೊಬೆಲ್ ಆ

ಸಮಿತಿಯು ತಿಳಿಸಿದೆ.

ಆಲ್‌ಫ್ರೆಡ್ ನೊಬೆಲ್ - ಪಾರಿತೋಷಕ ಸ್ಥಾಪಕ

ನೊಬೆಲ್ ಪಾರಿತೋಷಕವನ್ನು ಡೈನಮೈಟ

ಕಂಡುಹಿಡಿದ ಸ್ವೀಡನ್ ದೇಶದ ಉದ್ಯ

ಆಲ್‌ಫ್ರೆಡ್ ನೊಬೆಲ್‌ರವರು 1895ರ

ಸ್ಥಾಪಿಸಿದರು. ಪ್ರತಿವರ್ಷ ಭೌತಶಾಸ್ತ

ರಸಾಯನಶಾಸ್ತ್ರ, ವೈದ್ಯಕೀಯ, ಸಾಹಿತ್ಯ ಮ

ಶಾಂತಿ ಗಾಗಿ ಶ್ರಮಿಸಿದವರಿಗೆ ನೀಡಲಾಗುತ್ತದ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY
OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published
at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH